ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 30 ಗುರುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

₹4

ಸಂಪುಟ: 44 | ಸಂಚಿಕೆ: 223 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಂಜನಗೂಡು ಸುತ್ತಮುತ್ತ ಮತ್ತೇ 'ಹುಲಿ' ಸಂಚಾರ

- ಮಹಿಳೆ ಕೊಂದ ಹುಲಿ ಸೆರೆ ಹಿಡಿದರೂ ವಿವಿಧೆಡೆ ಬೆಂಬಿಡದ ಹುಲಿ ಭಯ
- ಹುಲಿರಾಯನ ವಿಡಿಯೋ ವೈರಲ್
- ಮೈಸೂರು ಅರಣ್ಯಾಧಿಕಾರಿಗಳಿಂದ ಕಾರ್ಯಾಚರಣೆ ಆರಂಭ





ಮೈಸೂರು, ನ.29(ಎಂಟಿವೈ)– ಮಹಿಳೆ ಕೊಂದಿದ್ದ ಹುಲಿ ಸೆರೆಯಾಗಿದ್ದರೂ, ನಂಜನಗೂಡು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹುಲಿ ಭಯ ಇನ್ನೂ ಮನೆ ಮಾಡಿದೆ. ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಹುಲಿ ಸೆರೆಗೆ ಮೈಸೂರು ವಲಯದ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ.

ನಂಜನಗೂಡು ತಾಲೂಕಿನ ಚಿಕ್ಕಕಾನ್ಯ, ದೊಡ್ಡಕಾನ್ಯ, ಬ್ಯಾತಹಳ್ಳಿ, ಸಿಂಧುವಳ್ಳಿ ಸೇರಿದಂತೆ ಇನ್ನಿತರೆಡೆ ಹುಲಿ ಪ್ರತ್ಯಕ್ಷವಾಗಿದೆ ಎಂದು ಸ್ಥಳೀಯರು ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ದೂರನ್ನು ಗಂಭೀರವಾಗಿ ಪರಿಗಣಿಸಿದ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ. ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಹಾಗೂ ಡಿಸಿಎಫ್ ಡಾ.ಕೆ.ಎನ್.ಬಸವರಾಜು, ಎಸಿಎಫ್ ಎನ್.ಲಕ್ಷ್ಮೀಕಾಂತ ನೇತೃತ್ವದಲ್ಲಿ ಹುಲಿ ಪ್ರತ್ಯಕ್ಷವಾದ ಸ್ಥಳಗಳಿಗೆ ಅರಣ್ಯ ಸಿಬ್ಬಂದಿಗಳ ತಂಡ ಭೇಟಿ ನೀಡಿ ಪರಿಶೀಲಿಸಿತು. ಹುಲಿ ಸೆರೆಗೆ 5 ಸಿಬ್ಬಂದಿ, 30 ಥರ್ಮಲ್ ಸೆನ್ಸರ್ ಕ್ಯಾಮರಾ, 3 ಜಿಎಸ್ಎಂ ಕ್ಯಾಮರಾ, 2 ಪಿಟಿಝಡ್ ಕ್ಯಾಮರಾ, ಮೂರು ಬೋನ್ ಬಳಸಿಕೊಳ್ಳಲಾಗಿದೆ. ಹುಲಿ ಸಂಚರಿಸುತ್ತಿದೆ ಎಂಬ ಮಾಹಿತಿ ಆಧರಿಸಿ ಚಿಕ್ಕಕಾನ್ಯ, ದೊಡ್ಡಕಾನ್ಯ, ಬ್ಯಾತಹಳ್ಳಿ, ಸಿಂಧುವಳ್ಳಿ ಗ್ರಾಮಗಳಲ್ಲಿ ಕ್ಯಾಮರಾ ಟ್ರಾಪ್ ಅಳವಡಿಸಿ, ಹುಲಿ ಜಾಡು ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಚಾಲನೆ

ಕರ್ತವ್ಯದಲ್ಲಿ ಒತ್ತಡ ನಿರ್ವಹಣೆಗೆ ಕ್ರೀಡಾ ಸ್ಫೂರ್ತಿ ಅನುಕೂಲಕಾರಿ





ಮೈಸೂರು, ನ. 29(ಆರ್‌ಕೆ)– ಮೈಸೂರು ಜಿಲ್ಲಾ ಪೊಲೀಸ್ ಘಟಕದ ಮೂರು ದಿನಗಳ ವಾರ್ಷಿಕ ಕ್ರೀಡಾಕೂಟ ಇಂದಿನಿಂದ ಆರಂಭವಾಯಿತು.

ಜ್ಯೋತಿನಗರದ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಕ್ರೀಡಾಕೂಟಕ್ಕೆ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಏಕಲವ್ಯ ಪ್ರಶಸ್ತಿ ಪುರಸ್ಕೃತ ಕು. ರೀನಾ ಜಾರ್ಜ್ ಬಲೂನುಗಳನ್ನು ಹಾರಿಬಿಡುವ ಮೂಲಕ ಚಾಲನೆ ನೀಡಿದರು.

ನಂತರ ಕ್ರೀಡಾಪಟುಗಳನ್ನುದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಿಕ ವಲಯದಲ್ಲಿ ಏನೇ ಸಮಸ್ಯೆ ಬಂದರೂ, ಮೊದಲು ನಾವು ಶಿಸ್ತಿನ ಪೊಲೀಸ್ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸುತ್ತೇವೆ. ಅದೇ ರೀತಿ ಕ್ರೀಡೆಯೂ ಸಹ ಶಿಸ್ತಿಗೆ ಖ್ಯಾತಿಯಾಗಿರುವುದರಿಂದ ಪೊಲೀಸರು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಂಡು, ಕಾರ್ಯ ವೃದ್ಧಿಸಿಕೊಳ್ಳುವುದು ಒಳಿತು ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ದೇಶದ ಗಡಿ ಭಾಗದಲ್ಲಿ ಯೋಧರು ಕರ್ತವ್ಯ ನಿರ್ವಹಿಸಿದರೆ, ಪೊಲೀಸರು ದೇಶದೊಳಗೆ ಜನರ ರಕ್ಷಣೆ ಮಾಡುತ್ತಿದ್ದಾರೆ. ಕೆಲಸದ ಒತ್ತಡದಲ್ಲಿ ತಮ್ಮ ಆರೋಗ್ಯ ಮತ್ತು ವೈಯಕ್ತಿಕ ಬದುಕನ್ನು ನಿರ್ಲಕ್ಷಿಸಬಾರದು ಎಂದು ಅವರು ಸಲಹೆ ನೀಡಿದರು.

ಎಸ್ಪಿ ಸೀಮಾ ಲಾಟ್ಕರ್ ಮಾತನಾಡಿ, ಅಪರಾಧ ಪ್ರಕರಣಗಳಾದರೆ, ಕಾನೂನು–ಸುವ್ಯವಸ್ಥೆಗೆ ಭಂಗ ಉಂಟಾದರೆ ಟೀಂ ಸ್ಪಿರಿಟ್‌ನಿಂದ ಕೆಲಸ ಮಾಡುವ ಹಾಗೆ ನಿತ್ಯ ಕ್ರೀಡಾ ಚಟುವಟಿಕೆಯಲ್ಲೂ ತೊಡಗಿಸಿಕೊಂಡು ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಂಡು ಒತ್ತಡ ನಿರ್ವಹಣೆ ಸಾಮರ್ಥ್ಯ ಹೊಂದುವಂತೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಿವಿಮಾತು ಹೇಳಿದರು.

ಅಡಿಷನಲ್ ಎಸ್ಪಿ ಡಾ. ಬಿ.ಎನ್.ನಂದಿನಿ, ಜಿಲ್ಲೆಯ ಎಲ್ಲಾ ಉಪ ವಿಭಾಗಗಳ ಡಿವೈಎಸ್ಪಿಗಳು, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ, ಮೂರು ದಿನಗಳ ವಾರ್ಷಿಕ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾರೆ. ಇದೇ ವೇಳೆ ಕು. ರೀನಾ ಜಾರ್ಜ್ ಅವರಿಗೆ ಜಿಲ್ಲಾ ಪೊಲೀಸ್ ವತಿಯಿಂದ ಸನ್ಮಾನಿಸಲಾಯಿತು. ಅದಕ್ಕೂ ಮೊದಲು ಗಣ್ಯರಿಗೆ ಕ್ರೀಡಾ ಜ್ಯೋತಿಯನ್ನು ಹಸ್ತಾಂತರಿಸಲಾಯಿತು.

ಕ್ರೀಡಾಪಟುಗಳು ಇದೇ ವೇಳೆ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಮೂರು ದಿನಗಳ ಕಾಲ ನಡೆಯಲಿರುವ ಕ್ರೀಡಾಕೂಟದಲ್ಲಿ ಟ್ರ್ಯಾಕ್, ಫೀಲ್ಡ್ ರಿಲೇ ರೇಸ್, ಶಾಟ್‌ಪುಟ್, ಉದ್ದ ಜಿಗಿತ, ಎತ್ತರ ಜಿಗಿತ, ಕಬಡ್ಡಿ, ಖೋ ಖೋ, ವಾಲಿಬಾಲ್, ಫುಟ್‌ಬಾಲ್ ಸೇರಿದಂತೆ ವಿವಿಧ ಕ್ರೀಡೆಗಳು ನಡೆಯಲಿವೆ.

ಡಿಸೆಂಬರ್ 1ರಂದು ಸಂಜೆ ಕ್ರೀಡಾಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ದಕ್ಷಿಣ ವಲಯದ ಡಿಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಕ್ರೀಡಾ ಸ್ಪರ್ಧೆ ವಿಜೇತರಿಗೆ ಬಹುಮಾನ, ಟ್ರೋಫಿಯನ್ನು ವಿತರಿಸಿದರು.

ಅತಿಥಿ ಉಪನ್ಯಾಸಕರ ಮುಂದುವರೆದ ಪ್ರತಿಭಟನೆ



ಮೈಸೂರು,ನ.29(ಎಂಟಿವೈ)– ಕಾಯಂ ಮಾಡುವಂತೆ ಒತ್ತಾಯಿಸಿ ವಿವಿಧ ಕಾಲೇಜುಗಳ ಅತಿಥಿ ಉಪನ್ಯಾಸಕರು ಬುಧವಾರವೂ ಪ್ರತಿಭಟನೆ ನಡೆಸಿದರು.

ಮೈಸೂರಿನ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದ ಅತಿಥಿ ಉಪನ್ಯಾಸಕರು ವಿವಿಧ ಬೇಡಿಗಳ ಈಡೇರಿಕೆಗೆ ಒತ್ತಾಯಿಸಿದರಲ್ಲದೆ, ವಿವಿಧ ಘೋಷಣೆ ಕೂಗಿದರು. ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಂದಾಜು 12 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಕಳೆದ ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವ ಇವರುಗಳಿಗೆ ಇಂದಿಗೂ ಸೇವಾ ಭದ್ರತೆ ಇಲ್ಲದಂತಾಗಿದೆ ಎಂದು ಕಿಡಿಕಾರಿದರು.

ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಹಲವರು ಇದೀಗ ನಿವೃತ್ತಿ ಅಂಚಿನಲ್ಲಿದ್ದು, ಸೇವಾ ಭದ್ರತೆ ಇಲ್ಲದಿದ್ದರೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಹೀಗಾಗಿ ಸರ್ಕಾರ ಹಾಗೂ ಸಂಬಂಧಪಟ್ಟವರು ಈಗಲಾದರೂ ನಮ್ಮ ಸಮಸ್ಯೆಗಳ ಬಗ್ಗೆ ನಿಗಾ ವಹಿಸಿ ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಯಂ ಮಾಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಜಿ.ವಿ.ರಮೇಶ್, ಕಾರ್ಯದರ್ಶಿ ಕೆಂಪನಂಜಪ್ಪ, ಸಂಚಾಲಕ ಡಿ.ನಾಗರಾಜ್, ಪ್ರಮುಖರಾದ ಹನುಮಂತೇಶ್, ಆಶಾಲತ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಾಳೆ ಪುಟ್ಟಣ್ಣ ನೆನಪಿನಂಗಳ ಕಾರ್ಯಕ್ರಮ

ಮೈಸೂರು, ನ.29–ಅಪೂರ್ವ ಸ್ನೇಹ ಬಳಗದ ವತಿಯಿಂದ ಚಿತ್ರರಂಗದ ಚಿತ್ರಬ್ರಹ್ಮ, ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರನಿರ್ದೇಶಕ ಎಸ್.ಆರ್ ಪುಟ್ಟಣ್ಣ ಕಣಗಾಲ್ ಅವರ 90ನೇ ಜನ್ಮದಿನೋತ್ಸವದ ಅಂಗವಾಗಿ "ಪುಟ್ಟಣ್ಣ ನೆನಪಿನಂಗಳ" ಕಾರ್ಯಕ್ರಮವನ್ನು ಚಾಮುಂಡಿಪುರಂನ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಡಿ.1ರಂದು ಶುಕ್ರವಾರ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್ ತಿಳಿಸಿದ್ದಾರೆ



ಮುಖ್ಯ ಅತಿಥಿಗಳಾಗಿ ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಕೆ. ರಘುರಾಮ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ ಟಿ ಪ್ರಕಾಶ್, ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ವೈ ಡಿ ರಾಜಣ್ಣ, ನಗರಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್, ಉದ್ಯಮಿ ಜಯರಾಮ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ನಾಳೆ ನೆನಪಿನ ಅಲೆಗಳು ಲೋಕಾರ್ಪಣೆ

ಮೈಸೂರು,ನ.29–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ಸಂಯುಕ್ತವಾಗಿ ಡಿ.1ರಂದು ಬೆಳಗ್ಗೆ 10.45ಕ್ಕೆ ವಿಜಯನಗರದ ಮೊದಲ ಹಂತದಲ್ಲಿನ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಮಮತಾ ಶ್ರೀಧರ್ ಅವರ 'ನೆನಪಿನ ಅಲೆಗಳು' ಕವನ ಸಂಕಲನ ಲೋಕಾರ್ಪಣೆ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸುವರು. ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ.ಸತೀಶ್‌ಕುಮಾರ್ ಎಸ್. ಹೊಸಮನೆ ಕೃತಿ ಲೋಕಾರ್ಪಣೆ ಮಾಡುವರು. ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಕೃತಿ ಕುರಿತು ಮಾತನಾಡುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅರಸು ಮಂಡಲಿ ಅಧ್ಯಕ್ಷ ಹೆಚ್‌ಎಂಟಿ ಲಿಂಗರಾಜೇ ಅರಸ್, ವೈದ್ಯ ವಾರ್ತಾ ಪ್ರಕಾಶನದ ನಿರ್ದೇಶಕ ಡಾ. ಎಂ.ಜಿ.ಆರ್. ಅರಸ್, ಕೃತಿ ಕರ್ತೃವೂ ಆದ ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ತಿನ ಅಧ್ಯಕ್ಷೆ ಮಮತಾ ಶ್ರೀಧರ್ ಉಪಸ್ಥಿತರಿರುವರು.

ಮೈಸೂರಲ್ಲಿ ರಾಜ್ಯ ಮಟ್ಟದ ಜನಪದ–ಬೀದಿ ನಾಟಕೋತ್ಸವ



ಮೈಸೂರು, ನ. 29(ಆರ್‌ಕೆ)– ಸುವರ್ಣ ಕರ್ನಾಟಕ ಸಂಭ್ರಮಾಚರಣೆ ಅಂಗವಾಗಿ ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಬುಧವಾರ ರಾಜ್ಯ ಮಟ್ಟದ ಜನಪದ ಹಾಗೂ ಬೀದಿ ನಾಟಕೋತ್ಸವ ನಡೆಯಿತು.

ಕರ್ನಾಟಕ ಬೀದಿ ನಾಟಕ ಪರಿಷತ್, ಮಂಡ್ಯ ಜಿಲ್ಲಾ ಜಾನಪದ ಮತ್ತು ಬೀದಿ ನಾಟಕ ಕಲಾತಂಡಗಳ ಒಕ್ಕೂಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಬೀದಿ ನಾಟಕೋತ್ಸವವನ್ನು ತಬಲ ಬಾರಿಸುವ ಮೂಲಕ ಹಿರಿಯ ಕಲಾವಿದರೂ ಆದ ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್(ಜನ್ನಿ) ಉದ್ಘಾಟಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಬೀದಿ ನಾಟಕ ಕಲಾವಿದರನ್ನುದ್ದೇಶಿಸಿ ಮಾತನಾಡಿದ ಅವರು, ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಬೀದಿ ನಾಟಕ ಪ್ರದರ್ಶನ ಅತ್ಯುತ್ತಮ ಹಾಗೂ ಪರಿಣಾಮಕಾರಿ ಮಾಧ್ಯಮವಾಗಿದೆ. ಈ ಕಲಾವಿದರು ಪ್ರೇಕ್ಷಕನ ದೃಷ್ಟಿಯಿಂದ ಮನಮುಟ್ಟುವ ಹಾಗೆ ನಾಟಕ ಪ್ರದರ್ಶನ ನೀಡಿದರಷ್ಟೇ ಉದ್ದೇಶ ಸಫಲವಾಗುತ್ತದೆ ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಮಹಾನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಮೈಸೂರು ವಿವಿ ಸಂಜೆ ಕಾಲೇಜು ಎನ್‌ಎಸ್‌ಎಸ್ ಅಧಿಕಾರಿ ಡಾ.ಆರ್.ನಿಂಗರಾಜು, ಕರ್ನಾಟಕ ರಾಜ್ಯ ಒಕ್ಕೂಟದ ಮಾಜಿ ಅಧ್ಯಕ್ಷ ಪುರುಷೋತ್ತಮ್ ಪಿ.ಗೌಡ, ಮಂಡ್ಯದ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ.ವಿನಯ್‌ಕುಮಾರ್, ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಕಲಾವಿದ ಕಾರಸವಾಡಿ ಮಹದೇವು, ಕರ್ನಾಟಕ ಬೀದಿ ನಾಟಕ ಪರಿಷತ್ ಮುಖ್ಯ ಸಂಚಾಲಕ ಹೆಚ್.ಪಿ.ವೈರಮುಡಿ, ಎಸ್.ಬಸವರಾಜು, ಎನ್.ಶೇಖರ್, ಕಾತ್ಯಾಯಿನಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು, ಕೊಡಗು, ಹಾವೇರಿ, ಗದಗ, ಉತ್ತರ ಕನ್ನಡ, ಬೆಳಗಾವಿ, ವಿಜಯಪುರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ದಾವಣಗೆರೆ ಸೇರಿದಂತೆ ರಾಜ್ಯಾದ್ಯಂತ ಕಲಾತಂಡಗಳು ಬೀದಿ ನಾಟಕೋತ್ಸವ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ವಿಜೇತ ತಂಡಗಳಿಗೆ ನಗದು ಬಹುಮಾನ ಹಾಗೂ ಬೀದಿ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಕಲಾವಿದರಿಗೆ ಪ್ರಮಾಣಪತ್ರವನ್ನು ನೀಡಲಾಯಿತು.

ಚಾ.ಬೆಟ್ಟದ ನಂದಿಗೆ 18ನೇ ವರ್ಷದ ಮಹಾಭಿಷೇಕ

ಮೈಸೂರು, ನ. 29– ಬೆಟ್ಟದ ಬಳಗ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕಾರ್ತಿಕ ಮಾಸದ ಪ್ರಯುಕ್ತ ಚಾಮುಂಡಿಬೆಟ್ಟದ ನಂದಿಗೆ 18ನೇ ವರ್ಷದ ಮಹಾಭಿಷೇಕ, ಪೂಜಾ ಮಹೋತ್ಸವ ಹಾಗೂ ಪ್ರಸಾದ ವಿನಿಯೋಗವನ್ನು ಡಿ.3ರಂದು ಬೆಳಗ್ಗೆ 8 ಗಂಟೆಗೆ ಆಯೋಜಿಸಲಾಗಿದೆ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ ಮತ್ತು ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.



ಶೂಟಿಂಗ್ ವೇಳೆ ಬಿದ್ದು ಮಂಡ್ಯ ರಮೇಶ್‌ಗೆ ಗಾಯ



ಮೈಸೂರು, ನ.29(ಎಂಕೆ)– ಸಿರಿಯಲ್ ಶೂಟಿಂಗ್ ಸಂದರ್ಭದಲ್ಲಿ ಹಿರಿಯ ನಟ ಮಂಡ್ಯ ರಮೇಶ್ ತೀವ್ರ ಗಾಯಗೊಂಡಿದ್ದು, ಅವರನ್ನು ಬೆಂಗಳೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದ ಹೊರಭಾಗದಲ್ಲಿ ನ.27 ರಂದು ಸಿರಿಯಲ್ ಶೂಟಿಂಗ್ ವೇಳೆ ಮಂಡ್ಯ ರಮೇಶ್ ಕಾಲು ಜಾರಿ ಆಯಾತಪ್ಪಿ ಕೆಳಗೆ ಬಿದಿದ್ದು, ಕೈ–ಕಾಲಿಗೆ ತೀವ್ರ ಗಾಯವಾಗಿದೆ. ಕೂಡಲೇ ಅವರನ್ನು ಅಪೋಲೋ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದ್ದು, ಒಂದೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಲಿದ್ದಾರೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುವ 'ಆಸೆ' ಧಾರಾವಾಹಿಯನ್ನು ನಟ, ನಿರೂಪಕ ರಮೇಶ್ ಅರವಿಂದ್ ನಿರ್ಮಾಣ ಮಾಡುತ್ತಿದ್ದಾರೆ ಎನ್ನಲಾಗಿದೆ. ಈ ಧಾರಾವಾಹಿಯಲ್ಲಿ ಮಂಡ್ಯ ರಮೇಶ್ ನಟಿಸುತ್ತಿದ್ದಾರೆ. ಸದ್ಯ ಚಿಕಿತ್ಸೆ ಪಡೆಯುತ್ತಿರುವ ಅವರು, ನಾಳೆ(ನ.30) ಡಿಸ್ಚಾರ್ಜ್ ಆಗುವ ಸಾಧ್ಯತೆ ಇದೆ. ತಿಂಗಳಿಗೂ ಹೆಚ್ಚು ದಿನಗಳು ವಿಶ್ರಾಂತಿಯಲ್ಲಿರುವಂತೆ ವೈದ್ಯರು ತಿಳಿಸಿದ್ದಾರೆನ್ನಲಾಗಿದೆ.


ಪರೀಕ್ಷೆ ಮುಂದೂಡಿಕೆಗೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು, ನ.29(ಎಂಟಿವೈ)– ಪಠ್ಯಕ್ರಮ ಮುಗಿಯದ ಕಾರಣ ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿ ಮೈಸೂರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್ ಮುಂದೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಜೇಷನ್ ಸಂಘಟನೆ ನೇತೃತ್ವದಲ್ಲಿ ಧರಣಿ ನಡೆಸಿದ ವಿದ್ಯಾರ್ಥಿಗಳು, ಅಗತ್ಯ ಪ್ರಾಧ್ಯಾಪಕ, ಉಪನ್ಯಾಸಕರ ನೇಮಕಾತಿಗೆ ಹಾಗೂ ತರಗತಿಗಳನ್ನು ಸರಿಯಾಗಿ ನಡೆಸಲು ಕ್ರಮ ಕೈಗೊಳ್ಳಬೇಕು. ಕಾಲೇಜು ಪ್ರಾರಂಭವಾಗಿ ಒಂದು ತಿಂಗಳು ಕಳೆದರೂ ಪ್ರಾಧ್ಯಾಪಕರ ನೇಮಕವಾಗದೇ ಸರಿಯಾಗಿ ಪಾಠಗಳೂ ನಡೆಯುತ್ತಿಲ್ಲ. ತರಗತಿಗಳೇ ನಡೆಯದೇ ಪರೀಕ್ಷೆ ವೇಳಾಪಟ್ಟಿ ಪ್ರಕಟ ಮಾಡಲಾಗಿದೆ. ಬಿ.ಕಾಂ, ಬಿಬಿಎ ವಿದ್ಯಾರ್ಥಿಗಳಿಗೆ ಫೈನಾನ್ಷಿಯಲ್ ಅಕೌಂಟ್, ಫಿಸಿಕಲ್ ಎಜುಕೇಷನ್, ಎನ್ವಿರಾನ್‌ಮೆಂಟಲ್ ಸ್ಟಡೀಸ್, ಮಾರ್ಕೆಟಿಂಗ್ ಮ್ಯಾನೇಜ್ಮೆಂಟ್ ವಿಷಯಗಳಿಗೆ ಒಂದೇ ಒಂದು ತರಗತಿ ನಡೆದಿಲ್ಲ, ಉಪನ್ಯಾಸಕರನ್ನು ಕೂಡ ನೇಮಕಾತಿ ಮಾಡಿಲ್ಲ. ಒಂದು ವಾರದ ಹಿಂದೆ ಕೂಡ ಗಮನಕ್ಕೆ ತಂದರೂ ವಿಶ್ವವಿದ್ಯಾನಿಲಯ ಕ್ರಮ ಕೈಗೊಂಡಿಲ್ಲ. ಡಿಸೆಂಬರ್ 15ರಂದು ಪರೀಕ್ಷೆ ನಡೆಸುತ್ತೇವೆ ಎಂದು ಆದೇಶ ಹೊರಡಿಸಿದ್ದಾರೆ. ಇದನ್ನು ಈ ಕೂಡಲೇ ಹಿಂಪಡೆಯಬೇಕೆಂದು ಪ್ರತಿಭಟನಾನಿರತ ವಿದ್ಯಾರ್ಥಿಗಳು ಆಗ್ರಹಿಸಿದರು. ಪ್ರತಿಭಟನೆ ಸ್ಥಳಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಮತ್ತು ಕುಲಸಚಿವ ಪ್ರೊ.ಮಹದೇವನ್ ಭೇಟಿ ನೀಡಿ ಮನವಿ ಪತ್ರ ಸ್ವೀಕರಿಸಿದರು. ಪರೀಕ್ಷೆಗಳನ್ನು ಮುಂದೂಡುತ್ತೇವೆ ಹಾಗೂ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಆಶ್ವಾಸನೆ ನೀಡಿದರು. ಬಳಿಕ ವಿದ್ಯಾರ್ಥಿಗಳು ಪ್ರತಿಭಟನೆ ಹಿಂಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.11.2023 ಗುರುವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

- **ಬಿಜೆಪಿ ಕಚೇರಿ:** 536ನೇ ಕನಕದಾಸ ಜಯಂತಿ, ಉಪಸ್ಥಿತರು : ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಚಿವ ಎನ್.ಮಹೇಶ್, ಸ್ಥಳ: ಪಕ್ಷದ ಕಚೇರಿ, ಬೆಳಗ್ಗೆ 9ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ
- **ಮೈಸೂರು ವಿಶ್ವವಿದ್ಯಾನಿಲಯ, ಹಿಂದುಳಿದ ವರ್ಗಗಳ ಘಟಕ, ಸೆನೆಟ್ ಭವನ:** ಕನಕದಾಸ ಜಯಂತಿ ಆಚರಣೆ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ಸಾಹಿತಿ ಡಾ.ಚಿಕ್ಕಮಗಳೂರು ಗಣೇಶ, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ
- **ಸಹಜಾ ಪ್ರಕಾಶನ ಮತ್ತು ಬದುಕು ಟ್ರಸ್ಟ್ :** ಡಾ.ಕೆ.ಪಿ.ಮಹಾದೇವಯ್ಯ ಅವರ ಮನುಜಸ್ಮೃತಿ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಕನ್ನಡ ಪ್ರಭ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕೃತಿ ಲೋಕಾರ್ಪಣೆ: ಪ್ರಗತಿಪರ ಚಿಂತಕ ಈ. ಧನಂಜಯ ಎಲಿಯೂರು, ಕೃತಿ ಕುರಿತು ಮಾತನಾಡುವವರು: ವಿಮರ್ಶಕ ಎಸ್.ಆರ್. ವಿಜಯಶಂಕರ್, ವಿಶೇಷ ಆಹ್ವಾನಿತರು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ.ಎನ್.ಕೆ. ಲೋಲಾಕ್ಷಿ, ಉಪಸ್ಥಿತರು : ಕವಿ ಹಾಗೂ ಲೇಖಕ ಡಾ. ಕೆ.ಪಿ. ಮಹಾದೇವಯ್ಯ, ಸ್ಥಳ: ರಮಾಗೋವಿಂದ ರಂಗಮಂದಿರ, ಸುಯೋಗ್ ಆಸ್ಪತ್ರೆ ಹಿಂಭಾಗ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.
- **ಸುಮಂಗಲಿ ಸೇವಾ ಟ್ರಸ್ಟ್:** ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ಪ್ರಜಾಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ವಕೀಲ ಎಸ್.ಕೆ.ಮೋಹನ್‌ಕುಮಾರ್, ಅಧ್ಯಕ್ಷತೆ: ನಿವೃತ್ತ ಮುಖ್ಯ ಶಿಕ್ಷಕ ಡಾ.ಯೋಗೇಂದ್ರ, ಹೆಚ್.ಬಿ.ಶಂಕರಾನಂದ ಅವರ ಕೃತಿ ಬಿಡುಗಡೆ: ಸಾಹಿತಿ ಬಿ.ಪಟೇಲಪ್ಪ, ಮುಖ್ಯ ಅತಿಥಿಗಳು: ಡಾ.ಮೂರ್ತಿ, ವಿ.ಎಂ.ರಾಜು, ಸತೀಶ್ ಜವರೇಗೌಡ, ಡಾ.ಮೀನ್‌ಕೆರೆ ಆಂಜನಪ್ಪ, ಶಿವಕುಮಾರ್, ಹೆಚ್.ಡಿ.ಮಹೇಶ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ
- **ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ :** ಬೆಳಗ್ಗೆ 10.30ಕ್ಕೆ ಪ್ರಜ್ಞಾಲಾಪ, ಕರೋಕೆ ಗೀತಗಾಯನ ಸ್ಪರ್ಧೆ, ಉದ್ಘಾಟನೆ : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಸೋಸಲೆ ಎಂ. ಸಿದ್ದರಾಜು, ಮುಖ್ಯ ಅತಿಥಿಗಳು : ರಂಗ ನಿರ್ದೇಶಕ ಮೈಮ್ ರಮೇಶ್, ಮಾಜಿ ಸಿಂಡಿಕೇಟ್ ಸದಸ್ಯ ಎನ್.ಎಸ್. ಗೋಪಿನಾಥ್, ಆಮ್ ಆದ್ಮಿ ಪಾರ್ಟಿ ಜಿಲ್ಲಾಧ್ಯಕ್ಷ ರಂಗಯ್ಯ, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಅಧ್ಯಕ್ಷತೆ: ವಕೀಲರ ಸಂಘದ ಜಿಲ್ಲಾ ಕಾರ್ಯದರ್ಶಿ ಉಮೇಶ್, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ರಾಮಸ್ವಾಮಿ, ನಿವೃತ್ತ ಸಹಾಯಕ ಅಭಿಯಂತರ ಕಾಂತರಾಜು, ನಗರಪಾಲಿಕೆ ಸದಸ್ಯ ಗೋಪಿ, ಅಹಿಂದ ಜವರಪ್ಪ, ಡಾ. ಶ್ಯಾಮ್‌ಪ್ರಸಾದ್, ಸ್ಥಳ: ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ, ಕನಕದಾಸನಗರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, 6.50 ರೈತರಿಗೆ ಸಲಹೆ, 8.30 ಬದುಕು ಅಕ್ಷಯವಾಗಲಿ–ಪ್ರಾಯೋಜಿತ ಕಾರ್ಯಕ್ರಮ, 10.00 ಆರ್.ಸಿ. ವಿಜೇಶ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರ ನಾಮ–ಎಂ.ರಾಘವೇಂದ್ರ, ಜಯತೀರ್ಥ ಮೇವುಂಡಿ, 1.20 ಭಾವಗೀತೆ–ಡಾ.ಶಿಲ್ಪ ಹೆಗ್ಡೆ, 4.00 ಜನಪದ ಸಂಗೀತ, 6.50 ಕೃಷಿರಂಗ–ವಿ.ಸಿ.ಫಾರಂ ಕೃಷಿ ಮೇಳ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಡಾ.ಶಿವಕುಮಾರ್, ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಯುವವಾಣಿ, ಸಣ್ಣಕತೆ–ಮಂಗಳಕರ ಮುಖ. ಬರೆದು ಪ್ರಸ್ತುತಪಡಿಸುವವರು ಮೈಸೂರಿನ ಕುಶಲ ಎಂ., ಸ್ವರಚಿತ ಕವನವಾಚನ–ದರ್ಶನ್, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ಮಳೆ ಬಂದ ಆ ರಾತ್ರಿ", ರಚನೆ–ಆರ್.ಶ್ರೀನಾಥ್, ನಿರ್ದೇಶನ–ಉಮೇಶ್ ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

- **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ಕನ್ನಡ ಹಬ್ಬ ಮತ್ತು ಕನಕ ಜಯಂತಿ, ಅಧ್ಯಕ್ಷತೆ : ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ. ರಾಮು, ಉಪಸ್ಥಿತರು : ದೇವರಾಜು ಪಿ. ಚಿಕ್ಕಳ್ಳಿ, ಡಾ. ಬೇವಿನಳ್ಳಿ ಉಮೇಶ್, ಕೆ.ಆರ್.ಮಿಲ್ ಶಿವಣ್ಣ, ಅರವಿಂದ ಶರ್ಮ, ಶ್ರೀಮತಿ ಸುಶೀಲಾ ನಂಜಪ್ಪ, ಸ್ಥಳ:ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ.
- **ಜಿಲ್ಲಾಡಳಿತ, ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತ ಶ್ರೀ ಕನಕದಾಸರ ಜಯಂತ್ಯುತ್ಸವ ಸಮಿತಿ:** ಬೆಳಗ್ಗೆ 10ರಿಂದ ಆನಂದಕುಮಾರ್ ಕಂಬಳಿಹಾಳ ಮತ್ತು ತಂಡದಿಂದ ಕನಕ ಸಂಗೀತ ಸುಧೆ, ಬೆಳಗ್ಗೆ 11.30ಕ್ಕೆ ಶ್ರೀ ಕನಕದಾಸರ 536ನೇ ಜಯಂತಿ, ಸಾನ್ನಿಧ್ಯ: ಶ್ರೀ ಕಾಗಿನೆಲೆ ಕನಕಗುರು ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಅತಿಥಿಗಳು: ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಎಚ್. ವಿಶ್ವನಾಥ್, ಸಿ.ಎನ್.ಮಂಜೇಗೌಡ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ, ಮರಿತಿಬ್ಬೇಗೌಡ, ಅನಿಲ್‌ಕುಮಾರ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಜಿ.ಡಿ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮುಖ್ಯ ಭಾಷಣಕಾರರು ; ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಸ್ಥಳ: ಕರ್ನಾಟಕ ಕಲಾಮಂದಿರ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು– ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.
- **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಎಳೆಯರ ನೃತ್ಯ ಪ್ರತಿಭೋತ್ಸವ, ಸಂಜೆ 6.15ಕ್ಕೆ ಶ್ರೀ ಮಾತಾ ಸತ್ಸಂಗದವರಿಂದ ದೇವರನಾಮ ಗಾಯನ, ಸಂಜೆ 7ಕ್ಕೆ ನೂಪುರ ಸಂಸ್ಥೆಯ ವಿದ್ಯಾರ್ಥಿಗಳಿಂದ ಭರತನಾಟ್ಯ, ಹಿನ್ನೆಲೆ : ನಟುವಾಂಗ ಮತ್ತು ಗಾಯನ – ಪ್ರೊ. ಕೆ. ರಾಮಮೂರ್ತಿರಾವ್, ಮೃದಂಗ – ಪಂಚಮ್ ಉಪಾಧ್ಯಾಯ, ಧಾರವಾಡ, ಕೊಳಲು– ರಾಜೇಶ, ಶ್ರೀರಂಗಪಟ್ಟಣ, ವಯೋಲಿನ್– ವಿ.ಎಚ್.ಎಸ್. ತಾಂಡವಮೂರ್ತಿ, ಮೈಸೂರು, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.
- **ಮೈಸೂರು ಅಂಬಾಸಿಡರ್ಸ್ ಲಯನ್ಸ್ ಸಂಸ್ಥೆ :** ಸಾಹಿತಿ ಜಿ.ಎಲ್.ತ್ರಿಪುರಾಂತಕ ಅವರಿಗೆ ರಾಯಭಾರಿ ಕನ್ನಡ ಲೇಖಕ ಪ್ರಶಸ್ತಿ ಮತ್ತು ಲಕ್ಷ್ಮೀ ಸತೀಶ್ ಅವರಿಗೆ ರಾಯಭಾರಿ ಪ್ರಾಣಿ ದಯಾ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಲಯನ್ ಹೆಚ್.ಸಿ.ಕಾಂತರಾಜು, ಸ್ಥಳ: ಹೋಟೆಲ್ ಕಲ್ಯಾಣಿ, ವರ್ತುಲ ರಸ್ತೆ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 30 ಗುರುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 223 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಗುರುಗಳು : "ಸುಮ್ಮನೆ ಕುಳಿತರೆ ಯಾವ ಕೆಲಸವೂ ಆಗುವುದಿಲ್ಲ ಕಣಯ್ಯಾ"

ವಿದ್ಯಾರ್ಥಿ : "ಯಾಕೆ ಆಗೋಲ್ಲ ಸಾರ್. ಮೊಟ್ಟೆಯ ಮೇಲೆ ಕೋಳಿ ಸುಮ್ಮನೆ ಕುಳಿತಿರುತ್ತೆ. ಅವು ಮರಿಯಾಗಿ ಬಿಡುತ್ತವೆಯಲ್ಲಾ!"

ಮೈಸೂರು ಮಿತ್ರ

ಗುರುವಾರ, 30 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕಷ್ಟಪಟ್ಟು ದುಡಿಯುವುದರಲ್ಲಿ ಯಾವ ಅವಮಾನವೂ ಇಲ್ಲ.

–ಜಮನಾಲಾಲ್ ಬಜಾಜ್

ವೇದ ಸುಳ್ಳಾದರೂ { ತುಂಬಿ ತುಂಬಿ ಹೊಯ್ದರೂ
ಗಾದೆ ಸುಳ್ಳಾಗದು { ಹಂಬಲ ಮಾತ್ರ ಹೋಗದು

ನಿಮ್ಮ ಪತ್ರಗಳು

ಜನತಾ ದರ್ಶನ ತೋರಿಕೆಯ ಕಾರ್ಯಕ್ರಮವಾಗದಿರಲಿ

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ, ಪ್ರಥಮ ಬಾರಿಗೆ ನಡೆಸಿದ ಜನತಾ ದರ್ಶನದ ಬಗ್ಗೆ ಮಾಧ್ಯಮಗಳಲ್ಲಿ ವ್ಯಾಪಕ ವರದಿ ಪ್ರಕಟವಾಗಿದೆ. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಇಡೀ ದಿನ ಜನರ ಕುಂದುಕೊರತೆಗಳನ್ನು ವೈಯಕ್ತಿಕವಾಗಿ ಆಲಿಸಿ, ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಕೆಲವು ಸಮಸ್ಯೆಗಳ ಪರಿಹಾರಕ್ಕಾಗಿ ಸ್ಥಳದಲ್ಲೇ ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿದರೆಂದು ಹೇಳಲಾಗಿದೆ. ಮುಖ್ಯಮಂತ್ರಿಗಳು 3500ಕ್ಕೂ ಹೆಚ್ಚು ಅಹವಾಲುಗಳನ್ನು ಸ್ವೀಕರಿಸಿದ್ದು ಸಹ ಒಂದು ದಾಖಲೆಯಾಗಿದೆ.

ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಈ ಸರ್ಕಸ್ ಮತದಾರರ ಅನುಕಂಪವನ್ನು ಗಳಿಸಲು ಹೂಡಿದ ತಂತ್ರ ಎಂದು ವಿರೋಧ ಪಕ್ಷಗಳು ಟೀಕೆ ಮಾಡಿದರೂ ಸಹ, ಮುಖ್ಯಮಂತ್ರಿಗಳ ಕಾಳಜಿ ಮೆಚ್ಚತಕ್ಕದ್ದು. ಜನತಾ ದರ್ಶನಕ್ಕೆ ಶತ ಶತಮಾನಗಳ ಇತಿಹಾಸವಿದೆ. ಹಿಂದೆಲ್ಲಾ ರಾಜ ಮಹಾರಾಜರು ಗುಪ್ತ ವೇಷದಲ್ಲಿ ತಮ್ಮ ರಾಜ್ಯದಲ್ಲಿ ಇರಬಹುದಾದ ಸಮಸ್ಯೆಗಳನ್ನು ಖುದ್ದಾಗಿ ಅರಿತು ಅವುಗಳನ್ನು ಪರಿಹರಿಸುತ್ತಿದ್ದರು. ನಮ್ಮ ರಾಜ್ಯದಲ್ಲಿ ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜನತಾ ದರ್ಶನ ಪ್ರಾರಂಭವಾಗಿ, ಈಗಲೂ ಸಹ ಮುಂದುವರೆದಿದೆ.

ಆದರೆ, ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯವಾಗಿಯೇ ಬಗೆಹರಿಸುವುದು ಒಳ್ಳೆಯದು. ಇಂತಹ ಕೆಲಸಗಳನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸುವುದು ಕೂಡ ಒಳ್ಳೆಯ ಕ್ರಮವೇ. ಆದರೆ, ಸರ್ಕಾರದ ಮುಖ್ಯಸ್ಥರಾದವರಿಗೆ, ಜನರ ಸಮಸ್ಯೆಗಳೇನು ಎಂಬುದು ನೇರವಾಗಿ ತಿಳಿದರೆ, ಆಡಳಿತ ವ್ಯವಸ್ಥೆಯ ಲೋಪದೋಷಗಳು ಅವರಿಗೆ ಗೊತ್ತಾಗುತ್ತದೆ. ಅದಕ್ಕೆ ಪರಿಣಾಮಕಾರಿಯಾದ ಕ್ರಮಗಳನ್ನು ಅವರು ಕೈಗೊಂಡು ಆಡಳಿತ ವ್ಯವಸ್ಥೆಯನ್ನು ಸುಧಾರಿಸಬಹುದು. ಒಟ್ಟಿನಲ್ಲಿ ಜನತಾ ದರ್ಶನ ಒಂದು ಉತ್ತಮ ರೀತಿಯ ಜನ ಸಂಪರ್ಕ ಕಾರ್ಯಕ್ರಮ ಎಂದು ಹೇಳಬಹುದು. ಇದು ತೋರಿಕೆಯ ಕಾರ್ಯಕ್ರಮವಾಗದಿದ್ದರೆ ಸಾಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಧು ಬಂಗಾರಪ್ಪ ಕ್ಷಮೆ ಯಾಚಿಸಲಿ

ಮಾನ್ಯರೆ,

ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರ CBI ಪ್ರಕರಣವನ್ನು ಸರ್ಕಾರ ವಾಪಸ್ ಪಡೆಯಲು ನಿರ್ಧರಿಸಿರುವುದು, ಅದರ ಬಗ್ಗೆ ಪರ –ವಿರೋಧದ ಚರ್ಚೆ ಮುಂದುವರೆಯುತ್ತಿರುವಾಗಲೇ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉದ್ಧಟತನದ ಮಾತನಾಡಿ ರಾಜ್ಯದ ಜನತೆಯನ್ನು, ಮತದಾರರನ್ನು ಅವಮಾನಿಸಿದ್ದಾರೆ. ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಕ್ಯಾಬಿನೆಟ್‌ನಲ್ಲಿ ಇಂತಹ ವಿಷಯದ ನಿರ್ಧಾರ ತೆಗೆದುಕೊಳ್ಳುವುದು ಅದೂ ಭ್ರಷ್ಟಾಚಾರದ ವಿಚಾರದಲ್ಲಿ ಸರಿಯೇ ಎಂಬ ಪತ್ರಕರ್ತರೊಬ್ಬರ ಪ್ರಶ್ನೆಗೆ..ಉತ್ತರಿಸುತ್ತಾ ಅವರು ಯಾಕ್ರೀ ಪುಕ್ಸಟ್ಟೆ ಕರೆಂಟ್, ಗೃಹಲಕ್ಷ್ಮಿ ಹಾಗೂ ಇತರ ಯೋಜನೆಗೂ ಕ್ಯಾಬಿನೆಟ್ ಅಲ್ವಾ ಒಪ್ಪಿಗೆ ಕೊಟ್ಟಿದ್ದು ಎನ್ನುವ ಮೂಲಕ ರಾಜ್ಯದ ಮತದಾರರನ್ನು ಭಿಕ್ಷುಕರಂತೆ ಪರಿಗಣಿಸಿರುವುದು ಖಂಡನೀಯ. ಸ್ವಾಮಿ ಮಧು ಬಂಗಾರಪ್ಪನವರೇ ನಿಮ್ಮ ಚುನಾವಣಾ ಘೋಷಣೆ ಜಾರಿಗೆ ತಂದಿದ್ದೀರಿ ವಿನಹ ಇದರಲ್ಲಿ ಬೇರೆ ವಿಶೇಷ ವೇನಿಲ್ಲ. ಮಾತಾಡುವಾಗ ತಾವು ಒಬ್ಬ ಸಚಿವರೆಂಬ ಕನಿಷ್ಠ ಪ್ರಜ್ಞೆ ಇರಲಿ. ಇಲ್ಲದಿದ್ದರೆ ದುರಹಂಕಾರಕ್ಕೆ ಪ್ರತಿಫಲ ದೊರೆಯುವ ದಿನ ದೂರವಿಲ್ಲ. ಎಚ್ಚರವಿರಲಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ತೀರ್ಪಿಗೆ ವಿರುದ್ಧ ಸಿಡಿದ ಸಿಡಿಮದ್ದು

ಮಾನ್ಯರೆ,

ಮಾನವ ಕುಲಕ್ಕೆ ಹಾಗೂ ಪ್ರಾಣಿ ಸಂಕುಲಕ್ಕೆ ಮಾರಕವಾದ ಅಪಾಯಕಾರಿ ಸಿಡಿಮದ್ದು, ಪಟಾಕಿಗಳನ್ನು ಮಾರುವಂತಿಲ್ಲ ಮತ್ತು ಹೊಡೆಯುವಂತಿಲ್ಲ ಎಂಬ ಆದೇಶವನ್ನು ಸುಪ್ರೀಂ ಕೋರ್ಟ್ ನೀಡಿದ್ದು ಯಾರಿಗಾಗಿ.

ಜಗತ್ತಿನ ಜನರ ಒಳಿತಿಗಾಗಿ ಎನ್ನುವುದನ್ನು ಮರೆತಿದ್ದೇಕೆ? ರಸ್ತೆ ರಸ್ತೆಗಳಲ್ಲಿ ಪಟಾಕಿಗಳನ್ನು ಸಿಡಿಸಿ, ಎಲ್ಲರ ಆರೋಗ್ಯ ಹದಗೆಡುವುದಕ್ಕೆ ಕಾರಣರಾಗಿ, ತತಕ್ಷಣ ಸಿಡಿಯುವ ಸಿಡಿಮದ್ದಿನಿಂದ ವಾಹನ ಸವಾರರ ಏಕಾಗ್ರತೆಯನ್ನು ದಿಕ್ಕಾಪಾಲಾಗುವಂತೆ ಮಾಡಿ ಅವರಲ್ಲಿ ಗಾಬರಿ ಹುಟ್ಟಿಸುವ ಕೆಲಸ ಮಾಡುವುದು ಸರಿಯೇ?

ಹಬ್ಬಗಳು ನಮ್ಮೆಲ್ಲರಲ್ಲಿ ಉತ್ತಮ ಸಂಬಂಧ, ಸಹೋದರತ್ವ, ಏಕತೆ, ಒಬ್ಬರಿಗೊಬ್ಬರು ಒಟ್ಟಾಗಿ ನಾವೆಲ್ಲರೂ ಅನ್ಯೋನ್ಯತೆಯಿಂದ ಇದ್ದೇವೆ ಎನ್ನುವುದನ್ನು ಎತ್ತಿ ತೋರಿಸುವುದಾಗಿದೆ. ನಮ್ಮಲ್ಲಿರುವ ಕೆಲವೊಂದು ಮೌಲ್ಯಗಳನ್ನು ದೂರ ಮಾಡಿಕೊಂಡರೆ ನಾವೆಲ್ಲರೂ ಒಟ್ಟಾಗಿ ಆಚರಿಸುವ ಹಬ್ಬಗಳಿಗೆ ಖಂಡಿತವಾಗಿಯೂ ಅರ್ಥ ಸಿಗುವುದು ಗ್ಯಾರಂಟಿ.

– ಹುಣಸೂರು ಕಾಳಿಂಗಚಾರ್, ಕುಂಬಾರಕೊಪ್ಪಲು, ಮೈಸೂರು.

ಸಾರ್ವಜನಿಕ ಸ್ಥಳಗಳಲ್ಲಿ ಗುಟ್ಕ, ಪಾನ್ ಪರಾಗ್, ಹನ್ಸ್, ಮಾದಕ ವಸ್ತುಗಳ ಸೇವನೆ ನಿಷೇಧಿಸಿ

ಮಾನ್ಯರೆ,

ರಾಜ್ಯದಲ್ಲಿ ಜನಸಂಖ್ಯೆ ಏರಿಕೆಯಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡಲು ಬಸ್ಸು, ರೈಲು, ಮತ್ತು ಮೆಟ್ರೋ ರೈಲುಗಳನ್ನು ಬಳಸುತ್ತಾರೆ. ರಾಜ್ಯದ ವಿವಿಧ ನಗರಗಳಿಗೆ ವೃತ್ತಿಗಾಗಿ ವಲಸೆ ಬಂದಿರುವ ಅನ್ಯ ರಾಜ್ಯಗಳ ಪ್ರಯಾಣಿಕರು ಮಾದಕ ವಸ್ತುಗಳನ್ನು ರೈಲು, ಮೆಟ್ರೋ ಮತ್ತು ಬಸ್ಸುಗಳಲ್ಲಿ ಸೇವಿಸುತ್ತಾರೆ. ಇದರಿಂದ ಮಹಿಳೆಯರು, ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ಶಿಕ್ಷಕರು ಸರ್ಕಾರಿ ಅಧಿಕಾರಿಗಳು ಸೇರಿದಂತೆ ಇತರ ಪ್ರಯಾಣಿಕರು ತೊಂದರೆ ಅನುಭವಿಸುವಂತಾಗಿದೆ. ಅಲ್ಲದೆ ಸಿಕ್ಕ ಸಿಕ್ಕ ಕಡೆಗಳಲ್ಲಿ ಗುಟ್ಕ, ಪಾನ್ ಪರಾಗ್, ಹನ್ಸ್ ತಿಂದು ಉಗುಳುವುದರಿಂದ ನಗರದ ಸೌಂದರ್ಯ ಹಾಳಾಗುತ್ತದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪ್ರಯಾಣದ ವೇಳೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳ ಸೇವನೆ ನಿಷೇಧ ಮಾಡಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಶೇ. 50:50 ಅನುಪಾತದಲ್ಲಿ ಸಾರಿಗೆ ಬಸ್‌ಗಳಲ್ಲಿ ಆಸನ ಮೀಸಲಿರಿಸಿ

ಮಾನ್ಯರೆ,

ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರದ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೇವೆ ಕಲ್ಪಿಸಿರುವುದರಿಂದ ಮಹಿಳಾ ಪ್ರಯಾಣಿಕರಿಂದ ಬಸ್‌ಗಳು ಕಿಕ್ಕಿರಿದು ತುಂಬಿರುತ್ತವೆ. ಬಸ್‌ಗಳ ಸಂಖ್ಯೆ ಅಷ್ಟೇ ಇದ್ದು, ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗಿದೆ. ಹಿರಿಯರು, ವೃದ್ಧರು, ವಿಕಲಚೇತನರಿಗೆ ಆಸನವೇ ಇಲ್ಲದಂತಾಗಿದೆ. ಹಣ ಕೊಟ್ಟು ಪ್ರಯಾಣಿಸುವವರು ಪಾಪ ನಿಂತೇ ಪ್ರಯಾಣಿಸುತ್ತಾರೆ. ಉಚಿತವಾಗಿ ಪ್ರಯಾಣಿಸುವವರು ಆರಾಮಾಗಿ ಕುಳಿತಿರುತ್ತಾರೆ. ಶೇ. 50:50 ಆಸನಗಳನ್ನು ಮೀಸಲಿಡಲು ಮನವಿ.

–ನೊಂದ ಪ್ರಯಾಣಿಕರು, ಮೈಸೂರು.



ನಮ್ಮ ನಾಡಿನ ಅನರ್ಘ್ಯ ರತ್ನ

ಕನಕದಾಸರು

6

ಒಮ್ಮೆ ಉಡುಪಿಯ ಶ್ರೀ ಕೃಷ್ಣನ ದರ್ಶನಕ್ಕೆಂದು ಕನಕದಾಸರು ಹೋದಾಗ ದೇವಸ್ಥಾನದ ಒಳಗೆ ಕನಕದಾಸರನ್ನು ಬಿಡದೆ ಅಪಮಾನಿಸಲಾಗುತ್ತದೆ. ಬೇಸರಗೊಂಡ ಕನಕದಾಸರು ದೇವಾಲಯದ ಹಿಂಬದಿಯಲ್ಲಿ ನಿಂತು ಕೃಷ್ಣನನ್ನು ಸ್ಮರಿಸಿದಾಗ ಸ್ವತಃ ಶ್ರೀ ಕೃಷ್ಣನೇ ಹಿಂತಿರುಗಿ ಕಿಂಡಿಯ ಮೂಲಕ ಕನಕನಿಗೆ ತನ್ನ ದರ್ಶನವನ್ನು ನೀಡಿದನಂತೆ. ಇದಕ್ಕೆ ಪೂರಕವೆಂಬಂತೆ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಕನಕನ ಕಿಂಡಿ ಇದೆ. ಕೆಲವರು ಇದನ್ನು ದಂತಕಥೆ ಎಂದು ಹೇಳುತ್ತಾರೆ. ಘಟನೆ ನಡೆದಿರಬಹುದು ಅಥವಾ ನಡೆಯದಿರಬಹುದು. ಆದರೆ ನಾವು ಇಲ್ಲಿ ಗಮನಿಸಬೇಕಾದದ್ದು ಕನಕದಾಸನ ಅಪ್ರತಿಮ ಭಕ್ತಿಯನ್ನು. ನಿಜವಾದ ಭಕ್ತಿಗೆ ಆ ದೇವರು ಒಲಿಯುವನು ಎಂಬಂತಹ ಸಂಗತಿಯನ್ನು ಈ ಘಟನೆ ತಿಳಿಸಬಲ್ಲದು.



■ ಸಿ.ಎಸ್.ರಾಘವೇಂದ್ರ

ಕನ್ನಡ ಉಪನ್ಯಾಸಕರು, ಶ್ರೀರಾಮಕೃಷ್ಣ ವಿದ್ಯಾಶಾಲೆ ಯಾದವಗಿರಿ, ಮೈಸೂರು ಮೊ.9036389640

ಕೇವಲ ಓದುಗರಿಗೆ, ಪಂಡಿತರಿಗೆ ಮಾತ್ರ ಸೀಮಿತವಾದಂತಹ ಸಾಹಿತ್ಯ 10ನೇ ಶತಮಾನದ ಹಳಗನ್ನಡ ಸಾಹಿತ್ಯ. ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಜನಸಾಮಾನ್ಯರ ಬದುಕನ್ನು ವಿವರಿಸುವ ನಿಟ್ಟಿನಲ್ಲಿ ಮೂಡಿ ಬಂದ ಸಾಹಿತ್ಯವೇ 12ನೇ ಶತಮಾನದ ಸಾಹಿತ್ಯ, ಅದುವೇ ವಚನ ಸಾಹಿತ್ಯ. 12ನೇ ಶತಮಾನದ ಅನಂತರ 14ನೇ ಶತಮಾನದಲ್ಲಿ ಜನಸಾಮಾನ್ಯರ ನಡುವೆ ಹೋಗಿ ಸಮಾಜದ ಓರೆಕೋರೆಗಳನ್ನ ತಿದ್ದುವ ಕೆಲಸವನ್ನು ಕೀರ್ತನೆಗಳ ಮೂಲಕ ಮಾಡಿದ್ದೆ ದಾಸ ಸಾಹಿತ್ಯ. ಇಂತಹ ದಾಸ ಸಾಹಿತ್ಯ ಪರಂಪರೆಯಲ್ಲಿ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದೇ ಪ್ರಸಿದ್ಧರಾದವರು ಕನಕದಾಸರು ಮತ್ತು ಪುರಂದರದಾಸರು. ಕನಕದಾಸರು ಕೀರ್ತನೆಗಳ ಮೂಲಕ, ಕೃತಿಗಳ ಮೂಲಕ ಸಮಾಜವನ್ನು ಸರಿಪಡಿಸುವಂತಹ ಪ್ರಾಮಾಣಿಕ ಕೆಲಸವನ್ನು ಮಾಡಿದರು.

ಕನಕದಾಸರು ಕನ್ನಡ ಸಾಹಿತ್ಯ ಕಂಡ ಅಪ್ರತಿಮ ಶ್ರೇಷ್ಠ ಕೀರ್ತನಾಕಾರರು. ಬರೀ ಕೀರ್ತನೆಗಳಲ್ಲದೇ ತಮ್ಮ ಕೃತಿಗಳ ಮೂಲಕವೂ ಸಮಾಜಕ್ಕೊಂದು ಕೊಡುಗೆಯನ್ನು ನೀಡುವ ಕೆಲಸವನ್ನು ಕನಕದಾಸರು ಮಾಡಿದ್ದಾರೆ.

ಬಾಡ ಗ್ರಾಮದಲ್ಲಿ ಜನಿಸಿದ ತಿಮ್ಮಪ್ಪನಾಯಕರಿಗೆ ನೆಲದಲ್ಲಿ ಅಪಾರವಾದ ಚಿನ್ನ ಸಿಕ್ಕ ಪರಿಣಾಮ ಕನಕನಾಗಿ, ಮುಂದೆ ಎಲ್ಲವನ್ನೂ ತೊರೆದು ದಾಸನಾಗಿ, ಕನಕದಾಸನಾಗಿ ಬದಲಾದದ್ದು ಐತಿಹ್ಯವಾಗಿದೆ. ಕನಕದಾಸರ ಜೀವನದಲ್ಲಿ ನಡೆದ ಘಟನೆಗಳು ಅವರ ವ್ಯಕ್ತಿತ್ವವನ್ನು ಪ್ರಸ್ತುತಪಡಿಸುವ ನಿದರ್ಶನಗಳಾಗಿವೆ.

ಘಟನೆ ಒಂದು: ಕನಕದಾಸರು ವ್ಯಾಸರಾಯರ ಶಿಷ್ಯರಾದ ನಂತರ ನಡೆದ ಘಟನೆ ಇದಾಗಿದೆ. ಒಮ್ಮೆ ವ್ಯಾಸರಾಯರು ತಮ್ಮ ಶಿಷ್ಯರನ್ನು ಕರೆದು ಪ್ರತಿಯೊಬ್ಬರಿಗೂ ಒಂದೊಂದು ಬಾಳೆಹಣ್ಣನ್ನು ಕೊಟ್ಟು ಈ ಬಾಳೆಹಣ್ಣನ್ನು ಯಾರು ಇಲ್ಲದ ಕಡೆ ತಿಂದು ಬರಬೇಕೆಂದು ಹೇಳುತ್ತಾರೆ. ವ್ಯಾಸರಾಯರ ಶಿಷ್ಯರು ಪ್ರತಿಯೊಬ್ಬರು ಹೋಗಿ ಹಣ್ಣನ್ನು ತಿಂದು ಬರುತ್ತಾರೆ. ಆದರೆ ಕನಕದಾಸ ಹಣ್ಣನ್ನು ತಿನ್ನದೇ ಅದನ್ನು ವಾಪಸು ತೆಗೆದುಕೊಂಡು ವ್ಯಾಸರಾಯರ ಬಳಿ ಬರುತ್ತಾರೆ. ಹಿಂತಿರುಗಿ ಬಂದಂತಹ ಶಿಷ್ಯರನ್ನು ವ್ಯಾಸರಾಯರು ಎಲ್ಲೆಲ್ಲಿ ಹಣ್ಣುಗಳನ್ನು ತಿಂದು ಬಂದಿರಿ ಎಂದು ಪ್ರಶ್ನಿಸಿದಾಗ ಒಬ್ಬ ಶಿಷ್ಯನು ಯಾರಿಗೂ ತಿಳಿಯದಂತೆ ಕೋಣೆಯ ಬಾಗಿಲುಗಳನ್ನು ಮುಚ್ಚಿ ಹೊದಿಕೆಯೊಳಗೆ ಬಚ್ಚಿಟ್ಟುಕೊಂಡು ತಿಂದೆನೆಂದು, ಮತ್ತೊಬ್ಬ ಯಾರು ಬರದಂತಹ ಜಾಗದಲ್ಲಿ ಹೋಗಿ ತಿಂದು ಬಂದನೆಂದು ಹೀಗೆ ಪ್ರತಿಯೊಬ್ಬರು ತಾವು ಹಣ್ಣುಗಳನ್ನು ತಿಂದ ಜಾಗದ ಕುರಿತು ತಮ್ಮ ಗುರುಗಳಿಗೆ ತಿಳಿಸುತ್ತಾರೆ. ಆದರೆ ಕನಕನ ಕೈಯ್ಯಲ್ಲಿ ಇನ್ನೂ ಬಾಳೆಹಣ್ಣು ಉಳಿದಿರುತ್ತದೆ. ಗುರುಗಳು ಅದನ್ನು ನೋಡಿ'ಯಾಕೆ ಕನಕ ಹಣ್ಣನ್ನು ತಿಂದಿಲ್ಲ' ಎಂದು ಪ್ರಶ್ನಿಸುತ್ತಾರೆ. ಆಗ ಕನಕದಾಸನು ಕೊಡುವ ಉತ್ತರ ನಿಜಕ್ಕೂ ಅರ್ಥಪೂರ್ಣವಾಗಿದೆ. **ಗುರುಗಳೇ, ದೇವರೇ ಸರ್ವ ಶಕ್ತ, ಆತನು ಎಲ್ಲೆಡೆಯೂ ಇರುವನೆಂದು ನೀವೇ ಹೇಳಿದ್ದೀರಿ. ಹೀಗಿರುವಾಗ ಯಾರಿಗೂ ಕಾಣದಂತೆ ಬಾಳೆಹಣ್ಣನ್ನು ತಿಂದರು ಆ ಸರ್ವಶಕ್ತನಿಗೆ ತಿಳಿಯುತ್ತದೆ. ಆದ್ದರಿಂದ 'ತಾನು ಹಣ್ಣನ್ನು ತಿನ್ನಲಿಲ್ಲ'** ಎಂಬಂತಹ ಉತ್ತರವನ್ನು ನೀಡುತ್ತಾನೆ. ಕನಕನ ಉತ್ತರದಿಂದ ವ್ಯಾಸರಾಯರಿಗೆ ಬಹಳಷ್ಟು ಆನಂದವಾಗುತ್ತದೆ. ಈ ಪ್ರಸಂಗ ಕನಕದಾಸನ ದೈವ ಭಕ್ತಿಯನ್ನು ತಿಳಿಸುವಂತಹ ಪ್ರಸಂಗವಾಗಿದೆ.

ಘಟನೆ ಎರಡು: ಒಮ್ಮೆ ವ್ಯಾಸರಾಯರು ತಮ್ಮ ಶಿಷ್ಯರನ್ನು ಕುರಿತು 'ನಿಮ್ಮಲ್ಲಿ ಸ್ವರ್ಗಕ್ಕೆ ಯಾರು ಹೋಗುವರು' ಎಂದು ಕೇಳುತ್ತಾರೆ. ಗುರುಗಳ ಈ ಮಾತನ್ನು ಕೇಳಿ ಶಿಷ್ಯರು ಪರಸ್ಪರ ಮುಖವನ್ನು ನೋಡಿಕೊಂಡು ಉತ್ತರವನ್ನು ಕೊಡದೆ ನಿರ್ಲಿಪ್ತರಾಗಿರುವಾಗ ಸ್ವತಃ ಗುರುಗಳೇ, ಕನಕದಾಸರನ್ನು ಪ್ರಶ್ನಿಸುತ್ತಾರೆ. ಆಗ ಕನಕದಾಸರು **'ನಾನು ಹೋದರೆ ಹೋದೇನು'** ಎಂಬ ಉತ್ತರ ನೀಡುತ್ತಾರೆ. ಕನಕದಾಸರ ಈ ಉತ್ತರದಿಂದ ಕೆರಳಿದ ಶಿಷ್ಯರು ಇತ್ತೀಚೆಗೆ ಬಂದ ಕನಕನು ಈ ರೀತಿ ಹೇಳುವುದು ಉದ್ಧಟತನವೆಂದು ಭಾವಿಸುತ್ತಾರೆ. ಶಿಷ್ಯರ ಮನದ ಇಂಗಿತವನ್ನು ಅರಿತ ವ್ಯಾಸರಾಯರು ಕನಕನನ್ನು ಸ್ವಲ್ಪ ವಿವರವಾಗಿ ತಿಳಿಸುವಂತೆ ಹೇಳುತ್ತಾರೆ. ಆಗ ಕನಕನು ಹೇಳುವ ಮಾತು **ನಾನು ಎಂಬಂತಹ ಅಹಂಕಾರ ಹೋದರೆ ಪ್ರತಿಯೊಬ್ಬರೂ ಕೂಡ ಸ್ವರ್ಗಕ್ಕೆ ಹೋಗಬಹುದು** ಎಂದು ವಿವರಿಸುತ್ತಾರೆ.ಇಲ್ಲಿ ನಾನು ಎಂದರೆ ಕನಕ ಎಂದರ್ಥವಲ್ಲ ನಾನು ಎಂಬ ಅಹಂಕಾರದ ಮನೋಭಾವ. ಯಾರು ಈ ಅಹಂಕಾರದ ಮನೋಭಾವವನ್ನು ಬಿಡುವರೋ ಅವರೆಲ್ಲರೂ ಸ್ವರ್ಗಕ್ಕೆ ಹೋಗಬಹುದು ಎಂದು ವಿವರಿಸುತ್ತಾರೆ. ಕನಕದಾಸರ ಈ ಉತ್ತರ ವ್ಯಾಸರಾಯರಿಗೆ ತುಂಬಾ ಇಷ್ಟವಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲೂ ಕೂಡ ಕನಕರ ಈ ಉತ್ತರ ಹೆಚ್ಚು ಸಮಂಜಸ ಎನಿಸುತ್ತದೆ.ನಾನು ಎಂಬ ನಾನತ್ವ ಹೋದರೆ ಪ್ರತಿಯೊಬ್ಬರೂ ಉತ್ತಮ ಮನುಷ್ಯರಾಗಬಹುದು ಎಂಬುದಕ್ಕೆ ಕನಕದಾಸರ ಈ ಪ್ರಸಂಗ ನಿಜಕ್ಕೂ ಎಲ್ಲರಿಗೂ ಪ್ರೇರಣೆಯನ್ನು ಉಂಟುಮಾಡಬಲ್ಲದು.

ಘಟನೆ ಮೂರು: ಈ ಪ್ರಸಂಗ ಬಹುಪಾಲು ಎಲ್ಲರಿಗೂ ತಿಳಿದಿರುವಂತದ್ದು. ಕನಕದಾಸರು ಕೃಷ್ಣನ ಅಪ್ರತಿಮ ಭಕ್ತರು.

ಒಮ್ಮೆ ಉಡುಪಿಯ ಶ್ರೀ ಕೃಷ್ಣನ ದರ್ಶನಕ್ಕೆಂದು ಕನಕದಾಸರು ಹೋದಾಗ ದೇವಸ್ಥಾನದ ಒಳಗೆ ಕನಕದಾಸರನ್ನು ಬಿಡದೆ ಅಪಮಾನಿಸಲಾಗುತ್ತದೆ. ಬೇಸರಗೊಂಡ ಕನಕದಾಸರು ದೇವಾಲಯದ ಹಿಂಬದಿಯಲ್ಲಿ ನಿಂತು ಕೃಷ್ಣನನ್ನು ಸ್ಮರಿಸಿದಾಗ ಸ್ವತಃ ಶ್ರೀ ಕೃಷ್ಣನೇ ಹಿಂತಿರುಗಿ ಕಿಂಡಿಯ ಮೂಲಕ ಕನಕನಿಗೆ ತನ್ನ ದರ್ಶನವನ್ನು ನೀಡಿದನಂತೆ. ಇದಕ್ಕೆ ಪೂರಕವೆಂಬಂತೆ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಕನಕನ ಕಿಂಡಿ ಇದೆ. ಕೆಲವರು ಇದನ್ನು ದಂತಕಥೆ ಎಂದು ಹೇಳುತ್ತಾರೆ. ಘಟನೆ ನಡೆದಿರಬಹುದು ಅಥವಾ ನಡೆಯದಿರಬಹುದು. ಆದರೆ ನಾವು ಇಲ್ಲಿ ಗಮನಿಸಬೇಕಾದದ್ದು ಕನಕದಾಸನ ಅಪ್ರತಿಮ ಭಕ್ತಿಯನ್ನು. ನಿಜವಾದ ಭಕ್ತಿಗೆ ಆ ದೇವರು ಒಲಿಯುವನು ಎಂಬಂತಹ ಸಂಗತಿಯನ್ನು ಈ ಘಟನೆ ತಿಳಿಸಬಲ್ಲದು.

ಕನಕದಾಸರ ಜೀವನದಲ್ಲಿ ನಡೆದಿದೆ ಎನ್ನಬಹುದಾದ ಈ ಮೂರು ಘಟನೆಗಳು ಅವರಲ್ಲಿ ಇರುವಂತಹ ವ್ಯಕ್ತಿತ್ವದ ದರ್ಶನವನ್ನು ಮಾಡಿಕೊಡುತ್ತದೆ. ಅವರ ಕೀರ್ತನೆ ಮತ್ತು ಕೃತಿಗಳಲ್ಲಿ ಜನರ ಮನೋಭಾವಗಳನ್ನು ತಿದ್ದುವ ಅಂಶಗಳು ಗೋಚರಿಸುತ್ತವೆ. ಮುಖ್ಯವಾಗಿ ಅವರ **ರಾಮಧಾನ್ಯ ಚರಿತೆ** ಕೃತಿಯನ್ನು ಗಮನಿಸುವುದಾದರೆ ಒಮ್ಮೆ ಅಕ್ಕಿ ಮತ್ತು ರಾಗಿಯಲ್ಲಿ ಪೈಪೋಟಿ ಏರ್ಪಡುತ್ತದೆ. ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠ ಎಂಬಂತಹ ಚರ್ಚೆ ಶುರುವಾಗುತ್ತದೆ. ಮುಖ್ಯವಾಗಿ ಅಕ್ಕಿ ತಾನೇ ಶ್ರೇಷ್ಠನೆಂದು ಶ್ರೀಮಂತರು, ಉಳ್ಳವರು ಎಲ್ಲರ ಮನೆಯಲ್ಲೂ ನಾನಿರುವೆ. ನನ್ನಿಂದಲೇ ಎಲ್ಲಾ , ನೀನು ಕೇವಲ ನಿರ್ಗತಿಕರ, ರೋಗಿಗಳ, ಮಧುಮೇಹಿಗಳ ಆಹಾರ ಎಂದು ಮೂದಲಿಸುತ್ತದೆ. ರಾಗಿಯೂ ತಾನೇನು ಕಡಿಮೆ ಇಲ್ಲವೆಂದು ತನ್ನ ಶಕ್ತಿ ಸಾಮರ್ಥ್ಯವನ್ನು ಪ್ರಸ್ತುತಪಡಿಸುತ್ತದೆ ಚರ್ಚೆ ಹೀಗೆ ಶುರುವಾಗಿ ಅದು ಶ್ರೀರಾಮನವರೆಗೂ ತಲುಪುತ್ತದೆ. ಈಗ ಶ್ರೀ ರಾಮನ ಮುಂದೆ ಅಕ್ಕಿ ಶ್ರೇಷ್ಠವೋ? ರಾಗಿ ಶ್ರೇಷ್ಠವೋ? ಎಂದು ತೀರ್ಮಾನಿಸಬೇಕಾದ ಸಂದರ್ಭ ಬರುತ್ತದೆ. ಯಾವುದೇ ತೀರ್ಪನ್ನು ನೀಡಬೇಕಾದವರು ಮೊದಲಿಗೆ ವಾದ–ಪ್ರತಿವಾದಗಳನ್ನು ಗಮನಿಸಿ ಎಲ್ಲವನ್ನು ಕೂಲಂಕುಷವಾಗಿ ಪರಿಶೀಲಿಸಿ ತೀರ್ಪನ್ನು ಕೊಡುವುದು ರೂಢಿ. ಶ್ರೀರಾಮನಿಗೆ ಏನು ಮಾಡಬೇಕೆಂದು ತಿಳಿಯದೆ ಒಂದು ತೀರ್ಮಾನವನ್ನು ಸೂಚಿಸುತ್ತಾನೆ. ರಾಗಿ ಮತ್ತು ಅಕ್ಕಿಯನ್ನು ಬೇರೆ ಬೇರೆ ಸೆರೆಮನೆಯಲ್ಲಿ ಆರು ತಿಂಗಳ ಕಾಲ ಕೂಡಿಡಬೇಕೆಂದು ಆಜ್ಞೆ ಮಾಡುತ್ತಾನೆ. ಆರು ತಿಂಗಳ ನಂತರ ಬಂದ ಶ್ರೀರಾಮ ಅಕ್ಕಿ ಮತ್ತು ರಾಗಿಯನ್ನು ಕರೆಸುತ್ತಾನೆ. ರಾಗಿ ಹೋಗುವಾಗ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಬಂದಾಗಲೂ ಇರುತ್ತದೆ. ಆದರೆ ಅಕ್ಕಿ ಮುಗ್ಗುಲು ಮುಟ್ಟಿಕೊಂಡು, ತನ್ನ ಶಕ್ತಿಯನ್ನು ಕಳೆದುಕೊಂಡು ಅಸಹಾಯಕ ಸ್ಥಿತಿಯಲ್ಲಿ ಹಿಂತಿರುಗುತ್ತದೆ. ಆಗ ಸ್ವತಃ ಶ್ರೀರಾಮನೆ, ಧಾನ್ಯಗಳಲ್ಲಿ ಶ್ರೇಷ್ಠವಾದದ್ದು ರಾಗಿ ಎಂದು ಘೋಷಿಸುತ್ತಾನೆ. ಶ್ರೀರಾಮನಿಂದಲೇ ಹೊಗಳಿಸಿಕೊಂಡ ರಾಗಿ ಮುಂದೆ ರಾಘವನೆಂದು ಪ್ರಸಿದ್ಧಿಯಾಗುತ್ತದೆ. ಕನಕದಾಸರು ಈ ಕೃತಿಯಲ್ಲಿ ಅಕ್ಕಿ ಮತ್ತು ರಾಗಿಯನ್ನು ಉಳ್ಳವರು ಮತ್ತು ಇಲ್ಲದವರ ನಡುವಿನ ಕಥೆ ಎಂಬಂತೆ ಚಿತ್ರಿಸಿ ಬಡವರ ಪರವಾಗಿ ಎಂದಿಗೂ ದೇವರು ಇರುತ್ತಾನೆ ಎಂಬಂತಹ ವಿಚಾರವನ್ನು ತಿಳಿಸಿದ್ದಾರೆ. ವ್ಯಕ್ತಿಗಿಂತ ವ್ಯಕ್ತಿತ್ವ ಮುಖ್ಯ ಎಂಬ ವಿಚಾರ ಈ ಕೃತಿಯಲ್ಲಿ ಅಡಕವಾಗಿರುವುದನ್ನು ನಾವು ಗಮನಿಸಬಹುದು. ಹೀಗೆ ಒಂದು ಕೃತಿಯಲ್ಲಿ ಸಮಾಜದಲ್ಲಿ ನಡೆಯುವಂತಹ ಘಟನೆಗಳಿಗೆ ಉತ್ತರವನ್ನು ನೀಡುವ ನಿಟ್ಟಿನಲ್ಲಿ ಬರೆದಿರುವಂತಹ ಶ್ರೇಷ್ಠ ಕೃತಿ ಇದಾಗಿದೆ. ಇನ್ನು ಕನಕದಾಸರ ಕೀರ್ತನೆಗಳ ಬಗ್ಗೆ ನೋಡುವುದಾದರೆ ಸಮಾಜಕ್ಕೊಂದು ಭರವಸೆಯನ್ನು ತುಂಬುವ, ಸಕಾರಾತ್ಮಕ ಧೋರಣೆಗಳನ್ನು ನೀಡುವಂತಹ ಕೀರ್ತನೆಗಳು ಕಂಡುಬರುತ್ತವೆ. ಮುಖ್ಯವಾಗಿ;

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ ॥ ಪ ॥
ಹುಟ್ಟಿದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜಾ ॥ 1 ॥
ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಜಲಜ ಕುಲವನೇನಾದರೂ ಬಲ್ಲಿರಾ
ಜಲದ ಬೋಬ್ಬುಳಿಯಂತೆ ಸ್ಥಿರವಿಲ್ಲವೀ ದೇಹಾ
ನೆಲೆಯರಿತು ನೀ ನೆನೆಕಂಡ್ಯ ಮನುಜಾ ॥ 2 ॥

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯ ನೆಲೆಯಾದಿ ಕೇಶವರಾಯನ
ಸಿರಿತಾನಾಗಿ ನೆಲೆಯಾದಿ ಕೇಶವರಾಯನ
ಚರಣ ಕಮಲವನೇ ಅರ್ಚಿಸುವನೇ ಕುಲಜ

ಕೀರ್ತನೆಯಲ್ಲಿ ಯಾವುದೇ ಕುಲವೂ ಶ್ರೇಷ್ಠ ಅಲ್ಲ ಕನಿಷ್ಠವೂ ಅಲ್ಲ, ಕುಲದ ಬಗ್ಗೆ ಮಾತನಾಡುತ್ತಾ ನಮ್ಮ ಸಣ್ಣತನವನ್ನು ತೋರಿಸುವ ಕೆಲಸ ಮಾಡುವ ಬದಲು ಹರಿಯ ಚರಣ ಕಮಲದ ಸೇವೆಯನ್ನು ಮಾಡುತ್ತಾ ಕಾಲಕಳೆಯುವವನೇ ನಿಜವಾದ ಕುಲಜ ಎನ್ನುವ ಮೂಲಕ ತಮ್ಮ ಕುಲವೇ ಶ್ರೇಷ್ಠ ಎಂಬ ಅಹಂಮಿಕೆಯನ್ನು ತೋರ್ಪಡಿಸುತ್ತಾ ಪರರನ್ನು ನಿಂದಿಸುತ್ತಾ ಕಾಲಹರಣ ಮಾಡುವ ಡಾಂಭಿಕರಿಗೆ ಬಿಸಿಮುಟ್ಟಿಸುವಂತಹ ಬಹಳ ಅರ್ಥಪೂರ್ಣವಾದ ಸಾರಸತ್ವ ಕೀರ್ತನೆಯನ್ನು ರಚಿಸಿದ್ದಾರೆ.

ತೊರೆದು ಜೀವಿಸಬಹುದೆ ಹರಿ ನಿನ್ನ
ಚರಣವತೊರೆದು ಜೀವಿಸಬಹುದೆ
ಬರಿದೆ ಮಾತೇಕಿನ್ನು ಅರಿತು ಪೇಳುವೆನಯ್ಯ
ಕರಪಿಡಿದೆನ್ನನು ಕಾಯೊ ಕರುಣಾನಿಧಿ
ತಾಯಿ ತಂದೆಯ ಬಿಟ್ಟು ತಪವ ಮಾಡಲು ಬಹುದು
ದಾಯಾದಿ ಬಂಧುಗಳ ಬಿಡಲುಬಹುದು
ರಾಯ ಮುನಿದರೆ ರಾಜ್ಯವ ಬಿಡಬಹುದು
ಕಾಯಜಪಿತ ನಿನ್ನಡಿಯ ಬಿಡಲಾಗದು
ಒಡಲು ಹಸಿದರೆ ಅನ್ನವ ಬಿಡಬಹುದು
ಪಡೆದ ಕ್ಷೇತ್ರವ ಬಿಟ್ಟು ಹೊರಡಲು ಬಹುದು
ಮಡದಿ ಮಕ್ಕಳ ಕಡೆಗೆ ತೊಲಗಿಸಿಬಿಡಬಹುದು
ಕಡಲೊಡೆಯ ನಿಮ್ಮಡಿಯ ಘಳಿಗೆ ಬಿಡಲಾಗದು
ಪ್ರಾಣವ ಪರರಿಗೆ ಬೇಡಿದರೆ ಕೊಡಬಹುದು
ಮಾನಾಭಿಮಾನವ ತಗ್ಗಿಸಬಹುದು ಪ್ರಾಣದಾಯಕನಾದ
ಆದಿಕೇಶವರಾಯ ಜಾಣ ಶ್ರೀಕೃಷ್ಣ ನಿನ್ನಡಿಯ ಬಿಡಲಾಗದು

ನಿಜವಾದ ಭಕ್ತನಾದವನು ತನ್ನ ಇಷ್ಟ ದೈವದ ಕಾರಣಕ್ಕಾಗಿ ಏನನ್ನು ಬೇಕಾದರೂ ಬಿಡಬಲ್ಲ, ಆದರೆ ಯಾವುದೇ ಕಾರಣಕ್ಕೂ ತನ್ನ ಪ್ರಾಣದಾಯಕನಾದ ಭಕ್ತವಂತನನ್ನು ಬಿಡಲು ಸಿದ್ಧನಿರುವುದಿಲ್ಲ ಎಂಬ ಭಕ್ತನ ಅಂತಃಕರಣದ ಭಕ್ತಿಯ ಉತ್ಕಟತೆಯನ್ನು ಈ ಕೀರ್ತನೆಯಲ್ಲಿ ಕನಕದಾಸರು ಅಭಿವ್ಯಕ್ತಿಸಿದ್ದಾರೆ. ಭಕ್ತನಿಗೆ ತನ್ನ ದೈವದ ಹೊರತಾಗಿ ಯಾವುದು ಕೂಡ ಮುಖ್ಯವಾಗಿರಲಾರದೆಂಬ ಭಕ್ತಿಯ ತೀವ್ರತೆಯನ್ನು ಇಲ್ಲಿ ನಾವು ಗಮನಿಸಬಹುದು.

ಆರು ಹಿತವರು ಎಂದು ನಂಬಬೇಡ
ಆರಿಗಾರಿಲ್ಲ ಆಪತ್ತು ಬಂದೊದಗಿದಡೆ
ಜನಕ ಹಿತದವನೆಂದು ನಂಬಬಹುದೇ ಹಿಂದೆತನಯ
ಪ್ರಹ್ಲಾದನಿಗೆ ಪಿತ ಮುನಿದನುಜನನಿ ರಕ್ಷಿಪಳೆಂಬೆನೇ
ತಿಳಿತಿಳಿದು ಕುಂತಿತನಯ ರಾಧೇಯನಿಗೆ
ಎರಡೆಣಿಸಿದ ಮೇಲೆ
ಮಗನು ತೆತ್ತಿಗನೆನಲೆ ಕಂಸ ತನ್ನಯ ಪಿತನನಿಗಳ
ಬಂಧನದಿಂದ ಬಂಧಿಸಿದನು ಜಗವರಿಯೆ ಸೋದರನು
ಮಮತೆಯುಳ್ಳವನೆ ನಲೆಹಗೆವೆರಸಿ
ವಾಲಿಯನು ಅನುಜ ಕೊಲಿಸಿದ ಮೇಲೆ
ತನಗೆ ದೇಹಾನುಬಂಧಿಗಳೆ ಬಂಧುಗಳೆಂದು
ಮನದಿ ನಿಚ್ಚಳವಾಗಿ ನಂಬಬೇಡಘನ ಕೃಪಾನಿಧಿ
ಕಾಗಿನೆಲೆಯಾದಿಕೇಶವನ ಅನುದಿನದಿ
ನಂಬಿದವಗಿಹಪರದಿ ಸುಖವು

ಈ ಕೀರ್ತನೆಯಲ್ಲಿ ಜೀವನದಲ್ಲಿ ಎದುರಾಗುವ ಕಷ್ಟಗಳಿಗೆ ಜೊತೆಯಾಗಿ ನಿಂತು ಪರಿಹಾರ ಒದಗಿಸುವವನು, ಆಪತ್ಕಾಲದಲ್ಲಿ ನಮ್ಮ ಪಕ್ಕದಲ್ಲಿ ನಿಂತು ಸಹಕರಿಸುವವನು ನನ್ನ ದೈವ ಮಾತ್ರ ಎಂಬ ಅಚಲವಾದ ದೃಢ ನಂಬಿಕೆಯನ್ನು ಕಾಣಬಹುದು. ಮನುಷ್ಯರನ್ನು ನಂಬುವುದಕ್ಕಿಂತ ದೈವವನ್ನು ನಂಬಿದರೆ ಯಾವುದೇ ಕಾರಣಕ್ಕೂ ತನ್ನನ್ನು ಕೈ ಬಿಡಲಾರನೆಂಬ ಆತ್ಮವಿಶ್ವಾಸ ಈ ಕೀರ್ತನೆಯಲ್ಲಿದೆ.

ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ
ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ
ಪುಟ್ಟಿಸಿದ ದೇವ ತಾ ಹೊಣೆಗಾರನಾಗಿರಲು
ಗಟ್ಯಾಗೆ ರಕ್ಷಿಪನು ಇದಕೆ ಸಂಶಯವಿಲ್ಲ
ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೋ
ಹಡೆದ ಜನನಿಯ ತೆರದೆ ಸ್ವಾಮಿ
ಹೊಣೆಗೇಡಾಗಿಬಿಡದೆ ರಕ್ಷಿಪನಿದಕೆ ಸಂದೇಹ ಬೇಡ
ಕಲ್ಲಿನಲಿ ಹುಟ್ಟಿದ ಕೂಗುವಾ ಕಪ್ಪೆಗೆ
ಅಲ್ಲಿ ಆಹಾರವನು ತಂದೀಯುವರ್ಯಾರೋ
ಬಲ್ಲಿದನು ಕಾಗಿನೆಲೆ ಆದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

ಈ ಹುಟ್ಟಿಗೆ ಕಾರಣನಾದ ಭಗವಂತ ಖಂಡಿತವಾಗಿ ಹೆತ್ತ ತಾಯಿಯಂತೆ, ಹೊಣೆಗಾರಿಕೆಯನ್ನು ಅರಿತು ನಮ್ಮೆಲ್ಲರನ್ನು ರಕ್ಷಿಸುವನು.ಯಾವುದೇ ಕಾರಣಕ್ಕೂ ಭಯಪಡುವ ಅಗತ್ಯವಿಲ್ಲ. ಪ್ರಾಣಿಗಳಿಗೆ, ಮನುಷ್ಯರಿಗೆ ಬೇಕಾದ ಸಕಲವನ್ನೂ ನೀಡುವ ಕರುಣಾಮಯಿ ಆ ಭಗವಂತ ನಮ್ಮ ಜೊತೆಯಲ್ಲಿರುವಾಗ ಭಯಪಡಬೇಡ ಎಂದು ತಿಳಿಸುವ ಈ ಕೀರ್ತನೆ ಎಂತಹ ನಕಾರಾತ್ಮಕ ಚಿಂತನೆ ಮಾಡುವವನಲ್ಲಿಯೂ ಸಕಾರಾತ್ಮಕತೆಯ ಭರವಸೆಯನ್ನು ಮೂಡಿಸುವಂತದ್ದು.

ಹೀಗೆ ತಮ್ಮ ಕೃತಿ, ಕೀರ್ತನೆ, ಉಗಾಭೋಗ, ಮುಂಡಿಗೆಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಜನಸಾಮಾನ್ಯರ ಮನಸ್ಸಿನಲ್ಲಿ ಅಜರಾಮರರಾಗಿರುವ ಕನಕದಾಸರು ಅಂದಿಗೂ ಇಂದಿಗೂ ಸದಾ ಕಾಲದಲ್ಲಿಯೂ ಸಲ್ಲುವಂತಹ ಕನ್ನಡ ಸಾಹಿತ್ಯದ ಅನರ್ಘ್ಯ ರತ್ನವಾಗಿ ಉಳಿದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 30 ಗುರುವಾರ 2023

ಸಂಪುಟ: 44 | ಸಂಚಿಕೆ: 223 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

₹4

ಚೀನಾದಲ್ಲಿನ ನ್ಯುಮೋನಿಯಾ ಸಾಂಕ್ರಾಮಿಕದ ಆತಂಕ

ಜ್ವರ ಬಂದರೆ ಪರೀಕ್ಷೆಗೊಳಗಾಗಿ; ಗಂಭೀರ ಕಾಯಿಲೆ ಇದ್ದರೆ ಎಚ್ಚರ

- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ
- ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಂತರ ಮಾಹಿತಿ
- ಸಾಂಕ್ರಾಮಿಕ ರೋಗದ ಬಗ್ಗೆ ಎಚ್ಚರವಿರಲಿ; ಆದರೆ ಆತಂಕ ಬೇಡ
- ಆರೋಗ್ಯ ಸೇವೆ ಸಿಬ್ಬಂದಿ ಮಾಸ್ಕ್ ಧರಿಸುವುದು ಕಡ್ಡಾಯ
- ಮಕ್ಕಳು, ವೃದ್ಧರು ಎಚ್ಚರ ವಹಿಸುವುದು ಅವಶ್ಯ
- ಭ್ರೂಣ ಹತ್ಯೆ ಸಂಬಂಧ ಸದಾ ಕಣ್ಗಾವಲು

ಬೆಂಗಳೂರು, ನ.29(ಕೆಎಂಶಿ)– ಚೀನಾದಲ್ಲಿ ಕಾಣಿಸಿಕೊಂಡಿರುವ ನ್ಯುಮೋನಿಯಾ ಸಾಂಕ್ರಾಮಿಕ ರೋಗದ ಬಗ್ಗೆ ಎಚ್ಚರವಿರಲಿ. ಆದರೆ ಆತಂಕಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಇಂದಿಲ್ಲಿ ತಿಳಿಸಿದ್ದಾರೆ.

ವಿಶ್ವಸಂಸ್ಥೆ ಮತ್ತು ಕೇಂದ್ರ ಸರ್ಕಾರ ರೋಗಕ್ಕೆ ಸಂಬಂಧಿಸಿದಂತೆ ನೀಡಿರುವ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರ ಯಥಾವತ್ ಜಾರಿಗೆ ತರಲಿದೆ. ಇದುವರೆಗೂ ಕರ್ನಾಟಕದ ಯಾವುದೇ ಭಾಗದಲ್ಲಿ ಇಂತಹ ಸೋಂಕು ಕಂಡುಬಂದಿಲ್ಲ, ಆದರೆ, ರಾಜ್ಯದ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಸಿದ್ಧತೆ ಮಾಡಿಕೊಳ್ಳುವಂತೆ ಆದೇಶ ಮಾಡಿದ್ದೇವೆ.

ಚೀನಾ ಸೋಂಕು ಮತ್ತು ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ಇಲಾಖಾ ಅಧಿಕಾರಿಗಳ ಜೊತೆ ಸುದೀರ್ಘ ಚರ್ಚೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯುಮೋನಿಯಾ ಬಗ್ಗೆ ಕೆಲವು ಸಂಶಯ ಪ್ರಕರಣಗಳು ವರದಿಯಾಗಿದ್ದು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಕೇಂದ್ರದ ಮಾರ್ಗಸೂಚಿಯಂತೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ವೈದ್ಯರು ಮತ್ತು ಸಿಬ್ಬಂದಿ ಮಾಸ್ಕ್‌ಗಳನ್ನು ಕಡ್ಡಾಯವಾಗಿ ಹಾಕಿಕೊಳ್ಳಬೇಕು, ಯಾರಿಗೇ ಜ್ವರ ಕಂಡುಬಂದಲ್ಲಿ ತಕ್ಷಣವೇ ವೈದ್ಯರ ಬಳಿ ತೆರಳಿ ಪರೀಕ್ಷೆಗೆ ಒಳಪಡಬೇಕು. ಈ ಶೀತ ಜ್ವರ ಸಾಮಾನ್ಯವಾಗಿ ಐದು ದಿನಗಳವರೆಗೆ ಇರುತ್ತದೆ. ಮಕ್ಕಳು ಹಾಗೂ ವೃದ್ಧರು ಎಚ್ಚರಿಕೆಯಿಂದ ಇರಬೇಕು. ಅಲ್ಲದೆ, ಇತರೆ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು



ಸಚಿವ ದಿನೇಶ್ ಗುಂಡೂರಾವ್

ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ. ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರದಿಂದ ಬಾಯಿ–ಮೂಗು ಮುಚ್ಚಿಕೊಳ್ಳಿ, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿದರೆ ಒಳ್ಳೆಯದು. ಹಾಗೆಯೇ ಆಗಿಂದಾಗ್ಗೆ ಸೋಪಿನಿಂದ ಕೈಗಳನ್ನು ಸ್ವಚ್ಛ ಮಾಡಿಕೊಳ್ಳಿ, ಸೋಂಕಿಗೆ ಸಂಬಂಧಿಸಿದಂತೆ ಪ್ರತಿನಿತ್ಯ ಅಧಿಕಾರಿಗಳು ನಿಗಾ ವಹಿಸಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಿದ್ದಾರೆ. ಇಷ್ಟರ ನಡುವೆಯೂ ಸೋಂಕಿನ ಬಗ್ಗೆ ಎಚ್ಚರವಿರಲಿ. ಆದರೆ, ಆತಂಕ ಬೇಡ ಎಂದರು.


ಭ್ರೂಣ ಹತ್ಯೆ ಸಂಬಂಧ ಕಣ್ಗಾವಲು: ಮಂಡ್ಯ–ಮೈಸೂರಿನಲ್ಲಿ ಪತ್ತೆಯಾದ ಭ್ರೂಣಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಕಣ್ಗಾವಲು ಇಡಬೇಕು ಎಂದು ಸೂಚಿಸಿದ್ದೇವೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಇನ್ನು ಮುಂದೆ ರಾಜ್ಯದ ಆಸ್ಪತ್ರೆಗಳಲ್ಲಿ ನಿಯಮಿತವಾಗಿ ಸ್ಕ್ಯಾನಿಂಗ್ ಯಂತ್ರಗಳನ್ನು ಪರಿಶೀಲಿಸಬೇಕು. ಗರ್ಭಪಾತದಂತಹ ಪ್ರಕರಣಗಳ ಮೇಲೆ ಕಣ್ಣಿಡಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಲಾಗಿದೆ.

ಪ್ರತಿ ತಿಂಗಳು ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ನಡೆಸಬೇಕು, ಮೂರು ತಿಂಗಳಿಗೊಮ್ಮೆ ಆರೋಗ್ಯ ಇಲಾಖೆಯ ಆಯುಕ್ತರು ಸಭೆ ನಡೆಸಿ ಇದರ ಮೇಲೆ ಕಣ್ಣಿಡಬೇಕು ಎಂದ ಅವರು, ಆರು ತಿಂಗಳಿಗೊಮ್ಮೆ ತಾವೇ ಖುದ್ದಾಗಿ ಸಭೆ ನಡೆಸಿ ಪರಿಶೀಲನೆ ನಡೆಸುವುದಾಗಿ ವಿವರಿಸಿದರು.

ಈಗ ಪತ್ತೆಯಾದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಬಗ್ಗೆ ಆಮೂಲಾಗ್ರ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಇಂತಹ ಭ್ರೂಣಹತ್ಯೆಯ ಪ್ರಕರಣಗಳು ಮಂಡ್ಯ, ಮೈಸೂರು ಮಾತ್ರವಲ್ಲದೆ ರಾಜ್ಯದ ಎಲ್ಲ ಭಾಗಗಳಲ್ಲಿ ನಡೆದಿರುವ ಸಾಧ್ಯತೆ ಇದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಈ ಹಿನ್ನೆಲೆಯಲ್ಲಿ ಇಡೀ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಿದ್ದು ಇದು ಪುನರಾವರ್ತನೆಯಾಗದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಲಿಂಗಾನುಪಾತ ಗಮನಿಸಿದರೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಈಗ ಪತ್ತೆಯಾಗಿರುವ ಪ್ರಕರಣವನ್ನು ಗಮನಿಸಿದರೆ ಭ್ರೂಣಹತ್ಯೆಯೇ ಲಿಂಗಾನುಪಾತದಲ್ಲಿ ಅಸಮಾನತೆಗೆ ಮುಖ್ಯ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಸಿಬಿಐ ತನಿಖೆಗೆ ಅನುಮತಿ ಪ್ರಶ್ನಿಸಿದ್ದ ಮೇಲ್ಮನವಿ ಹಿಂಪಡೆಯಲು ಹೈಕೋರ್ಟ್ ಅಸ್ತು



ಡಿಸಿಎಂ ಡಿಕೆಶಿಗೆ ಸದ್ಯ ರಿಲೀಫ್

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ಬಿಜೆಪಿ ಸರ್ಕಾರ ತಮ್ಮ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಪ್ರಶ್ನಿಸಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಹಿಂಪಡೆಯಲು ಹೈಕೋರ್ಟ್ ಅನುಮತಿ ನೀಡಿದೆ. ತಮ್ಮ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ನೀಡಿದ ಬಿಜೆಪಿ ಸರ್ಕಾರದ ಆದೇಶ ರದ್ದುಗೊಳಿಸುವಂತೆ ಕೋರಿ ಡಿ.ಕೆ.ಶಿವಕುಮಾರ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಏಕ ಸದಸ್ಯ ಪೀಠ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಡಿಕೆಶಿ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಇಂದು ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿತು. ಈ ವೇಳೆ ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿರುವ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ನ್ಯಾಯಪೀಠಕ್ಕೆ ಮೆಮೊ ಮೂಲಕ ಸಲ್ಲಿಸಿದರು. ಅಲ್ಲದೆ ರಿಟ್ ಅರ್ಜಿ ಮತ್ತು ಮೇಲ್ಮನವಿಯನ್ನು ಹಿಂಪಡೆಯುವುದಾಗಿ ಡಿ.ಕೆ.ಶಿವಕುಮಾರ್ ಪರ ವಕೀಲರು ಲಿಖಿತ ಮೆಮೊ ಸಲ್ಲಿಸಿದರು. ಮೆಮೊ ಮಾನ್ಯ ಮಾಡಿದ ಹೈಕೋರ್ಟ್ ವಿಭಾಗೀಯ ಪೀಠ, ಮೇಲ್ಮನವಿ ಹಿಂಪಡೆಯುವುದಕ್ಕೆ ಅನುಮತಿ ನೀಡಿದೆ. ಯಾರು ಬೇಕಾದರೂ ಅನುಮತಿ ಹಿಂಪಡೆದ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಬಹುದು. ಆದರೆ ರಾಜ್ಯ ಸರ್ಕಾರದ ಆದೇಶವನ್ನು ಇದುವರೆಗೂ ಯಾರೂ ಪ್ರಶ್ನೆ ಮಾಡಿಲ್ಲ. ಹೀಗಾಗಿ ಸಿಬಿಐ ಪರ ವಕೀಲರ ವಾದ ಪರಿಗಣಿಸಲು ಸಾಧ್ಯವಿಲ್ಲ. ಅರ್ಜಿದಾರರು ಮನವಿ ಹಿಂಪಡೆಯಲಾಗಿದೆ ಎಂದು ಕೋರ್ಟ್ ತಿಳಿಸಿತು.

ಇನ್ನು ಪ್ರಕರಣದಲ್ಲಿ ತಮ್ಮನ್ನು ಪ್ರತಿವಾದಿಯಾಗಿ ಮಾಡುವಂತೆ ಕೋರಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಅರ್ಜಿಯನ್ನು ಗಮನಿಸಿದ ಹೈಕೋರ್ಟ್, ಈ ಪ್ರಕರಣದಲ್ಲಿ ನಿಮ್ಮನ್ನು ಪರಿಗಣಿಸುವ ಅಗತ್ಯ ಇಲ್ಲ ಎಂದು ಹೇಳಿದೆ.

ನಾನು ಯಾವುದೇ ತಪ್ಪು ಮಾಡಿಲ್ಲ, ಪಕ್ಷದ ಕೆಲಸ ಮಾತ್ರ ಮಾಡಿದ್ದೇನೆ

ಬೆಂಗಳೂರು: ನಾನು ಯಾವುದೇ ತಪ್ಪು ಮಾಡಿಲ್ಲ ಮತ್ತು ಪಕ್ಷದ ಕೆಲಸವನ್ನು ಮಾತ್ರ ಮಾಡಿದ್ದೇನೆ. ಅದಕ್ಕಾಗಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿದ್ದೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬುಧವಾರ ಹೇಳಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ಬಿಜೆಪಿ ಸರ್ಕಾರ ತಮ್ಮ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿ ಪ್ರಶ್ನಿಸಿ ಅವರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಹಿಂಪಡೆಯಲು ಹೈಕೋರ್ಟ್ ಅನುಮತಿ ನೀಡಿದೆ.

ಈ ಬಗ್ಗೆ ವರದಿಗಾರರಿಗೆ ಪ್ರತಿಕ್ರಿಯಿಸಿದ ಡಿಸಿಎಂ, 'ಇದು ನ್ಯಾಯಾಲಯದ ವಿಷಯವಾಗಿರುವುದರಿಂದ ನಾನು ಪ್ರತಿಕ್ರಿಯಿಸಲಾರೆ ಮತ್ತು ನನ್ನ ಪ್ರಕಾರ ನ್ಯಾಯಾಲಯದ ವಿಷಯದಿಂದ ದೂರವಿರುವುದು ಒಳ್ಳೆಯದು' ಎಂದು ಹೇಳಿದ್ದಾರೆ. ಸಿಬಿಐ ತನಿಖೆಗೆ ನೀಡಿದ್ದ ಅನುಮತಿ

● 10ನೇ ಪುಟಕ್ಕೆ

ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಮತ್ತೆ ಐದು ವರ್ಷ ವಿಸ್ತರಣೆ

ನವದೆಹಲಿ: ದೇಶದ 81.35 ಕೋಟಿ ಫಲಾನುಭವಿಗಳಿಗೆ ಉಚಿತವಾಗಿ ಆಹಾರಧಾನ್ಯ ಒದಗಿಸುವ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು (ಪಿಎಂಜಿಕೆಎವೈ) ಮತ್ತೆ ಐದು ವರ್ಷ ವಿಸ್ತರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ. ಈ ಯೋಜನೆ ಅಡಿ ಬಡ ಕುಟುಂಬಗಳಿಗೆ ಪ್ರತಿ ತಿಂಗಳು 5 ಕೆ.ಜಿ. ಆಹಾರ ಧಾನ್ಯ ವಿತರಿಸಲಾಗುತ್ತದೆ. ದೇಶದಲ್ಲಿ ಕೋವಿಡ್ ವ್ಯಾಪಕವಾಗಿ ಹರಡಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು 2020ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತ್ತು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, 'ಯೋಜನೆಯನ್ನು 2024ರ ಜನವರಿ 1ರಿಂದ ಅನ್ವಯವಾಗುವಂತೆ ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸಲಾಗಿದೆ. ಐದು ವರ್ಷಗಳ ಅವಧಿಗೆ ಸುಮಾರು 11.80 ಲಕ್ಷ ಕೋಟಿಗಳಷ್ಟು ವೆಚ್ಚವಾಗಲಿದೆ' ಎಂದರು.

ಯಾರಿಂದಲೂ ಸಿಎಎ ಜಾರಿ ತಡೆಯಲು ಸಾಧ್ಯವಿಲ್ಲ



ಕೋಲ್ಕತಾ: ಕೇಂದ್ರದ ಎನ್‌ಡಿಎ ಸರ್ಕಾರದ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ಜಾರಿಗೆ ತರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದಲ್ಲಿ ನಡೆದ ಬಿಜೆಪಿ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ಸರ್ಕಾರದ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಅದನ್ನು ಜಾರಿಗೊಳಿಸುವುದು ಶತಸಿದ್ಧ ಎಂದು ಗೃಹ ಸಚಿವ ಅಮಿತ್ ಶಾ ಬುಧವಾರ ಪ್ರತಿಪಾದಿಸಿದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಲ್ಪಸಂಖ್ಯಾತರ ಓಲೈಕೆಯಲ್ಲಿ ತೊಡಗಿದ್ದು, ತುಷ್ಟೀಕರಣ ರಾಜಕೀಯ ಈ ಬಾರಿ ಕೆಲಸ ಮಾಡುವುದಿಲ್ಲ ಎಂದು ಹೇಳಿದರು. ಅಂತೆಯೇ ಅಕ್ರಮ ಒಳನುಸುಳುವಿಕೆ, ಭ್ರಷ್ಟಾಚಾರ ಮತ್ತು ರಾಜಕೀಯ ಹಿಂಸಾಚಾರದ ವಿಷಯಗಳ ಬಗ್ಗೆ ವಾಗ್ದಾಳಿ ನಡೆಸಿದ ಅವರು, ಈ ಬಾರಿ ಚುನಾವಣೆಯಲ್ಲಿ ಮಮತಾ ಅವರ ಸರ್ಕಾರವನ್ನು ಹೊರಹಾಕಿ ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಆಯ್ಕೆ ಮಾಡುವಂತೆ ಜನರಿಗೆ ಮನವಿ ಮಾಡಿದರು.

ರ್‍ಯಾಲಿಯಲ್ಲಿ ಸೇರಿರುವ ಜನರ ಸಂಖ್ಯೆ ಜನರ ಮನಸ್ಥಿತಿಯನ್ನು ಸೂಚಿಸುತ್ತದೆ. 2026ರಲ್ಲಿ ರಾಜ್ಯದಲ್ಲಿ ಬಿಜೆಪಿ ಮೂರನೇ ಎರಡರಷ್ಟು ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. 2024 ರ ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿಯ ಸಾಧನೆಯು ವಿಧಾನಸಭಾ ಚುನಾವಣೆಯಲ್ಲಿ ಅದರ ಗೆಲುವಿನ ಅಡಿಪಾಯವನ್ನು ಸೃಷ್ಟಿಸುತ್ತದೆ ಎಂದರು. ಸಿಎಎ ವಿರೋಧಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅಮಿತ್ ಶಾ, ಮಮತಾ ಬ್ಯಾನರ್ಜಿ ಇದನ್ನು ವಿರೋಧಿಸುತ್ತಿದ್ದಾರೆ. ಆದರೆ ಯಾರೊಬ್ಬರೂ ಅದರ ಅನುಷ್ಠಾನವನ್ನು ತಡೆಯಲು ಸಾಧ್ಯವಿಲ್ಲ ಎಂದರು. 2019ರಲ್ಲಿ ರಾಜ್ಯದ 42 ಸ್ಥಾನಗಳಲ್ಲಿ ಪಕ್ಷವು 18 ಸ್ಥಾನಗಳನ್ನು ಗೆದ್ದುಕೊಂಡಿದ್ದು, ಇದು ಬಂಗಾಳದಲ್ಲಿ ಬಿಜೆಪಿ ಗಳಿಸಿದ ಈವರೆಗಿನ ಅತ್ಯಧಿಕ ಸ್ಥಾನಗಳಾಗಿವೆ.

ಜಾತಿ ಸಮೀಕ್ಷಾ ವರದಿ ಪರಿಪೂರ್ಣ, ಪಾರದರ್ಶಕ

- ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಸ್ಪಷ್ಟನೆ
- ಈ ಸಂಬಂಧಿತ ಆತಂಕ, ಊಹಾಪೋಹ, ಅನುಮಾನಗಳಿಗೆ ಇದರಲ್ಲಿ ಆಸ್ಪದವಿಲ್ಲ



ಕೆ.ಎನ್.ಲಿಂಗಪ್ಪ

ಮೈಸೂರು, ನ.29(ಎಂಟಿವೈ)– ರಾಜ್ಯದಲ್ಲಿ ಕಾಂತರಾಜು ನೇತೃತ್ವದ ಆಯೋಗ ನಡೆಸಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ–2015, ಜಾತಿ ಗಣತಿ ಶೇ.98ರಷ್ಟು ಪಾರದರ್ಶಕ ಮತ್ತು ವೈಜ್ಞಾನಿಕವಾಗಿದ್ದು, ಇದರಲ್ಲಿ ಯಾವ ಜಾತಿ, ಜನಾಂಗವನ್ನು ನಿರ್ಲಕ್ಷಿಸಿಲ್ಲ ಎಂದು ಸಮೀಕ್ಷಾ ತಂಡದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ಕೆ.ಎನ್.ಲಿಂಗಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಜಾತಿ ಜನಗಣತಿ ವರದಿ ಕುರಿತಂತೆ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಕಾಂತರಾಜು ನೇತೃತ್ವದ ಆಯೋಗ ನಡೆಸಿದ ಜಾತಿ ಜನಗಣತಿ ಕುರಿತಂತೆ ಕೆಲವರು ಮಾಡುತ್ತಿರುವ ಆರೋಪ ನಿರಾಧಾರ. ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಜಾತಿ ಗಣತಿ, ಸರ್ವೋಚ್ಚ ನ್ಯಾಯಾಲಯದ ಮಾನದಂಡ ಅನುಸಾರ ನಡೆಸಲಾಗಿದೆ. ಸಮೀಕ್ಷೆಯಲ್ಲಿ ಅರ್ಹರಿಗೆ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಜನರ ಬಳಿ ಹೋಗಿ ಅವರಿಂದ ಮಾಹಿತಿ ಪಡೆದು ವರದಿ ಸಿದ್ಧಪಡಿಸಲಾಗಿದೆ. ಈ ವರದಿ ಶೇ.98ರಷ್ಟು ಪ್ರಾಮಾಣಿಕ, ಪಾರದರ್ಶಕ ಹಾಗೂ ವೈಜ್ಞಾನಿಕವಾಗಿ ಮೂಡಿ ಬಂದಿದೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಶೇ.90ರಷ್ಟು ಅಂಕಿ ಅಂಶ ದಾಖಲಾದರೆ, ಆ ವರದಿ ಪರಿಪೂರ್ಣ ವರದಿಯಾಗಲಿದೆ. ಅದೇ ಮಾನದಂಡದಲ್ಲಿ ನಮ್ಮ ಸಮಿತಿ ಸಿದ್ಧಪಡಿಸಿರುವ ವರದಿ ಪರಿಪೂರ್ಣ ವರದಿಯಾಗಿದೆ ಎಂದು ವಿವರಿಸಿದರು.

ಕಾಂತರಾಜು ಆಯೋಗಕ್ಕೆ ಬೇರೆ ಬೇರೆ ಸಮುದಾಯದ ಐವರನ್ನು ಸದಸ್ಯರಾಗಿ ಸರ್ಕಾರ ನೇಮಿಸಿತ್ತು. ತಜ್ಞರು, ಹಿಂದಿನ ಆಯೋಗಗಳ ಅಧ್ಯಕ್ಷರನ್ನು ಸಂಪರ್ಕಿಸಿ ಮಾಹಿತಿ ಕಲೆ ಹಾಕಲಾಗಿದೆ. ವಿವಿಧ ಮಾನದಂಡ ಅನುಸರಿಸಿ, ರಾಜ್ಯದಾದ್ಯಂತ 1,36,416 ಸಿಬ್ಬಂದಿ, 2,500 ಮುಖ್ಯ ತರಬೇತಿದಾರರು, 22,189 ಮೇಲ್ವಿಚಾರಕರು ಈ ಸಮೀಕ್ಷೆಯಲ್ಲಿ ಕೆಲಸ ನಿರ್ವಹಿಸಿದ್ದಾರೆ. ಈ ವೇಳೆ 1351 ಜಾತಿಗಳನ್ನು ಪಟ್ಟಿ ಮಾಡಲಾಗಿತ್ತು. ಅದರಲ್ಲಿ 2–3 ಸಮುದಾಯ ಮಾತ್ರ ಜಾತಿ ಜನಗಣತಿ ವರದಿಗೆ ವಿರೋಧಿಸುತ್ತಿರುವುದು ಖಂಡನೀಯ. ವರದಿ ವೈಜ್ಞಾನಿಕವಾಗಿದ್ದು, ಊಹಾಪೋಹಗಳಿಗೆ ಜನ ಆಸ್ಪದ ನೀಡಬಾರದು. ಸಮೀಕ್ಷೆಯಲ್ಲಿ 55 ಬಗೆಯ ಅಂಶಗಳ ಮಾಹಿತಿಗಳನ್ನು ಜನರಿಂದ ಕಲೆ ಹಾಕಲಾಗಿದೆ ಎಂದರು.

ಜನ ಯಾವ ಬಗೆಯ ಮನೆಯಲ್ಲಿ ವಾಸಿಸುತ್ತಿದ್ದಾರೆ. ಮನೆಯ ಯಜಮಾನ ಯಾರು, ಇತರರು ಎಷ್ಟು ಮಂದಿ, ಯಾವ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಾರೆ. ಎಂತಹ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಎಂಬ ಮಾಹಿತಿಯನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿ ಬಗ್ಗೆಯೂ ಬೆಳಕು ಚೆಲ್ಲಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಸಮುದಾಯವೊಂದರ 2.50 ಲಕ್ಷ ಕುಟುಂಬವಿದ್ದು, ಅವರಲ್ಲಿ 25 ಸಾವಿರ ಮಂದಿ ಇಂದಿಗೂ ಗುಡಿಸಲಿನಲ್ಲಿ ವಾಸಿಸುತ್ತಿದ್ದಾರೆ. ಇಂತಹ ಸಮುದಾಯಗಳಿಗೆ ಕಾಂತರಾಜು ವರದಿ ನ್ಯಾಯ ಹಾಗೂ ಸೌಲಭ್ಯ ಒದಗಿಸಲಿದೆ. ಇಂತಹ ಅನೇಕ ಸಮುದಾಯಗಳಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡಲಾಗಿದೆ. ಜಿಲ್ಲಾಧಿಕಾರಿ, ವಿಭಾಗಾಧಿಕಾರಿ, ತಹಶೀಲ್ದಾರರ ಮೂಲಕ ಸಮೀಕ್ಷೆ ನಡೆದಿದೆ. ಹೀಗಾಗಿ ಆಯೋಗದ ಸದಸ್ಯರು ಕಚೇರಿಯಲ್ಲಿ ಕುಳಿತು

● 10ನೇ ಪುಟಕ್ಕೆ

ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಆರೋಗ್ಯ ಅಧಿಕಾರಿಗಳ ಅನುಮಾನ ನಡೆ!?

ಐದು ತಿಂಗಳ ಹಿಂದೆಯೇ ಮಾತಾ ಆಸ್ಪತ್ರೆಗೆ ನೋಟಿಸ್ ನೀಡಿದಂತೆ ರೂಪಿಸಿದ್ದ 'ಮಾಸ್ಟರ್ ಪ್ಲಾನ್' ಫೇಲ್!!

ಮೈಸೂರು, ನ.29– ಇಡೀ ರಾಜ್ಯವನ್ನೇ ತಲ್ಲಣಗೊಳಿಸಿರುವ ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಮೈಸೂರಿನ ಉದಯಗಿರಿಯಲ್ಲಿರುವ ಮಾತಾ ಆಸ್ಪತ್ರೆಯ ವಿರುದ್ಧ ಈ ಹಿಂದೆಯೇ ಕ್ರಮ ಕೈಗೊಳ್ಳಲು ಮುಂದಾಗಿದ್ದೆವು ಎಂದು ಬಿಂಬಿಸಲು, ನಕಲಿ ದಾಖಲೆ ಸೃಷ್ಟಿಸಲು ಹೋಗಿ ತಾಲೂಕು ಆರೋಗ್ಯ ಇಲಾಖೆ ಅಧಿಕಾರಿಗಳು ಈಗ ಇಕ್ಕಟ್ಟಿಗೆ ಸಿಲುಕಿದ್ದಾರೆ.


ವಿವರ: ಮೈಸೂರಿನ ಮಾತಾ ಆಸ್ಪತ್ರೆಯಲ್ಲಿ ಕಳೆದ ಮೂರು ವರ್ಷಗಳಿಂದ ಹೆಣ್ಣು ಭ್ರೂಣ ಹತ್ಯೆಗಳು ನಿರಂತರವಾಗಿ ನಡೆಯುತ್ತಿತ್ತು ಎಂಬುದು ಕಳೆದ ಶುಕ್ರವಾರ ಅಧಿಕೃತವಾಗಿ ಬಹಿರಂಗಗೊಂಡಿದ್ದು, ಈ ಸಂಬಂಧದ ವರದಿಯು 'ಮೈಸೂರು ಮಿತ್ರ'ನಲ್ಲಿ ಶನಿವಾರ ಪ್ರಕಟಗೊಂಡಿತ್ತು.

ಪ್ರಕರಣ ಅಧಿಕೃತವಾಗಿ ಬೆಳಕಿಗೆ ಬಂದ ಐದು ದಿನಗಳ ನಂತರ ಬುಧವಾರ ಬೆಳಗ್ಗೆ ಮಾತಾ ಆಸ್ಪತ್ರೆಯ ಗೋಡೆಯಲ್ಲಿ ನೋಟೀಸ್‌ವೊಂದು ಪ್ರತ್ಯಕ್ಷವಾಗಿತ್ತು. ತಾಲೂಕು ಆರೋಗ್ಯ ಇಲಾಖೆ ಅಧಿಕಾರಿಗಳು, ಕಳೆದ ಸುಮಾರು ಮೂರು ತಿಂಗಳಿಂದ ಮುಚ್ಚಲ್ಪಟ್ಟಿರುವ ಮಾತಾ ಆಸ್ಪತ್ರೆಯ ಗೋಡೆಗೆ ಮಂಗಳವಾರ ರಾತ್ರೋ–ರಾತ್ರಿ ಈ ನೋಟಿಸ್ ಅಂಟಿಸಿದ್ದಾರೆ.

ಐದು ತಿಂಗಳ ಹಿಂದಿನ ದಿನಾಂಕ: ಮಾತಾ ಆಸ್ಪತ್ರೆಯ ಗೋಡೆಗೆ ನೋಟೀಸ್ ಅಂಟಿಸಿದ ಆರೋಗ್ಯ ಇಲಾಖೆ ಅಧಿಕಾರಿಗಳು, ಅದರಲ್ಲಿ ದಿನಾಂಕವನ್ನು ನಮೂದು ಮಾಡುವಲ್ಲಿ ಎಡವಟ್ಟು ಮಾಡಿದ್ದಾರೆ. ಕಳೆದ ಜೂನ್ 22ರ ದಿನಾಂಕವಿರುವ ಈ ನೋಟಿಸ್ ಅನ್ನು ಮಂಗಳವಾರ ರಾತ್ರೋ–ರಾತ್ರಿ ಅಂಟಿಸಿದ್ದು, ಈ ಆಸ್ಪತ್ರೆಯಲ್ಲಿ ಅನಧಿಕೃತವಾಗಿ ಭ್ರೂಣ ಹತ್ಯೆ ನಡೆಯುತ್ತಿರುವ ಬಗ್ಗೆ ಮೌಖಿಕ ದೂರಿನನ್ವಯ ನೋಟಿಸ್ ಜಾರಿ ಮಾಡಿರುವುದಾಗಿ ತಿಳಿಸಲಾಗಿದೆ. ಈ ಆಸ್ಪತ್ರೆಯಲ್ಲಿ ಕಳೆದ 3 ತಿಂಗಳಲ್ಲಿ ನಡೆದಿರುವ ಭ್ರೂಣ ತಪಾಸಣೆ ಮಾಹಿತಿಯನ್ನು ನೋಟಿಸ್ ತಲುಪಿದ 7 ದಿನಗಳ ಒಳಗಾಗಿ ನೀಡಬೇಕೆಂದು ಅದರಲ್ಲಿ ಉಲ್ಲೇಖಿಸಲಾಗಿದೆ.

ನಕಲಿ ದಾಖಲೆ ಸೃಷ್ಟಿ: ತಾಲೂಕು ಆರೋಗ್ಯ ಇಲಾಖೆಯ ಅಧಿಕಾರಿಗಳು,

> "ಮಾತಾ ಆಸ್ಪತ್ರೆ ಗೋಡೆ ಮೇಲೆ ಹಳೇ ದಿನಾಂಕ ನಮೂದಿಸಿ ನೋಟಿಸ್ ಅಂಟಿಸಿರುವ ಬಗ್ಗೆ ಇಂದು ಬೆಳಗ್ಗೆ ನನಗೆ ಮಾಹಿತಿ ಬಂತು. ಈ ಹಿನ್ನೆಲೆಯಲ್ಲಿ ನೋಟಿಸ್‌ನಲ್ಲಿ ಸಹಿ ಮಾಡಿರುವ ತಾಲೂಕು ಆರೋಗ್ಯಾಧಿಕಾರಿ ಡಾ. ರಾಜೇಶ್ವರಿ ಅವರಿಗೆ ವಿವರಣೆ ಕೇಳಿ ನೋಟಿಸ್ ಜಾರಿ ಮಾಡಿದ್ದೇನೆ. ಅವರಿಂದ ಸಮಜಾಯಿಷಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.
>
> –ಡಾ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ



ಕರ್ನಾಟಕ ಸರ್ಕಾರ
ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ, ಮೈಸೂರು ತಾಲ್ಲೂಕು, ಮೈಸೂರು
ದಿನಾಂಕ:22.06.2023



ಮಂಗಳವಾರ ರಾತ್ರೋ–ರಾತ್ರಿ ಅಂಟಿಸಿದ ಈ ನೋಟಿಸ್‌ನಲ್ಲಿ ಹಿಂದಿನ ದಿನಾಂಕವನ್ನು ನಮೂದಿಸಿ ಎಡವಟ್ಟು ಮಾಡಿದ್ದಾರೆ ಎಂಬುದನ್ನು ಕೆಲವರು ಒಪ್ಪಲು ಸಿದ್ಧರಿಲ್ಲ. ಈ ಆಸ್ಪತ್ರೆಯಲ್ಲಿ ಸತತವಾಗಿ ಭ್ರೂಣ ಹತ್ಯೆ ನಡೆಯುತ್ತಿದ್ದರೂ, ಕಣ್ಮುಚ್ಚಿ ಕುಳಿತಿದ್ದ ತಾಲೂಕು ಆರೋಗ್ಯ ಇಲಾಖೆ ಅಧಿಕಾರಿಗಳು ಐದು ತಿಂಗಳ ಹಿಂದೆಯೇ ಆಸ್ಪತ್ರೆಗೆ ನೋಟಿಸ್ ನೀಡಿದ್ದೇವೆ ಎಂಬ ನಕಲಿ ದಾಖಲೆಯನ್ನು ಸೃಷ್ಟಿಸಿದ್ದಾರೆ. ಅದಕ್ಕೆ ಪೂರಕವೆಂಬಂತೆ ಆಸ್ಪತ್ರೆಯ ಗೋಡೆಗೆ ನೋಟಿಸ್ ಅಂಟಿಸಿ, ಅದರ ಫೋಟೋ ತೆಗೆದುಕೊಂಡು ತಾಲೂಕು ಆರೋಗ್ಯ ಇಲಾಖೆ ಕಚೇರಿಯ ಕಡತದಲ್ಲಿರಿಸಿಕೊಳ್ಳುವುದೇ ಅಧಿಕಾರಿಗಳ ಉದ್ದೇಶವಿದ್ದಿರಬಹುದು. ಆದರೆ ನೋಟಿಸ್ ಅಂಟಿಸಿ ಫೋಟೋ ತೆಗೆದ ನಂತರ ಅದನ್ನು ಕಿತ್ತು ಹಾಕದೇ ಬಿಟ್ಟಿದ್ದು, ಯಡವಟ್ಟಾಗಿದೆ ಅಷ್ಟೇ ಎಂದು ಕೆಲವರು ವಿಶ್ಲೇಷಿಸಿದ್ದಾರೆ.

ಈ ಆಸ್ಪತ್ರೆ ಸುಮಾರು ಮೂರು ತಿಂಗಳಿಂದ ಬಂದ್ ಆಗಿರುವುದನ್ನು ಉಲ್ಲೇಖಿಸಿ ತಾವು ನೋಟಿಸ್ ನೀಡಿದ ಕಾರಣ ಆಸ್ಪತ್ರೆಯನ್ನು ಬಂದ್ ಮಾಡಿದ್ದಾರೆ ಎಂದು ತಾಲೂಕು ಆರೋಗ್ಯ ಇಲಾಖೆ ಅಧಿಕಾರಿಗಳು ಬಿಂಬಿಸುತ್ತಿರುವುದಕ್ಕೂ ಈ ನೋಟಿಸ್ ಸಹಕಾರಿಯಾಗಿರುತ್ತಿತ್ತು ಎಂಬ ವಿಶ್ಲೇಷಣೆ ಕೇಳಿಬರುತ್ತಿದೆ. ಯಾವುದೇ ನೋಟಿಸ್ ನೀಡಬೇಕಾದರೂ, ಅದನ್ನು ಯಾರಿಗೆ ನೀಡುತ್ತಾರೋ ಅವರ ಹೆಸರನ್ನು ಉಲ್ಲೇಖಿಸಬೇಕಾಗುತ್ತದೆ. ವಿಚಿತ್ರವೆಂದರೆ ಮಾತಾ ಆಸ್ಪತ್ರೆ ಗೋಡೆಯ ಮೇಲೆ ಇಂದು ಪ್ರತ್ಯಕ್ಷವಾದ ತಾಲೂಕು ಆರೋಗ್ಯ ಇಲಾಖೆಯ ನೋಟಿಸ್‌ನಲ್ಲಿ ಈ ನೋಟಿಸ್ ಅನ್ನು ಯಾರಿಗೆ ನೀಡಲಾಗುತ್ತಿದೆ ಎಂಬ ಉಲ್ಲೇಖವೇ ಇಲ್ಲ. ಆದರೆ ಪ್ರತಿಗಳು ಎಂಬ ಸ್ಥಳದಲ್ಲಿ ಮೊದಲನೇ ಪ್ರತಿ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಎಂದು ನಮೂದಿಸಿದ್ದರೆ, 2ನೇ ಪ್ರತಿ ಚಂದನ್ ಬಲ್ಲಾಳ್, ಮಾಲೀಕರು, ಮಾತಾ ಆಸ್ಪತ್ರೆ ಉದಯಗಿರಿ ಎಂದು ನಮೂದಾಗಿದೆ. 3ನೆಯದು ಕಚೇರಿ ಪ್ರತಿ. ಮಾತಾ ಆಸ್ಪತ್ರೆ ಮಾಲೀಕ ಚಂದನ್ ಬಲ್ಲಾಳ್‌ಗೆ ನೋಟಿಸ್‌ನ ಪ್ರತಿಯನ್ನು ರವಾನಿಸಲಾಗಿದೆ ಎಂದರೆ, ಮೂಲ ನೋಟಿಸ್ ಯಾರಿಗೆ ಎಂಬುದರ ಬಗ್ಗೆಯೇ ಈ ನೋಟಿಸ್‌ನಲ್ಲಿ ಗೊಂದಲ ಉಂಟಾಗಿದೆ. ಒಟ್ಟಾರೆ ಪ್ರಕರಣ ಬೆಳಕಿಗೆ ಬರುವ ಮುನ್ನವೇ ನಾವು ಕಾರ್ಯಪ್ರವೃತ್ತರಾಗಿದ್ದೆವು ಎಂದು ದಾಖಲೆ ಸೃಷ್ಟಿಸಲು ಹೋಗಿ ತಾಲೂಕು ಆರೋಗ್ಯ ಇಲಾಖೆ ಅಧಿಕಾರಿಗಳು ಭಾರಿ ಎಡವಟ್ಟನ್ನೇ ಮಾಡಿಕೊಂಡಿದ್ದಾರೆ.

ವಿವಿಧ ಬೇಡಿಕೆ ಮುಂದಿಟ್ಟು ನಾಳೆ ರಾಜ್ಯಾದ್ಯಂತ ಪೌರಕಾರ್ಮಿಕರ ಪ್ರತಿಭಟನೆ



ಮೈಸೂರು,ನ.29(ಎಂಟಿವೈ)– ಒಳಚರಂಡಿ ಸಹಾಯಕ ಕಾರ್ಮಿಕರನ್ನು ಕಾಯಂ ಮಾಡುವುದೂ ಸೇರಿದಂತೆ ಪೌರಕಾರ್ಮಿಕರ ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಡಿ.1ರಂದು ಮೈಸೂರು ಸೇರಿದಂತೆ ರಾಜ್ಯಾದ್ಯಂತ ಏಕಕಾಲದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘ ಜಿಲ್ಲಾಧ್ಯಕ್ಷ ಎಸ್. ನಾಗರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ರಾಜ್ಯದ ಹತ್ತು ಮಹಾನಗರ ಪಾಲಿಕೆಯಲ್ಲಿರುವ 544 ಮಂದಿ ಒಳಚರಂಡಿ ಸಹಾಯಕ ಕಾರ್ಮಿಕರನ್ನು ಕಾಯಂ ಮಾಡಬೇಕು. ಪೌರಕಾರ್ಮಿಕರ, ಒಳಚರಂಡಿ ಸಹಾಯಕರ ಮತ್ತು ಮನೆ–ಮನೆ ಕಸ ಸಂಗ್ರಹ ಮಾಡುವ ವಾಹನ ಚಾಲಕರಿಗೆ ಮಾಡಿರುವ ನೇಮಕಾತಿ ನಿಯಮಗಳು ಅಂದರೆ ಸಿ ಅಂಡ್ ಆರ್ ನಿಯಮದ ಪ್ರಕಾರ ಕೇಡರ್ ಮತ್ತು ನೇಮಕಾತಿ ನಿಯಮಗಳು, ಪೌರಕಾರ್ಮಿಕರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರ ತಿದ್ದುಪಡಿ ತಂದು ಶೇ.100ರಷ್ಟು ಕಾಯಂ ಮಾಡಬೇಕೆಂದು ಒತ್ತಾಯಿಸಿದರು. ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇರಪಾವತಿ ಪೌರ ಕಾರ್ಮಿಕರಾಗಿ ಮೃತರಾದ ಕುಟುಂಬಗಳಿಗೆ ಅನುಕಂಪ ಆಧಾರದ ಕೆಲಸ ನೀಡಬೇಕು. ನೇರಪಾವತಿ ಪೌರಕಾರ್ಮಿಕರು ಮೃತರಾದರೆ ಶವ ಸಂಸ್ಕಾರಕ್ಕೆ 25 ಸಾವಿರ ರೂ.ಗಳನ್ನು ನೀಡಬೇಕು. ಅವಘಡ ಸಂಭವಿಸಿದರೆ ಪರಿಹಾರವಾಗಿ 10 ಲಕ್ಷಗಳನ್ನು ನೀಡಬೇಕು. ನೇರಪಾವತಿ ಪೌರಕಾರ್ಮಿಕರಾಗಿ ನಿವೃತ್ತಿಯಾದರೆ 10 ಲಕ್ಷ ರೂ. ಪರಿಹಾರ ನೀಡಬೇಕು. ಒಳಚರಂಡಿ ಸಹಾಯಕ ಕಾರ್ಮಿಕರಿಗೆ ಮತ್ತು ಮನೆ–ಮನೆ ಕಸ ಸಂಗ್ರಹ ಮಾಡುವ ವಾಹನ ಚಾಲಕರನ್ನು ಖಾಯಂ ಮಾಡಬೇಕು. ರಾಜ್ಯದ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೇರಪಾವತಿ, ಹೊರ ಗುತ್ತಿಗೆ ಪೌರಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ಲೋಡರ್ಸ್, ಕ್ಲೀನರ್ಸ್, ವಾಹನ ಚಾಲಕರು ಮತ್ತು ಸಹಾಯಕರನ್ನು ಕೂಡಲೇ ಕಾಯಂಗೊಳಿಸಲು ಆಗ್ರಹಿಸಿ ರಾಜ್ಯಾದ್ಯಂತ ಬೃಹತ್ ಪ್ರತಿಭಟನಾ ಧರಣಿ ನಡೆಸಲಾಗುತ್ತಿದೆ ಎಂದರು.

ಮೈಸೂರಲ್ಲಿ ಡಿ.1ರಂದು ಬೆಳಗ್ಗೆ 11ಕ್ಕೆ ಗನ್‌ಹೌಸ್ ವೃತ್ತದಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಮಹಾನಗರ ಪಾಲಿಕೆ ಕಚೇರಿವರೆಗೆ ಮಾಜಿ ಮೇಯರ್, ನಾರಾಯಣ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಪದಾಧಿಕಾರಿಗಳಾದ ಎಸ್.ಎಂ.ಪಳನಿಸ್ವಾಮಿ, ಆರ್.ಶಿವಣ್ಣ, ಹರೀಶ್‌ಕುಮಾರ್, ಪಳನಿ, ಶೇಷ ಹಾಗೂ ಇನ್ನಿತರರು ಇದ್ದರು.

ಸಂಶೋಧನೆ ಫಲ ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಬಳಕೆ ಆಗಲಿ

● ಇಸ್ರೋ ವಿಶ್ರಾಂತ ಅಧ್ಯಕ್ಷ ಕಿರಣ್‌ಕುಮಾರ್ ಸಲಹೆ ● ಭಾರತ ಎಲ್ಲಾ ಕ್ಷೇತ್ರ ಸಾಧನೆ ಅದ್ವಿತೀಯ; ಪ್ರಶಂಸೆ

ಮೈಸೂರು,ನ.29(ಎಸ್‌ಪಿಎನ್)–ಪ್ರಸ್ತುತ ತಂತ್ರಜ್ಞಾನ, ವಿಜ್ಞಾನ ಹಾಗೂ ಸಂಶೋಧನಾ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಭಾರತ ಮುಂದುವರೆಯುತ್ತಿದೆ. ಈ ಸಂಶೋಧನೆಯ ಫಲ ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಬಳಕೆಯಾಗಬೇಕು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ)ಯ ವಿಶ್ರಾಂತ ಅಧ್ಯಕ್ಷ ಡಾ.ಎ.ಎಸ್.ಕಿರಣ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಆವರಣದ ಭೌತ ವಿಜ್ಞಾನ ವಿಭಾಗದ ಐನ್‌ಸ್ಟೀನ್ ಸಭಾಂಗಣದಲ್ಲಿ ಡಾ.ಹಾ.ಮಾ.ನಾಯಕ ಪ್ರತಿಷ್ಠಾನ ಹಾಗೂ ಭೌತವಿಜ್ಞಾನ ಸಹಯೋಗದೊಂದಿಗೆ ಆಯೋಜಿಸಿದ್ದ 'ಚಂದ್ರ ಸ್ಪರ್ಷ– ಸವಾಲುಗಳು' ವಿಷಯ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.



ಡಾ.ಹಾ.ಮಾ.ನಾಯಕ ಪ್ರತಿಷ್ಠಾನ ಹಾಗೂ ಭೌತಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಬುಧವಾರ ಆಯೋಜಿಸಿದ್ದ 'ಚಂದ್ರ ಸ್ಪರ್ಷ– ಸವಾಲುಗಳು' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ)ಯ ವಿಶ್ರಾಂತ ಅಧ್ಯಕ್ಷ ಡಾ.ಎ.ಎಸ್.ಕಿರಣ್‌ಕುಮಾರ್ ಉದ್ಘಾಟಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಎಸ್.ಎಲ್.ಭೈರಪ್ಪ, ಕಾರ್ಯದರ್ಶಿ ಪ್ರೊ.ಪಿ.ವೆಂಕಟರಾಮಯ್ಯ, ಖಜಾಂಚಿ ಡಾ.ಕೆ.ಮಹದೇವ್ ಉಪಸ್ಥಿತರಿದ್ದರು.

1962ರಲ್ಲಿ ಭಾರತ ಸರ್ಕಾರ ಬಾಹ್ಯಾಕಾಶ ಸಂಶೋಧನಾ ರಾಷ್ಟ್ರೀಯ ಸಮಿತಿಯನ್ನು ಇಂಡಿಯನ್ ಸ್ಪೇಸ್ ಪ್ರೋಗ್ರಾಂ ರೂಪಿಸಲು ಸ್ಥಾಪಿಸಿತು. ಡಾ ವಿಕ್ರಮ್ ಸಾರಾಭಾಯ್ ಅದರ ಮೊದಲ ಅಧ್ಯಕ್ಷರಾದರು. ಅಂತಿಮವಾಗಿ 1969ರಲ್ಲಿ ಅದು ಇಸ್ರೋ ಆಗಿ ಬೆಳೆಯಿತು. ಇದು ಬಾಹ್ಯಕಾಶ ಕ್ಷೇತ್ರದಲ್ಲೇ ಪ್ರಮುಖ ಕೇಂದ್ರ, ಇದು ತಿರುವನಂತಪುರಂನಲ್ಲಿದೆ. ಇಲ್ಲಿ ರಾಕೆಟ್, ಉಡಾವಣಾ ವಾಹಕಗಳು ಮತ್ತು ಉಪಗ್ರಹಗಳು ನಿರ್ಮಾಣಗೊಳ್ಳುತ್ತಿವೆ. ಅದಕ್ಕೆ ಸಂಬಂಧಿಸಿದ ತಾಂತ್ರಿಕ ವ್ಯವಸ್ಥೆಯನ್ನೂ ಇಲ್ಲಿ ಮಾಡಲಾಗುತ್ತಿದೆ ಎಂದರು.

ದೇಶದ ಬೆಳವಣಿಗೆ ಆದ್ಯತೆ: ಬೇರೆ ದೇಶಗಳಲ್ಲಿ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯನ್ನು ಮಿಲಿಟರಿ ಉನ್ನತೀಕರಣಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಆದರೆ, ನಮ್ಮ ದೇಶದಲ್ಲಿ ಇಸ್ರೋ ಸ್ಥಾಪಿತ ದಿನಗಳಲ್ಲಿ ದೇಶದ ಬೆಳವಣಿಗೆಗೆ ಮೊದಲ ಆದ್ಯತೆ ನೀಡಿ, ಸಂಶೋಧನೆಗಳು ನಡೆದವು. 1975ರಲ್ಲಿ ಇಸ್ರೋ ಸಂಶೋಧಿಸಿದ ಉಪಗ್ರಹವನ್ನು ಸೋವಿಯತ್ ರಷ್ಯಾ ಬಾಹ್ಯಾಕಾಶ ಸಂಸ್ಥೆಯಿಂದ ಉಡಾವಣೆಗೊಳಿಸಿದ ಉಪಗ್ರಹ ಆರ್ಯಭಟ ಇತಿಹಾಸ ನಿರ್ಮಿಸಿತು. ನಂತರ 1980ರಲ್ಲಿ ಮತ್ತೊಂದು ಉಪಗ್ರಹವನ್ನು ಉಡಾವಣೆಗೊಳಿಸಲಾಯಿತು. ಇಂದು ಕಕ್ಷೆಯ ಉಡಾವಣೆಗಳನ್ನು ಕೈಗೊಳ್ಳುವ ಸಾಮರ್ಥ್ಯ ಹೊಂದಿರುವ 7ನೇ ದೇಶವಾಗಿ ಭಾರತ ಸಾಧನೆ ಮಾಡಿದೆ. ಇಂದು ರಾಕೆಟ್ ಇಂಜಿನ್‌ಗಳ ಸ್ವದೇಶಿ ತಂತ್ರಜ್ಞಾನವನ್ನು ಹೊಂದಿದೆ ಎಂದು ಇಸ್ರೋ ಸಾಧನೆಯನ್ನು ಕೊಂಡಾಡಿದರು.

ಬಾಹ್ಯಾಕಾಶ ಕ್ಷೇತ್ರದಲ್ಲಿ ಚಂದ್ರಯಾನ–1, ಚಂದ್ರಯಾನ–2 ಹಾಗೂ ಚಂದ್ರಯಾನ–3ರ ಉಪಗ್ರಹಗಳ ಉಡಾವಣೆಗಳಿಂದ ಮುಂಚೂಣಿ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ. ಅಲ್ಲದೆ, ಚಂದ್ರಯಾನ–2ರ ಉಪಗ್ರಹ ಉಡಾವಣೆಯಲ್ಲಿ ಆದ ಲೋಪಗಳನ್ನು ಸರಿಪಡಿಸಿಕೊಂಡು ಮುಂದಿನ ನಾಲ್ಕು ವರ್ಷಗಳು ಚಂದ್ರನ ದಕ್ಷಿಣ ಧ್ರುವದಲ್ಲಿ ಅಧ್ಯಯನ ನಡೆಸಿ ಚಂದ್ರಯಾನ –3 ಯಶಸ್ವಿಯಾಗಿ ಉಡಾವಣೆಗೊಳ್ಳಲು ಸಾಧ್ಯವಾಯಿತು.

ಈ ಯಶಸ್ವಿನಿಂದ ವಿದೇಶಿ ಬಾಹ್ಯಾಕಾಶ ಸಂಸ್ಥೆಗಳು ಬೆರಗಾಗುವಂತೆ ನಮ್ಮ ಇಸ್ರೋ ವಿಜ್ಞಾನಿಗಳು ಮಾಡಿದ್ದಾರೆ. ಇದರ ಹಿಂದೆ ಸಾಕಷ್ಟು ವಿಜ್ಞಾನಿಗಳ ಶ್ರಮವಿದೆ. ಈಗಾಗಲೇ ಆದಿತ್ಯ ಎಲ್1 ಉಪಗ್ರಹ ಉಡಾವಣೆ ಮಾಡಲಾಗಿದೆ. 2040ರ ವೇಳೆಗೆ ಚಂದ್ರನಲ್ಲಿ ಮಾನವ ಸಹಿತ ಉಪಗ್ರಹ ಉಡಾವಣೆಗೆ ಇಸ್ರೋ ಸಜ್ಜುಗೊಳ್ಳುತ್ತಿದೆ. ಅದೇ ರೀತಿ ಶುಕ್ರಯಾನ, ಮಂಗಳಯಾನ ಉಪಗ್ರಹ ಉಡಾವಣೆಗಳಿಗೆ ಸಾಕಷ್ಟು ಅಧ್ಯಯನ ನಡೆಯುತ್ತಿದೆ ಎಂದು ವಿವರಿಸಿದರು.

ಸಾಹಿತ್ಯ ಓದುತ್ತೇನೆ: ನಾನು ಸಾಹಿತ್ಯದ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದೇನೆ. ಅದರಲ್ಲಿ ಹಿರಿಯ ಕಾದಂಬರಿಕಾರರಾದ ಡಾ.ಎಸ್.ಎಲ್. ಭೈರಪ್ಪ, ಡಾ.ಹಾ.ಮಾ.ನಾಯಕ್ ಸೇರಿದಂತೆ ಇತರೆ ಖ್ಯಾತನಾಮರ ಸಾಹಿತ್ಯಗಳನ್ನು ಓದಿದ್ದೇನೆ. ಅಲ್ಲದೆ, ಬೇರೆ ಬೇರೆ ಕ್ಷೇತ್ರದ ಪುಸ್ತಕಗಳ ಅಧ್ಯಯನ ಪ್ರತಿಯೊಬ್ಬ ಸಂಶೋಧಕನಿಗೆ ಅಗತ್ಯ. ಸಂಶೋಧನೆಗೊಂಡ ತಂತ್ರಜ್ಞಾನ, ವಿಜ್ಞಾನ ಅಂಶಗಳು ಸಮುದಾಯದ ಸೇವೆಯಲ್ಲಿ ಅಡಕವಾದಾಗ ಮಾತ್ರ ಅದನ್ನು ಕಂಡು ಹಿಡಿದಿದ್ದಕ್ಕೂ ಸಾರ್ಥಕ. ಅದಕ್ಕೆ ಉದಾಹರಣೆ ನೀಡುವುದಾದರೆ ಕೋವಿಡ್ ಸಂದರ್ಭದಲ್ಲಿ ಭಾರತ ಸಂಶೋಧಿಸಿದ ಕೋವಿಡ್ ವ್ಯಾಕ್ಸಿನ್ ಅನ್ನು ಪ್ರಪಂಚದ ಬೇರೆಬೇರೆ ರಾಷ್ಟ್ರಗಳಿಗೂ ಉಚಿತವಾಗಿ ಮಾನವೀಯ ಆಧಾರದ ಮೇಲೆ ವಿತರಿಸಲಾಯಿತು. ಇದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಗೌರವ ಮತ್ತಷ್ಟು ಹೆಚ್ಚಾಯಿತು ಎಂದು ವಿವರಿಸಿದರು. ಈ ವೇಳೆ ಡಾ.ಹಾ.ಮಾ.ನಾಯಕ ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ.ಪಿ. ವೆಂಕಟರಾಮಯ್ಯ, ಖಜಾಂಚಿ ಡಾ.ಕೆ. ಮಹದೇವ್ ಉಪಸ್ಥಿತರಿದ್ದರು.

ವಿಜ್ಞಾನದ ಅರಿವಿದ್ದರೆ ಉತ್ತಮ ಸಾಹಿತ್ಯ ರಚನೆ

ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅಭಿಮತ

ಮೈಸೂರು: ಪ್ರಸ್ತುತ ಹಳೆಯ ಸಂಶೋಧನೆಗಳನ್ನೇ ಶ್ರೇಷ್ಠ ಎನ್ನುವ ಮನಸ್ಥಿತಿಯಿಂದ ಹೊರಬಂದು ಹೊಸಹೊಸ ಆವಿಷ್ಕಾರಗಳ ಕುರಿತು ಯುವ ಸಾಹಿತಿಗಳು ಜ್ಞಾನ ಪಡೆದುಕೊಳ್ಳಬೇಕು. ಆಗ ಮಾತ್ರ ಮತ್ತಷ್ಟು ಉತ್ತಮ ಸಾಹಿತ್ಯ ರಚಿಸಲು ಸಾಧ್ಯ ಎಂದು ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಸಲಹೆ ನೀಡಿದರು.

ಸಾಹಿತ್ಯ ಪಕ್ವಗೊಳ್ಳಲು ವಿಜ್ಞಾನದ ಬಗ್ಗೆಯೂ ಸಾಹಿತಿಗೆ ತಿಳುವಳಿಕೆ ಇರಬೇಕು. ಹಿಂದಿನ ಮನಸ್ಥಿತಿಯಿಂದ ಹೊರಬಂದು ಹೊಸ ಆವಿಷ್ಕಾರಗಳ ಕುರಿತು ಸಾಹಿತಿಗಳು ಜ್ಞಾನ ಪಡೆದುಕೊಳ್ಳಬೇಕು. ಆಗ ಇನ್ನಷ್ಟು ಉತ್ತಮ ಬರಹ ಸಾಧ್ಯ ಎಂದರು.

ಹಿರಿಯ ಸಾಹಿತಿ ಹಾ.ಮಾ.ನಾಯಕ ಅವರು, ಕೇವಲ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೇ ವಿಜ್ಞಾನ ಕ್ಷೇತ್ರದಲ್ಲಿಯೂ ಆಸಕ್ತಿ ರೂಢಿಸಿಕೊಂಡಿದ್ದರು,. ಅವರು ವಿಜ್ಞಾನ ಸಂಘಟನೆಯಲ್ಲೂ ತೊಡಗಿ, ಯುವಕರಿಗೆ ಮಾರ್ಗದರ್ಶನ ನೀಡುತ್ತಿದ್ದರು. ನಾನೇನಾದರೂ ಸಾಹಿತಿ ಆಗದಿದ್ದರೆ ಸೈದ್ಧಾಂತಿಕ ಭೌತಶಾಸ್ತ್ರದ (ಥಿಯರಿಟಿಕಲ್ ಫಿಜಿಕ್ಸ್) ಬಗ್ಗೆ ಆಸಕ್ತಿ ಮೂಡಿಸಿಕೊಳ್ಳುತ್ತಿದ್ದೆ ಎಂದರು. ವಿಜ್ಞಾನ ಕ್ಷೇತ್ರದಲ್ಲಿ ನ್ಯೂಟನ್ ಕಣ್ಣಿಗೆ ಕಂಡಿದ್ದನ್ನು ಪ್ರಮೇಯ ಮಾಡಿದರೆ, ಐನ್‌ಸ್ಟೀನ್ ಕಣ್ಣಿಗೆ ಕಾಣದ ವಿಷಯ ಕುರಿತು ಸೂತ್ರ ಕಂಡು ಹಿಡಿದರು. ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಅನೇಕ ಸಂಶೋಧನೆ, ಪ್ರಯೋಗ ಮಾಡಿದ್ದು, ಜಗತ್ತು ಈ ಗೌರವ ತನ್ನತ್ತ ತಿರುಗಿ ನೋಡುವಂತೆ ಮಾಡಿರುವ ಇಸ್ರೋ ಹಾಗೂ ವಿಜ್ಞಾನ ಕ್ಷೇತ್ರಕ್ಕೆ ಸಲ್ಲುತ್ತದೆ ಎಂದು ತಿಳಿಸಿದರು.

ಅಮೇರಿಕಾದ ಶಿಕ್ಷಣ ವ್ಯವಸ್ಥೆ ನಮ್ಮಲ್ಲೂ ಬರಬೇಕು

ಹಿರಿಯ ಜಾನಪದ ವಿದ್ವಾಂಸ ಪ್ರೊ.ಹಿ.ಶಿ.ರಾಮಚಂದ್ರೇಗೌಡ ಅಭಿಮತ



ಮೈಸೂರು, ನ.29(ಜಿಎ)–ಭಾರತದಲ್ಲಷ್ಟೇ ಇನ್ನೂ ಪಠ್ಯ ಆಧಾರಿತ ಶಿಕ್ಷಣ ವ್ಯವಸ್ಥೆ ಇದೆ. ಅಮೆರಿಕಾದಲ್ಲಿ ಶಾಲೆಗೆ ಬಂದಾಕ್ಷಣ ವಿದ್ಯಾರ್ಥಿಗಳಿಗೆ ಕ್ಷೇತ್ರ ಕರ್ತವ್ಯಕ್ಕೆ ನಿಯೋಜನೆ ಮಾಡುವ ಮೂಲಕ ಅವರಿಗೆ ಹೊಸದನ್ನು ಕಲಿಯಲು ಪ್ರೇರಣೆ ಮತ್ತು ಪ್ರೋತ್ಸಾಹ ನೀಡುತ್ತಾರೆ. ಅಂತಹ ವ್ಯವಸ್ಥೆ ನಮ್ಮಲ್ಲೂ ಬರಬೇಕಿದೆ ಎಂದು ಹಿರಿಯ ಜಾನಪದ ವಿದ್ವಾಂಸ ಪ್ರೊ.ಹಿ.ಶಿ.ರಾಮಚಂದ್ರೇಗೌಡ ಅಭಿಪ್ರಾಯಪಟ್ಟರು.

ಮಹಾರಾಜ ಕಾಲೇಜಿನ ಜ್ಯೂನಿಯರ್ ಬಿಎ ಹಾಲ್‌ನಲ್ಲಿ ಬುಧವಾರ ಪ್ರೊ.ವ.ನಂ. ಶಿವರಾಮು ಅವರ 'ಜನಪದ–ಜಾನಪದ' ಜಾನಪದ ಅಧ್ಯಯನ ಹಾಗೂ ಕ್ಷೇತ್ರ ಕಾರ್ಯ ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ನಮ್ಮ ಶಿಕ್ಷಣ ವ್ಯವಸ್ಥೆ ಯುವ ಜನಾಂಗಕ್ಕೆ ಬದುಕುವ ದಾರಿ ತೋರುತ್ತಿಲ್ಲ. ನಾವಿನ್ನೂ ಪಠ್ಯ ಮಾದರಿ ಶಿಕ್ಷಣದಲ್ಲೇ ಇದ್ದೇವೆ. ಅದರಿಂದ ಹೊರಬಂದು ಹೊಸತನ ಮತ್ತು ಸಂಶೋಧನಾತ್ಮಕ ಶಿಕ್ಷಣಕ್ಕೆ ಅವಕಾಶ ನೀಡಿದಾಗ ಮಾತ್ರ ಯುವ ಜನಾಂಗ ಸದೃಢವಾಗಿ ತಮ್ಮ ಬದುಕು ಕಂಡುಕೊಳ್ಳಲು ಸಾಧ್ಯ ಎಂದರು. ಜಾನಪದಕ್ಕೆ ಯಾವುದೇ ಜಾತಿ ಧರ್ಮ ಇಲ್ಲ. ಅದು ಯಾರನ್ನೂ ದೂರ ಮಾಡುವುದಿಲ್ಲ. ಎಲ್ಲರನ್ನು ಒಳಗೊಳ್ಳುವುದೇ ಜಾನಪದ. ಪುರುಷರಷ್ಟೇ ಜಾನಪದ ಕಲಾವಿದರಾಗಲು ಸಾಧ್ಯ ಎಂಬ ಕಲ್ಪನೆ ಇಂದು ದೂರವಾಗಿ ಸಾಕಷ್ಟು ಮಹಿಳೆಯರು ಇಂದು ಜಾನಪದ ಕಲಾರಂಗಕ್ಕೆ ಪ್ರವೇಶಿಸಿ ಹಾಡುತ್ತಾರೆ. ನೃತ್ಯ ಮಾಡುತ್ತಿದ್ದು, ಇದು ನಿರಂತರವಾಗಿ ನಡೆಯಬೇಕು ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ. ಎಲ್.ಸೋಮಶೇಖರಪ್ಪ ಆಡಳಿತಾಧಿಕಾರಿ ವಿಷಣ್ಮುಗಂ, ಇಫ್ರೋ ಪ್ರಧಾನ ಕಾರ್ಯದರ್ಶಿ ಡಾ.ಎಂ.ಬೈರೇಗೌಡ, ಜಾನಪದ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್.ಚೇತನ, ಪ್ರಾಧ್ಯಾಪಕರಾದ ಪ್ರೊ.ವಿಜಯಲಕ್ಷ್ಮಿ ಮನಾಪುರ, ಡಾ. ಜಯಲಕ್ಷ್ಮಿ ಸೀತಾಪುರ, ಮೈಲಹಳ್ಳಿ ರೇವಣ್ಣ ಉಪಸ್ಥಿತರಿದ್ದರು.

ಎನ್.ಆರ್.ಕ್ಷೇತ್ರದಲ್ಲಿ ಬೇರೆ ಪಕ್ಷದಿಂದ ಬರುವವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಮುನ್ನ ಶಾಸಕ ತನ್ವೀರ್ ಸೇಠ್ ಗಮನಕ್ಕೆ ತರಬೇಕು

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯ್ಯದ್ ಇಕ್ಬಾಲ್ ಒತ್ತಾಯ



ಮೈಸೂರು, ನ.29 (ಎಂಟಿವೈ)– ಮುಂಬರುವ ನಗರಪಾಲಿಕೆ ಚುನಾವಣೆ ಹಿನ್ನೆಲೆಯಲ್ಲಿ ಎನ್.ಆರ್.ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನಿಂದ ಹಲವರು ಕಾಂಗ್ರೆಸ್ ಸೇರುತ್ತಿದ್ದು, ಪಕ್ಷಕ್ಕೆ ಸೇರಿಸಿಕೊಳ್ಳುವ ಮುನ್ನ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಗಮನಕ್ಕೆ ತರುವಂತೆ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯ್ಯದ್ ಇಕ್ಬಾಲ್ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆ ವೇಳೆ ರಾಜ್ಯದಾದ್ಯಂತ ಕಾಂಗ್ರೆಸ್ ಗೆಲುವು ಸಾಧಿಸಿದ ಮೇಲೆ ತಮ್ಮ ಪಕ್ಷ ಸೇರುವವರ ಸಂಖ್ಯೆ ಹೆಚ್ಚಾಗಿದೆ. ಈ ಹಿಂದೆ ಬಿಜೆಪಿ, ಜೆಡಿಎಸ್ ಪಕ್ಷಗಳ ಅಭ್ಯರ್ಥಿ ಪರ ಕೆಲಸ ಮಾಡಿದವರು ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ ಆಗುತ್ತಿದ್ದಾರೆ. ಇವರು ಪಾಲಿಕೆ ಸದಸ್ಯತ್ವದ ಟಿಕೆಟ್‌ಗಳಿಗಾಗಿ ಆಗ್ರಹಿಸುವ ಸಾಧ್ಯತೆಯೂ ಇದೆ. ಹೊರಗಿನಿಂದ ಬಂದವರಿಗೆ ಟಿಕೆಟ್ ನೀಡಿದರೆ ಕಾಂಗ್ರೆಸ್‌ಗಾಗಿ ಹಲವು ವರ್ಷಗಳಿಂದ ದುಡಿದವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಹೀಗಾಗಿ ಸ್ಥಳೀಯ ಶಾಸಕರು ಹಾಗೂ ಮುಖಂಡರ ಅನುಮತಿ ಪಡೆದ ಬಳಿಕವಷ್ಟೇ ಅಂತಹವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂದು ಪಕ್ಷದ ವರಿಷ್ಠರಿಗೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಸ್.ರಾಜೇಶ್, ಶೌಕತ್ ಅಲಿಖಾನ್, ವಸೀಂ ಇದ್ದರು.

ಸೂರತ್ ಕೆಮಿಕಲ್ ಘಟಕದಲ್ಲಿ ಸ್ಫೋಟ: 24 ಕಾರ್ಮಿಕರಿಗೆ ಗಾಯ

ಸೂರತ್: ಗುಜರಾತ್‌ನ ಸೂರತ್‌ನಗರದಲ್ಲಿರುವ ರಾಸಾಯನಿಕ ಘಟಕದಲ್ಲಿ ಸ್ಫೋಟ ಸಂಭವಿಸಿದ್ದು, 24 ಕಾರ್ಮಿಕರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಚಿನ್ ಜಿಐಡಿಸಿ ಕೈಗಾರಿಕಾ ಪ್ರದೇಶದಲ್ಲಿರುವ ಕೆಮಿಕಲ್ ಫ್ಯಾಕ್ಟರಿಯಲ್ಲಿ ಬೆಳಗಿನ ಜಾವ 2 ಗಂಟೆ ಸುಮಾರಿಗೆ ಬೆಂಕಿ ಹೊತ್ತಿಕೊಂಡಿದ್ದು, ಅದರಲ್ಲಿ ಶೇಖರಿಸಲಾಗಿದ್ದ ದಹಿಸುವ ರಾಸಾಯನಿಕಗಳ ಸೋರಿಕೆಯಿಂದಾಗಿ ದೊಡ್ಡ ಟ್ಯಾಂಕ್‌ನಲ್ಲಿ ಸ್ಫೋಟ ಸಂಭವಿಸಿದೆ ಎಂದು ಸೂರತ್ ಉಸ್ತುವಾರಿ ಮುಖ್ಯ ಅಗ್ನಿಶಾಮಕ ಅಧಿಕಾರಿ ಬಸಂತ್ ಪರೀಕ್ ಹೇಳಿದ್ದಾರೆ. ಘಟನೆಯಲ್ಲಿ ಕನಿಷ್ಠ 24 ಕಾರ್ಮಿಕರು ಗಾಯಗೊಂಡಿದ್ದಾರೆ ಮತ್ತು ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ

ನಗರ ಸಶಸ್ತ್ರ ಮೀಸಲು ಪಡೆ ಚಾಂಪಿಯನ್



ಮೈಸೂರು, ನ.29(ಎಂಕೆ)– ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಚಾಂಪಿಯನ್ ಆಗಿ ಹೊರಹೊಮ್ಮಿತು.

ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪೊಲೀಸ್ ಕವಾಯತು ಮೈದಾನದಲ್ಲಿ 2 ದಿನಗಳ ಕಾಲ ನಡೆದ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಎಲ್ಲಾ ಸ್ಪರ್ಧೆಗಳಲ್ಲಿ ಗಣನೀಯ ಪ್ರದರ್ಶನ ನೀಡಿದ ಸಿಎಆರ್ ವಿಭಾಗದ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು. ಹಾಗೆಯೇ ಹಗ್ಗಜಗ್ಗಾಟದಲ್ಲಿ ಪ್ರಥಮ ಸ್ಥಾನ ಪಡೆದ ಸಿಎಆರ್ ತಂಡ ಸಮಗ್ರ ಪ್ರಶಸ್ತಿ ಜೊತೆಗೆ ರೋಲಿಂಗ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಕ್ರೀಡಾಕೂಟದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಗಮನಸೆಳೆದ ಸಿಎಆರ್‌ನ ಬಿ.ಡಿ.ದಿನೇಶ್ ಪುರುಷರ ವಿಭಾಗದಲ್ಲಿ ಸರ್ವೋತ್ತಮ ಪ್ರಶಸ್ತಿ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಮಹಿಳೆಯರ ವಿಭಾಗದಲ್ಲಿ ಎನ್‌ಆರ್ ವಿಭಾಗದ ಪ್ರತೀಕ್ಷಾ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು. ಸರ್ವೋತ್ತಮ ಪ್ರಶಸ್ತಿ ಪಡೆದ ಇಬ್ಬರಿಗೂ ಟ್ರೋಫಿ ಹಾಗೂ ಸೈಕಲ್ ನೀಡಿ ಗೌರವಿಸಲಾಯಿತು.

ಹಗ್ಗಜಗ್ಗಾಟ: ಭಾರಿ ಕುತೂಹಲ ಮೂಡಿಸಿದ್ದ ಹಗ್ಗಜಗ್ಗಾಟದ ಪುರುಷ ವಿಭಾಗದಲ್ಲಿ ಸಿಎಆರ್ ಪ್ರಥಮ, ಸಂಚಾರ ವಿಭಾಗದ ದ್ವಿತೀಯ ಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಕೆ.ಆರ್.ವಿಭಾಗದ ಪ್ರಥಮ ಹಾಗೂ ವಿಜಯನಗರ ವಿಭಾಗ ದ್ವಿತೀಯ ಸ್ಥಾನ ಪಡೆಯಿತು. ಹಾಗೆಯೇ ವಿನ್ನರ್ ಹಾಗೂ ರನ್ನರ್‌ಅಪ್ ತಂಡಗಳಿಗೆ ನಗದು ಬಹುಮಾನಗಳನ್ನು ನೀಡಲಾಯಿತು.

ಕ್ರಿಕೆಟ್: ನಗರ ಪೊಲೀಸ್ ಆಯುಕ್ತರ ಸಾರಥ್ಯದ ಸಿಎಆರ್ ತಂಡ ಜಯಭೇರಿ ಬಾರಿಸಿದರೆ, ಡಿಸಿಪಿ–2 ಸಾರಥ್ಯದ ವಿಜಯನಗರ ತಂಡ ರನ್ನರ್‌ಅಪ್ ಆಯಿತು. ಹಾಗೆಯೇ ಇನ್‌ಸ್ಪೆಕ್ಟರ್‌ಗಳ ಮೇಲ್ಪಟ್ಟರ ಕ್ರಿಕೆಟ್ ಪಂದ್ಯದಲ್ಲಿ ಕಮಿಷನರ್ ನೇತೃತ್ವದ ಇಲವೆನ್ ತಂಡ ಜಯಗಳಿಸಿದರೆ, ಡಿಸಿಪಿ–1 (ಕಾನೂನು ಮತ್ತು ಸುವ್ಯವಸ್ಥೆ) ನೇತೃತ್ವದ ತಂಡ ರನ್ನರ್ ಆಯಿತು.

ರಿಲೇ: ಪುರುಷರ ವಿಭಾಗ 4*100 ಮೀಟರ್ ರಿಲೇಯಲ್ಲಿ ಸಿಎಆರ್‌ನ ವಿನಯ್ ಶಂಕರ್, ಬಿ.ಡಿ.ದಿನೇಶ್, ಅಭಿಲಾಷ್, ಎಂ.ಜಿ.ನಾಗರಾಜ್ ತಂಡ ಪ್ರಥಮ ಸ್ಥಾನ, ಸಂಚಾರ ವಿಭಾಗದ ಸಿದ್ದಾರೂಢ, ಮೈಲಾರಿ, ಪ್ರೀತಂ, ನಿತೀನ್ ತಂಡ ದ್ವಿತೀಯ ಬಹುಮಾನ ಪಡೆಯಿತು. ಹಾಗೆಯೇ 4*400 ಮೀಟರ್ ರಿಲೇಯಲ್ಲಿ ಸಿಎಆರ್ ವಿಭಾಗದ ಅರುಣ್, ಸುನೀಲ್, ನಾಗರಾಜ್, ಕರಿಯಪ್ಪ ಬಂಡಿ ತಂಡ ಪ್ರಥಮ, ಎನ್.ಆರ್. ವಿಭಾಗದ ಶಶಾಂಕ್, ಕುಮಾರ್, ಪ್ರವೀಣ್, ರಾಕೇಶ್ ತಂಡ ದ್ವಿತೀಯ ಬಹುಮಾನ ಪಡೆದರು. ಹಾಗೆಯೇ ಮಹಿಳಾ ವಿಭಾಗದ 4*100 ರಿಲೇಯಲ್ಲಿ ಎನ್.ಆರ್.ವಿಭಾಗದ ಶ್ವೇತಾ, ಭಾರ್ಗವಿ, ವಿದ್ಯಾಶ್ರೀ, ಪ್ರತೀಕ್ಷಾ ತಂಡ ಪ್ರಥಮ, ವಿಜಯನಗರ ವಿಭಾಗದ ಮಂಜುಶ್ರೀ, ತನುಶ್ರೀ, ಪೂಜಾ, ಶ್ವೇತಾ ತಂಡ ದ್ವಿತೀಯ ಬಹುಮಾನ ಪಡೆದರು.

ಶೂಟಿಂಗ್: ಐಪಿಎಸ್ ಅಧಿಕಾರಿ ವಿಭಾಗದ ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯಲ್ಲಿ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್, ರಿವಾಲ್ವರ್ ಶೂಟಿಂಗ್‌ನಲ್ಲಿ ಡಿಸಿಪಿ ಮುತ್ತುರಾಜ್ ಪ್ರಥಮ ಬಹುಮಾನ ಪಡೆದರು. ಹಾಗೆಯೇ 100 ಮೀಟರ್, 200 ಮೀ. ಹಾಗೂ 5 ಸಾವಿರ ಮೀ. ಓಟ, ಗುಂಡು ಎಸೆತ, ಜಾವಲಿನ್ ಥ್ರೋ, ಬ್ಯಾಡ್ಮಿಂಟನ್ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಕ್ರೀಡಾಕೂಟದ ಕಡೆಯಲ್ಲಿ ಮಾಧ್ಯಮ ವಿಭಾಗದವರಿಗೆ ನಡೆದ 50 ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಜಾವಾಣಿ ಛಾಯಾಗ್ರಾಹಕ ಅನೂಪ್ ಪ್ರಥಮ, ಮೈಸೂರು ಮಿತ್ರ ವರದಿಗಾರ ಮೋಹನ್ ಕಾಯಕ ದ್ವಿತೀಯ ಹಾಗೂ ಆಂದೋಲನ ಪತ್ರಿಕೆ ಛಾಯಾಗ್ರಾಹಕ ರವಿ ಗವಿಮಠ ತೃತೀಯ ಬಹುಮಾನ ಗೆದ್ದುಕೊಂಡರು. ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಸಿಎಆರ್ ಡಿಸಿಪಿ ಮಾರುತಿ, ಅಶ್ವರೋಹಿದಳದ ಕಮಾಂಡೆಂಟ್ ಶೈಲೇಂದ್ರ ಸೇರಿದಂತೆ ಇನ್ನಿತರ ಪೊಲೀಸ್ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

ಮನಸ್ಸನ್ನು ಹಗುರವಾಗಿಸಲು ಕ್ರೀಡಾಕೂಟ ಸಹಕಾರಿ...

ಎಲ್ಲಾ ನಾಗರಿಕರಿಗೂ ರಕ್ಷಣೆ ನೀಡುವಲ್ಲಿ ಪೊಲೀಸ್ ಇಲಾಖೆ ಮಹತ್ವದ ಕಾರ್ಯನಿರ್ವಹಿಸುತ್ತಿದೆ. ಸದಾ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪೊಲೀಸರು ಸಂತಸದಿಂದಿರುವುದೇ ಕಡಿಮೆ. ಪೊಲೀಸರ ವಾರ್ಷಿಕ ಕ್ರೀಡಾಕೂಟ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪೊಲೀಸರ ಮನಸ್ಸು ಹಗುರಗೊಳಿಸಲು ಸಹಕಾರಿಯಾಗಿದೆ ಎಂದು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಹೇಳಿದರು.

ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಕೊರೊನಾ ಸಂದರ್ಭದಲ್ಲಿ ಹಾಗೂ ಇತರೆ ಸಂದರ್ಭದಲ್ಲಿ ಮೃತಪಟ್ಟ ಪೊಲೀಸರ ಕುಟುಂಬಸ್ಥರಿಗೆ ಅನುಕೂಲವಾದ ಸ್ಥಳಗಳಲ್ಲಿ ಉದ್ಯೋಗ ನೀಡುವ ಮೂಲಕ ಪೊಲೀಸರ ಸೇವೆಗೆ ಗೌರವ ನೀಡುವ ಪ್ರಯತ್ನ ಮಾಡಿದ್ದೇವೆ ಎಂದರಲ್ಲದೆ ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಸದಾ ಇನ್ನಷ್ಟು ಸನ್ನದ್ಧರಾಗಿರುವಂತೆ ಕಿವಿಮಾತು ಹೇಳಿದರು.

ಕುಕ್ಕರ್ ಬಾಂಬ್ ಪ್ರಕರಣ: ಎನ್‌ಐಎ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ



ಮಂಗಳೂರು: ಕಳೆದ ವರ್ಷದ ನ.19ರಂದು ಮಂಗಳೂರಿನ ಕಂಕನಾಡಿ ನಾಗುರಿಯಲ್ಲಿ ಸಂಭವಿಸಿದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯಕ್ಕೆ ಅಧಿಕಾರಿಗಳು ಆರೋಪ ಪಟ್ಟಿ ಸಲ್ಲಿಸಿದ್ದಾರೆ. ಶಾರಿಕ್ ಹಾಗೂ ಸಯ್ಯದ್ ಯಾಸೀನ್ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆಯಾಗಿದ್ದು, ಶಂಕಿತ ಉಗ್ರರು ಕುಕ್ಕರ್‌ನಲ್ಲಿ ಸುಧಾರಿತ ಸ್ಫೋಟಕ ತೆಗೆದುಕೊಂಡು, ಆಟೋದಲ್ಲಿ ಹೋಗಿ ಕದ್ರಿ ಮಂಜುನಾಥ ದೇವಸ್ಥಾನ ಸ್ಫೋಟಕ್ಕೆ ಸಂಚು ನಡೆಸಿದ್ದರು. 2022ರ, ನ.19ರಂದು ನಗರದಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡ ಬಾಂಬ್ ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿತ್ತು.

ಬಿಜೆಪಿ, ಜೆಡಿಎಸ್ ನಾಯಕರು ಬರ ಅಧ್ಯಯನ ಹೆಸರಲ್ಲಿ ರೈತರ ಭಾವನೆಯೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ



ಮೈಸೂರು, ನ.29(ಎಂಟಿವೈ)–ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಬರ ಪ್ರವಾಸ ಮಾಡಿ 20 ದಿನಗಳಾಗಿದ್ದು, ಸಂತ್ರಸ್ತರಿಗೆ ಕೇಂದ್ರದಿಂದ ಪರಿಹಾರ ದೊರಕಿಸಿಕೊಡುವಲ್ಲಿ ವಿಫಲರಾಗಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಲಾಭಕ್ಕಾಗಿ ಬರ ಸಮೀಕ್ಷೆ ನಡೆಸಿದ ಬಿಜೆಪಿ, ಜೆಡಿಎಸ್ ನಾಯಕರು ರೈತರ ಭಾವನೆಯೊಂದಿಗೆ ಚೆಲ್ಲಾಟವಾಡಿದ್ದಾರೆ. ಅಧ್ಯಯನ ಮಾಡಿದ ನಂತರ ವಸ್ತುಸ್ಥಿತಿ ಬಗ್ಗೆ ವರದಿ ಸಲ್ಲಿಸಬೇಕು. ಆದರೆ, ಯಾರಿಗೆ ವರದಿ ಸಲ್ಲಿಸಿದ್ದಾರೆ ಎಂದು ಬಹಿರಂಗ ಮಾಡಬೇಕು. ಪರಿಹಾರ ನೀಡುವಂತೆ ಕೇಂದ್ರಕ್ಕೆ ಪತ್ರ ಬರೆಯಲು ರಾಜ್ಯದ 25 ಸಂಸದರಿಗೆ ಧೈರ್ಯ ಇಲ್ಲ ಎಂದು ಕಿಡಿಕಾರಿದರು.

ವಿಪಕ್ಷ ನಾಯಕ ಆರ್.ಅಶೋಕ್ ಅವರು ಸಿದ್ದರಾಮಯ್ಯ ಅವರನ್ನು ಪ್ರಶ್ನೆ ಮಾಡುವ ಮುನ್ನ ತಮ್ಮ ತಜ್ಞರೊಂದಿಗೆ ಐದಾರು ಬಾರಿಯಾದರೂ ಚರ್ಚೆ ಮಾಡುವುದು ಒಳ್ಳೆಯದು. ಸ್ವತಂತ್ರ ಬಂದ ಬಳಿಕ ಅತಿ ಹೆಚ್ಚು ಸಾಲ ಮಾಡಿರುವ ಕೀರ್ತಿ ಬಿಜೆಪಿ ಸರ್ಕಾರದ್ದಾಗಿದೆ. ಲೋಕೋಪಯೋಗಿ ಇಲಾಖೆಗೆ ಮೀಸಲಿಟ್ಟ ಹಣ 32 ಸಾವಿರ ಕೋಟಿ ರೂ. ಆದರೆ ಬಿಜೆಪಿ ಸರ್ಕಾರದಲ್ಲಿ 95 ಸಾವಿರ ಕೋಟಿಗೆ ಟೆಂಟರ್ ಕರೆದು. ಜಲಸಂಪನ್ಮೂಲ ಇಲಾಖೆಯಲ್ಲಿ ಲಕ್ಷ ಕೋಟಿಗೆ ಟೆಂಡರ್ ಮಾರಿಕೊಂಡರು. ಚುನಾವಣೆ ವೇಳೆ ಕರ್ನಾಟಕಕ್ಕೆ ಬಂದ ಮೋದಿ ಅವರಿಗೆ 46 ಕೋಟಿ ರೂ.ಗಳ ಜನರ ತೆರಿಗೆ ಹಣವನ್ನು ಖರ್ಚು ಮಾಡಲಾಗಿದೆ. ಇದಕ್ಕೆ ಅಶೋಕ್ ಅವರು ಉತ್ತರ ಕೊಡಬೇಕು ಎಂದರು.

ಕಾಂಗ್ರೆಸ್ ಸರ್ಕಾರದ ಯೋಜನೆಯನ್ನೆಲ್ಲಾ ತಾನು ತಂದ ಯೋಜನೆ ಎಂದು ಬಿಂಬಿಸಿಕೊಳ್ಳುತ್ತಿರುವ ಸಂಸದ ಪ್ರತಾಪ ಸಿಂಹ ಮೈಸೂರು–ಕೊಡಗು ಜಿಲ್ಲೆಗಳಿಗೆ ತಾವು ತಂದ ಯೋಜನೆಗಳ ಪಟ್ಟಿಯನ್ನಾದರೂ ಬಿಡುಗಡೆ ಮಾಡಬೇಕು. ಉಂಡವಾಡಿ ಕುಡಿಯುವ ನೀರು ಯೋಜನೆ ಕಾಂಗ್ರೆಸ್ ಸರ್ಕಾರದ ಯೋಜನೆ. ಹೊರವರ್ತುಲ ರಸ್ತೆ ನಿರ್ಮಾಣವನ್ನು ರಾಜ್ಯ ಸರ್ಕಾರ ಮಾಡಲಿದೆ. ಇದರ ಬಗ್ಗೆ ಸಂಸದರು ಸಭೆ ಮಾಡುತ್ತಾರೆ. 9.5 ವರ್ಷದಿಂದ ಅಧಿಕಾರದಲ್ಲಿದ್ದಾರೆ. ವಿಮಾನ ನಿಲ್ದಾಣ ರನ್‌ವೇ ಯಾಕೇ ವಿಸ್ತರಣೆಯಾಗಲಿಲ್ಲ. ವಿಮಾನಗಳ ಹಾರಾಟ ಸ್ಥಗಿತಗೊಳ್ಳುತ್ತಿದೆ. ಮೈಸೂರು–ಕುಶಾಲನಗರ ಹೆದ್ದಾರಿ ಭೂ ಸ್ವಾಧೀನ ಯಾಕೇ ಮಾಡಲಿಲ್ಲ? ರೈಲ್ವೆ ಟರ್ಮಿನಲ್, ಸೆಮಿ ಕಂಡಕ್ಟರ್ ಯಾಕೇ ಗುಜರಾತಿಗೆ ಹೋಯಿತು ಎಂದು ತಿಳಿಸುವಂತೆ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಬಸವಣ್ಣ, ಕೆ. ಮಹೇಶ್, ನಾಗೇಶ್ ಉಪಸ್ಥಿತರಿದ್ದರು.

ಪರಭಾಷಿಗರಿಂದ ಕನ್ನಡಕ್ಕೆ ಅಪಾರ ಕೊಡುಗೆ

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಮತ



ಮೈಸೂರು, ನ.29(ಜಿಎ)–ಪರಭಾಷಿಗರು ಕನ್ನಡ ಕಲಿತು ಕನ್ನಡಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಆದರೆ, ಇಂದು ಕನ್ನಡಿಗರಿಗೆ ಕನ್ನಡ ಕಲಿಸಬೇಕಾದ ದೌರ್ಭಾಗ್ಯ ಒದಗಿ ಬಂದಿದೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ವಿಷಾಧ ವ್ಯಕ್ತಪಡಿಸಿದರು.

ಕಲಾಮಂದಿರದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಬುಧವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೋಷಕರು ಮಕ್ಕಳಿಗೆ ಕನ್ನಡ ಕಲಿಸಲು ಹಿಂದೇಟು ಹಾಕುತ್ತಿದ್ದಾರೆ. ಟಿ.ಪಿ.ಕೈಲಾಸಂ ಸೇರಿದಂತೆ ಅನೇಕ ಮಹನೀಯರು ಕನ್ನಡಕ್ಕೆ ಕೊಡುಗೆಗಳನ್ನು ನೀಡಿದ್ದಾರೆ. ಕನ್ನಡ ಈಗಾಗಲೇ ಜಾಗತಿಕ ಮಟ್ಟದಲ್ಲಿ ಬೆಳದಿದೆ ಅದನ್ನು ನಾವು ಉಸಿರು ಮಾಡಿಕೊಳ್ಳಬೇಕಿದೆ ಎಂದರು.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಹೋರಾಟಗಳು ನಡೆಯಲಿಲ್ಲ. ಆದರೆ, ಉತ್ತರ ಕರ್ನಾಟಕದ ಭಾಗದಲ್ಲಿ ಹಿರಿಯರಾದ ಶಾಂತರಸ ಸೇರಿದಂತೆ ಅನೇಕರು ಸಾಕಷ್ಟು ಹೋರಾಟ ನಡೆಸಿದರು. ಆ ಭಾಗದಲ್ಲಿ ನಿಜಾಮರ ಆಳ್ವಿಕೆ ಇದ್ದ ಸಂದರ್ಭ ಕನ್ನಡವನ್ನು ಕದ್ದು ಕಲಿಯಬೇಕಾದ ಸ್ಥಿತಿ ನಿರ್ಮಾಣವಾಗಿತ್ತು ಹಾಗೇ ಧಾರವಾಡವನ್ನು ದಕ್ಷಿಣದ ಮರಾಠ ಎಂದು ಕರೆಯುತ್ತಿದ್ದರು. ಈ ಎಲ್ಲಾ ಸಮಸ್ಯೆಗಳ ನಡುವೆಯೂ ಒಂದು ಕಡೆ ಕರ್ನಾಟಕ ಏಕೀಕರಣ ಮತ್ತೊಂದೆಡೆ ಸ್ವಾತಂತ್ರ್ಯ ಹೋರಾಟ ಮಾಡಿ ಸುಭೀಕ್ಷವಾದ ಕರ್ನಾಟಕ ನೀಡಿದ್ದಾರೆ ಎಂದು ಸ್ಮರಿಸಿದರು.

ಕನ್ನಡದ ಬಗ್ಗೆ ಯಾವುದೇ ಸರ್ಕಾರವು ಕಾಳಜಿ ವಹಿಸುತ್ತಿಲ್ಲ. ಅದಕ್ಕೆ ಉದಾಹರಣೆಯಾಗಿ ಮಹಾಜನ್, ಸರೋಜಿನಿ, ಮೇಕೇದಾಟು ಸೇರಿದಂತೆ ಪಾಟೀಲ್ ಪುಟ್ಟಪ್ಪ ಮತ್ತು ಡಾ.ರಾಜ್‌ಕುಮಾರ್ ಅವರು ಹೋರಾಡಿದ ಗೋಕಾಕ್ ಚಳುವಳಿ ಯಾವುದೇ ವರದಿಗಳು ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ. ಈ ರಾಜಕಾರಣದಿಂದ ಬೆಳಗಾವಿಯಲ್ಲಿ ಕನ್ನಡಿಗರು ಜೀವವನ್ನು ಕೈಯ್ಯಲ್ಲಿ ಹಿಡಿಕೊಂಡು ಓಡಾಡುವ ಸ್ಥಿತಿ ಇದೆ ಎಂದು ಬೇಸರಿಸಿದರು. ಕನ್ನಡಕ್ಕೆ ಕೈ ಎತ್ತಿದ್ದರೆ, ಕಲ್ಪವೃಕ್ಷವಾಗುತ್ತದೆ ಎಂಬ ಮಾತು ಇತ್ತು. ಆದರೆ, ಇಂದು ಅದೇ ಕೈಯನ್ನೇ ಕಡಿಯುತ್ತಿದ್ದಾರೆ. ಕನ್ನಡಕ್ಕಾಗಿ ಹೋರಾಟ ಮಾಡುವವರು ಇಂದಿಗೂ ನ್ಯಾಯಾಲಯಕ್ಕೆ ಅಲೆಯುತ್ತಿದ್ದಾರೆ. 30 ವರ್ಷಗಳ ಹಿಂದೆ ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ದೇಸೀಹಳ್ಳಿ ರಾಮಚಂದ್ರ ಎಂಬುವರು ಕನ್ನಡ ಅಂಕಿ ಬಳಸಿದ್ದಕ್ಕಾಗಿ ಅವರನ್ನು ಕೆಲಸದಿಂದ ತೆಗೆದು ಹಾಕಲಾಗಿದ್ದು, ಇಂದಿಗೂ ಅವರು ಈ ಪ್ರಕರಣದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಸರ್ಕಾರ ಸೂಕ್ತ ನಿರ್ಧಾರ ತೆಗೆದು ಕೊಂಡರೆ, ಒಂದು ದಿನದಲ್ಲಿಯೇ ಈ ರೀತಿಯ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಅಭಿಪ್ರಾಯಪಟ್ಟರು.


ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ 'ಕನ್ನಡಾಂಬೆ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಅರ್ಜುನ್ ಅವಧೂತ ಗುರು, ಸಮಾಜ ಸೇವಕ ರಘುರಾಮ್ ವಾಜಪೇಯಿ, ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಉಪಸ್ಥಿತರಿದ್ದರು.

ಕನಕದಾಸರ ಆಲೋಚನೆಗಳು ಇಂದಿಗೂ ಪ್ರಸ್ತುತ



ಮೈಸೂರು, ನ.29(ಜಿಎ)–ಕನಕ ದಾಸರ ಆಲೋಚನೆಗಳು ಇಂದಿಗೂ ಪ್ರಸ್ತುತವಾಗಿದೆ ಎಂದು ಶ್ರೀ ನಟರಾಜ ಪ್ರತಿ ಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವ ರಾಜಪ್ಪ ತಿಳಿಸಿದರು. ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ವಿವಿ ಸಂಜೆ ಕಾಲೇಜು ಆವರಣದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ವತಿಯಿಂದ ಬುಧವಾರ ಆಯೋಜಿಸಿದ್ದ ಕನಕದಾಸರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇವಲ ಪುಷ್ಪಾರ್ಚನೆಗಳಿಗೆ ಮಾತ್ರ ಕನಕದಾಸರ ಜಯಂತಿಯನ್ನು ಸೀಮಿತ ಗೊಳಿಸುತ್ತಿದ್ದೇವೆ. ಆದರೆ ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ನಾವು ಎಂಬುವುದು ಹೋಗಿ, ನನ್ನದು ಎಂಬುವುದು ಹೆಚ್ಚಾಗುತ್ತಿರುವುದರಿಂದ ಎಲ್ಲವನ್ನು ಕಳೆದುಕೊಳ್ಳುತ್ತಿದ್ದೇವೆ. ಎಲ್ಲರೂ ಜಾತಿಗೆ ಅನುಗುಣವಾಗಿ ವ್ಯಕ್ತಿಗಳನ್ನು ಆರಾಧನೆ ಮಾಡುತ್ತಿದ್ದಾರೆ. ಆದರೆ ಅವರು ದೇಶದ ಸಂಪತ್ತು ಅದನ್ನು ಅರಿತು ಮಹನೀಯರನ್ನು ಆರಾಧಿಸಬೇಕು. ಹಣದ ಆಸೆಯಿಂದ ಇಂದು ಜಾತಿ, ವರ್ಗ ಮತ್ತು ಮಾನಸಿಕ ಒತ್ತಡ ಬಹಳಷ್ಟು ಕಾಡುತ್ತಿದೆ. ಇದರಿಂದ ನೆಮ್ಮದಿ ಕಳೆದುಕೊಳ್ಳುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿಯ ಪ್ರಾಧ್ಯಾಪಕರಾದ ಡಾ.ಕೆ.ಶಿವಶಂಕರ್, ಡಾ.ಶೇಖರ್ ನಾಯಕ್, ಡಾ.ಎನ್.ಎಸ್.ದೇವಕಿ, ಪ್ರೊ.ಎಂ.ರೂಬಿ ಸೇಲಿಸ್ಟೇನ್, ಡಾ.ಸತೀಶ್ ಶಂಕರ್, ಡಾ.ದೇವರಾಜು, ಡಾ.ಗೋವಿಂದರಾಜು, ಡಾ.ಎ.ಸಿ.ಪ್ರಮೀಳಾ, ಮುಜಾವರ್ ಅಭಿನಂದಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಡಿವೈಎಸ್ಪಿ ಶಿವಶಂಕರ್, ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಡಾ.ಕೆ.ಎಂ.ಮಹದೇವನ್, ಮೈಸೂರು ವಿವಿ ಹಣಕಾಸು ಅಧಿಕಾರಿ ರೇಖಾ, ವಿವಿ ಸಂಜೆ ಕಾಲೇಜು ಪ್ರಾಂಶು ಪಾಲ ಪ್ರೊ.ಎಸ್.ಮಹದೇವ ಮೂರ್ತಿ, ವಕೀಲ ಉಮೇಶ್, ಕುರುಬರ ಸಂಘದ ನಿರ್ದೇಶಕ ನಾಗರಾಜು, ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಅಧ್ಯಕ್ಷ ಆರ್.ವಾಸುದೇವ ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್ ಉಪಸ್ಥಿತರಿದ್ದರು.







ಮೈಸೂರು ಮಿತ್ರ ಗುರುವಾರ 30 ನವೆಂಬರ್ 2023

ವಿ.ಬಾಡಗ ಹೈಫ್ಲೈಯರ್ಸ್ ಹಾಕಿ ಕಪ್-2023 ಪಂದ್ಯಾವಳಿ

5 ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶ

ಪೊನ್ನಂಪೇಟೆ, ನ.29–ಬಿಟ್ಟಂಗಾಲ ಸಮೀಪದ ವಿ.ಬಾಡಗದ ಹೈಫ್ಲೈಯರ್ಸ್ ಸಂಸ್ಥೆ ವತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ 2ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಹೈಫ್ಲೈಯರ್ಸ್ ಕಪ್–2023ರ 2ನೇ ದಿನದ ಪಂದ್ಯಾವಳಿಯಲ್ಲಿ ಒಟ್ಟು 5 ತಂಡಗಳು ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆದುಕೊಂಡಿವೆ.



ಬುಧವಾರ ನಡೆದ ಪಂದ್ಯಾವಳಿಯಲ್ಲಿ ಕರ್ತಮಾಡ, ಕೊಂಗಂಡ, ಗುಮ್ಮಟಿರ, ಸಣ್ಣುವಂಡ, ಚೇಂದಿರ ತಂಡಗಳು ಎದುರಾಳಿ ತಂಡಗಳನ್ನು ಸೋಲಿಸಿ ಮುನ್ನಡೆ ಸಾಧಿಸಿದವು. ಮೊದಲ ಪಂದ್ಯದಲ್ಲಿ ಕರ್ತಮಾಡ ತಂಡ ಮನೆಯಪಂಡ ತಂಡವನ್ನು 4–2 ಗೋಲುಗಳಿಂದ ಸೋಲಿಸಿತು. ವಿಜೇತ ತಂಡದ ಪರ ರೋಷನ್ 8ನೇ ನಿಮಿಷದಲ್ಲಿ, ಅತಿಥಿ ಆಟಗಾರ ಬೆಳ್ಳಿಯಪ್ಪ 14ನೇ, 22ನೇ ಮತ್ತು 42ನೇ ನಿಮಿಷದಲ್ಲಿ ಗೋಲು ಬಾರಿಸಿದರು. ಮನೆಯಪಂಡ ತಂಡದ ಪರವಾಗಿ ಅಯ್ಯಣ್ಣ 28ನೇ ಮತ್ತು 34ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. 2ನೇ ಪಂದ್ಯದಲ್ಲಿ ಕೊಂಗಂಡ ತಂಡ ಕೊಲ್ಲಿರ ತಂಡವನ್ನು 1–0 ಗೋಲುಗಳಿಂದ ಮಣಿಸಿತು. ವಿಜೇತ ತಂಡದ ಪರವಾಗಿ ಅತಿಥಿ ಆಟಗಾರ ಚೆಲ್ಸಿ ಮೇದಪ್ಪ 39ನೇ ನಿಮಿಷದಲ್ಲಿ ಮಿಂಚಿನ ಗೋಲೊಂದನ್ನು ದಾಖಲಿಸಿ ತಂಡದ ವಿಜಯಕ್ಕೆ ನೆರವಾದರು. 3ನೇ ಪಂದ್ಯದಲ್ಲಿ ಗುಮ್ಮಟ್ಟಿರ ತಂಡ ಕೋಲ ತಂಡ ತಂಡವನ್ನು 2–0 ಗೋಲುಗಳಿಂದ ಪರಾಭವಗೊಳಿಸಿತು. ವಿಜೇತ ತಂಡದ ಪರವಾಗಿ ಅತಿಥಿ ಆಟಗಾರ ಬೋಪಣ್ಣ 14ನೇ ಮತ್ತು 40ನೇ ನಿಮಿಷದಲ್ಲಿ ಗೋಲು ಬಾರಿಸಿ ತಂಡದ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. 4ನೇ ಪಂದ್ಯದಲ್ಲಿ ಕುಪ್ಪಂಡ ತಂಡ ಗೈರಾದ ಕಾರಣ ಸಣ್ಣುವಂಡ ತಂಡ ವಾಕ್ ಓವರ್ ಮೂಲಕ ಮುನ್ನಡೆ ಸಾಧಿಸಿತು.

ಇಂದಿನ ಕ್ವಾರ್ಟರ್ ಫೈನಲ್ಸ್ ಪಂದ್ಯಗಳು
ಬೆಳಗ್ಗೆ 10ಕ್ಕೆ: ಚೇಂದಿರ–ಸಣ್ಣುವಂಡ
ಬೆಳಗ್ಗೆ 11.30ಕ್ಕೆ: ಗುಮ್ಮಟ್ಟಿರ–ಚಂದೂರ
ಮಧ್ಯಾಹ್ನ 1.30ಕ್ಕೆ: ಮೇಚಿಯಂಡ–ಕರ್ತಮಾಡ
ಮಧ್ಯಾಹ್ನ 3ಕ್ಕೆ: ಅಮ್ಮಣಿಚಂಡ–ಕೊಂಗಂಡ

ಕೊನೆಯ ಮತ್ತು 5ನೇ ಪಂದ್ಯದಲ್ಲಿ ಚೇಂದಿರ ತಂಡ ಚೊಟ್ಟೆಪಂಡ ತಂಡವನ್ನು 4–1 ಗೋಲುಗಳಿಂದ ಮಣಿಸಿತು. ಆರಂಭದಿಂದಲೇ ಚೇಂದಿರ ತಂಡ ಸಂಘಟಿತ ಹೋರಾಟ ನಡೆಸಿದ ವಿಜೇತ ತಂಡದ ಪರವಾಗಿ ಉತ್ತಮ ಪ್ರದರ್ಶನ ನೀಡಿದ ಅತಿಥಿ ಆಟಗಾರ ಮಂಜುನಾಥ್ 6ನೇ ಮತ್ತು 41ನೇ ನಿಮಿಷದಲ್ಲಿ, ತಂಡದ ಮತ್ತೊಬ್ಬ ಅತಿಥಿ ಆಟಗಾರ ಧನುಷ್ 35ನೇ ಮತ್ತು 49ನೇ ನಿಮಿಷದಲ್ಲಿ ಗೋಲು ಬಾರಿಸಿ ತಂಡವನ್ನು ವಿಜಯದ ದಡಕ್ಕೆ ಸೇರಿಸಿದರು. ಪರಾಜಿತ ತಂಡದ ಪರವಾಗಿ ಕೌಶಿಕ್ ಕಾಳಪ್ಪ 40ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಆಯೋಜಕರ ಮನವಿ ಮೇರೆಗೆ ಪಂದ್ಯ ವೀಕ್ಷಿಸಲು ಆಗಮಿಸಿದ ಶಾಸಕ ಎ.ಎಸ್.ಪೊನ್ನಣ್ಣ ಆಟಗಾರರನ್ನು ಪರಿಚಯಿಸಿಕೊಳ್ಳುವ ಮೂಲಕ ಪಂದ್ಯವೊಂದಕ್ಕೆ ಚಾಲನೆ ನೀಡಿದರು. ನಂತರ ಮೈದಾನದಲ್ಲೇ ಕೆಲಕಾಲ ಕಳೆದ ಶಾಸಕರು, ಪಂದ್ಯ ವೀಕ್ಷಿಸಿ ಗ್ರಾಮೀಣ ಪ್ರದೇಶದಲ್ಲಿ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು ಆಯೋಜಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹೈಕೋರ್ಟ್‌ನಲ್ಲಿ ಸಿಎನ್‌ಸಿ ಅರ್ಜಿ ವಿಚಾರಣೆ

3 ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಲು ಸರ್ಕಾರಕ್ಕೆ ಸೂಚನೆ



ಮಡಿಕೇರಿ, ನ.29–ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಕುರಿತು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಬೇಡಿಕೆಗೆ ಪೂರಕವಾಗಿ ಆಯೋಗ ರಚಿಸಬೇಕು ಎಂದು ಖ್ಯಾತ ಅರ್ಥಶಾಸ್ತ್ರ ತಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ವಿಚಾರಣೆ ಮಂಗಳವಾರ ಹೈಕೋರ್ಟ್‌ನಲ್ಲಿ ನಡೆಯಿತು.

ಡಾ.ಸುಬ್ರಮಣಿಯನ್ ಸ್ವಾಮಿ ಅವರ ಪರ ವಕೀಲರಾದ ಕೀರನ್ ನಾರಾಯಣ್ ಅವರು ನ್ಯಾಯಾಧೀಶರ ಮುಂದೆ ವಿಷಯ ಮಂಡಿಸಿದರು. ಕೇಂದ್ರ ಸರ್ಕಾರದ ಪ್ರತಿನಿಧಿಗಳಿಗೆ ಅಫಿಡವಿಟ್ ಸಲ್ಲಿಸಲು ಕಾಲಾವಕಾಶ ನೀಡಿದ ಕೋರ್ಟ್, ವಿಚಾರಣೆಯನ್ನು 2024ರ ಜನವರಿ 25ಕ್ಕೆ ಮುಂದೂಡಿತು. ಇದೇ ವೇಳೆ ಕರ್ನಾಟಕ ಸರ್ಕಾರಕ್ಕೂ ಸೂಚನೆ ನೀಡಿದ ನ್ಯಾಯಾಲಯ ಇಂದಿನಿಂದ ಮೂರು ವಾರಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆಯನ್ನು ಸಲ್ಲಿಸಬೇಕು ಎಂದು ನಿರ್ದೇಶಿಸಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಅರ್ಜಿದಾರ ಸಂಖ್ಯೆ–2 ಆಗಿದ್ದಾರೆ. ಕೇಂದ್ರ ಕಾನೂನು ಸಚಿವಾಲಯ, ಕೇಂದ್ರ ಗೃಹ ಸಚಿವಾಲಯ ಮತ್ತು ಕರ್ನಾಟಕವನ್ನು ಪ್ರತಿವಾದಿ ಸಂಖ್ಯೆ ಕ್ರಮವಾಗಿ 1, 2 ಮತ್ತು 3 ಎಂದು ಉಲ್ಲೇಖಿಸಲಾಗಿದೆ.

ಹೋರಾಟಕ್ಕೆ ಜಯ: ಅತ್ಯಂತ ಸೂಕ್ಷ್ಮ ಬುಡಕಟ್ಟು ಜನಾಂಗ ಕೊಡವರಿಗೆ ಸಾಂವಿಧಾನಿಕ ಭದ್ರತೆಗಾಗಿ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಸಿಗಬೇಕು ಎನ್ನುವ ಕಾರಣಕ್ಕಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಶಾಂತಿಯುತ ಹೋರಾಟವನ್ನು ಮುಂದುವರೆಸಿದ್ದು, ಕಾನೂನು ಹೋರಾಟಕ್ಕೆ ಜಯ ಸಿಗಲಿದೆ. ಸಿಎನ್‌ಸಿ ಹೋರಾಟಕ್ಕೆ ಖ್ಯಾತ ಅರ್ಥಶಾಸ್ತ್ರ ತಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಬೆಂಬಲವಾಗಿ ನಿಂತಿದ್ದು, ನಮ್ಮ ಬೇಡಿಕೆ ಈಡೇರುವುದು ನಿಶ್ಚಿತ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭ ವಿರಾಟ್ ಹಿಂದೂ ಸ್ಥಾನ್ ಸಂಘಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ, ರಾಜ್ಯಾಧ್ಯಕ್ಷ ನಿಖುಂಜ್ ಶಾ, ಪ್ರಮುಖರಾದ ನಟರಾಜ್, ರವಿಶಂಕರ್, ಸಿಎನ್‌ಸಿಯ ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಎನ್. ಶ್ರೇಯ ನಾಚಪ್ಪ, ಕಲಿಯಂಡ ಪ್ರಕಾಶ್, ಕಾಂಡೇರ ಸುರೇಶ, ಚಂಬಂಡ ಜನತ್, ಅಜ್ಜಿಕುಟ್ಟೀರ ಲೋಕೇಶ್, ಮಂದಪಂಡ ಮನೋಜ್, ಕಿರಿಯಮಾಡ ಶೆರಿನ್, ಕೃಷ್ಣಮೋಹನ್ ರೆಡ್ಡಿ ಹಾಗೂ ಮಹೇಶ್ ಉಪಸ್ಥಿತರಿದ್ದರು.

ಬಿಜೆಪಿ ಸರ್ಕಾರದಲ್ಲೇ ಕೊಡವ ಅಭಿವೃದ್ಧಿ ನಿಗಮಕ್ಕೆ 10 ಕೋಟಿ ಅನುದಾನ

ಮಡಿಕೇರಿ, ನ.29– ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗಲೇ ಕೊಡವ ಅಭಿವೃದ್ಧಿ ನಿಗಮಕ್ಕೆ 10 ಕೋಟಿ ರೂ. ಅನುದಾನ ನೀಡಲಾಗಿದ್ದು, ಹಣ ಜಿಲ್ಲಾಧಿಕಾರಿ ಖಾತೆಯಲ್ಲಿದೆ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಕೊಡವ ಅಭಿವೃದ್ಧಿ ನಿಗಮಕ್ಕೆ ಹಿಂದಿನ ಬಿಜೆಪಿ ಸರ್ಕಾರ 1 ರೂಪಾಯಿ ಅನುದಾನವನ್ನು ಬಿಡುಗಡೆಗೊಳಿಸಿಲ್ಲವೆಂದು ವಿರಾಜಪೇಟೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರು ಆರೋಪ ಮಾಡಿದ್ದರು. ಇದಕ್ಕೆ ಮಡಿಕೇರಿಯಲ್ಲಿ ಪ್ರತಿಕ್ರಿಯಿಸಿದ ಸಂಸದರು, ಶಾಸಕರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಇಂತಹ ಆರೋಪಗಳನ್ನು ಮಾಡುವ ಬದಲು ವಸ್ತುಸ್ಥಿತಿಯನ್ನು ಜನರಿಗೆ ತಿಳಿಸಲಿ ಎಂದು ಹೇಳಿದರು. ಹಿಂದಿನ ಬಿಜೆಪಿ ಸರ್ಕಾರ



2022–23ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ ಕೊಡವ ಅಭಿವೃದ್ಧಿ ನಿಗಮಕ್ಕೆ 10 ಕೋಟಿ ರೂ. ಬಿಡುಗಡೆಗೊಳಿಸಿದೆ. ಈ ಅನುದಾನ ಈಗಾಗಲೇ ಜಿಲ್ಲಾಧಿಕಾರಿ ಖಾತೆಯಲ್ಲಿದೆ. ಈ ಅನುದಾನದಲ್ಲಿ ಬಾಳಗೋಡುವಿನಲ್ಲಿರುವ ಕೊಡವ ಸಾಂಸ್ಕೃತಿಕ ಕೇಂದ್ರಕ್ಕೆ 6 ಕೋಟಿ ರೂ., ಭಾಗಮಂಡಲದಲ್ಲಿ ಕೊಡವ ಸಮಾಜದ ಸಭಾಭವನ ನಿರ್ಮಾಣಕ್ಕೆ 1 ಕೋಟಿ ರೂ., 30 ಕೊಡವ ಸಮಾಜಗಳಿಗೆ ತಲಾ 10 ಲಕ್ಷರೂ.ಗಳಂತೆ ಅನುದಾನ ಜಿಲ್ಲಾಧಿಕಾರಿ ಖಾತೆಯಲ್ಲಿದೆ ಎಂದು ತಿಳಿಸಿದರು.

ವಿರಾಜಪೇಟೆ ಸೇರಿದಂತೆ ಕೊಡಗಿನ ಕೆಲ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಕಾರ್ಯಕರ್ತರಿಂದ ಮುಚ್ಚಳಿಕೆ ಬರೆಸಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಸಂಸದರು, ಪೊಲೀಸರಿಗೆ ಇಂತಹ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ. ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಯೋಜನೆಯಡಿ ಕೆಲವು ಕಡೆಗಳಲ್ಲಿ ಕೊರೆಸಲಾದ ಬೋರ್‌ವೆಲ್‌ಗಳಲ್ಲಿ ನೀರು ಬಾರದೇ, ವಿಫಲಗೊಂಡಿರುವ ಬಗ್ಗೆ ಕೇಳಿಬಂದ ದೂರುಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಪ್ರತಾಪ ಸಿಂಹ, ಜಲಜೀವನ್ ಮಿಷನ್ ಯೋಜನೆಯಡಿ ನಿರ್ಮಾಣಗೊಂಡಿರುವ ನೀರಿನ ಟ್ಯಾಂಕ್‌ಗಳಿಗೆ ಜಲಾಶಯ ಮತ್ತು ನದಿಗಳಿಂದ ನೀರು ಪೂರೈಕೆ ಮಾಡುವುದರಿಂದ ಸಮಸ್ಯೆಗೆ ಪರಿಹಾರವಾಗಲಿದೆ ಎಂದರು. ಇದೇ ವೇಳೆ ಬಿಜೆಪಿ ಪ್ರಮುಖರಾದ ಯಮುನಾ ಚಂಗಪ್ಪ ಚೆಕ್ಕೇರ ಸೂರ್ಯ, ವಿಜಯ ಉಪಸ್ಥಿತರಿದ್ದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣ

ಮಂಡ್ಯಕ್ಕೆ ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳ ಭೇಟಿ

ಮಂಡ್ಯ, ನ.29– ಮಂಡ್ಯದಲ್ಲಿ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ತಂಡ ಬುಧವಾರ ನಗರದ ಡಿಎಚ್‌ಓ ಕಚೇರಿಗೆ ಭೇಟಿ ನೀಡಿ ಸರಣಿ ಸಭೆಗಳನ್ನು ನಡೆಸಿದರು.

ಆರೋಗ್ಯ ಇಲಾಖೆ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳ ತಂಡ ಪ್ರಾಧಿಕಾರದ ನಿರ್ದೇಶಕ ಶ್ರೀನಿವಾಸ್ ನೇತೃತ್ವದಲ್ಲಿ ಭೇಟಿ ನೀಡಿ, ಮಂಡ್ಯ ಡಿಹೆಚ್‌ಓ ಕಚೇರಿಯಲ್ಲಿ ಭ್ರೂಣ ಪತ್ತೆ–ಹತ್ಯೆ ಸಂಬಂಧ ಮಾಹಿತಿ ಪಡೆದುಕೊಂಡರು.

ಡಿಹೆಚ್‌ಓ, ಎಲ್ಲಾ ತಾಲೂಕಿನ ಟಿಹೆಚ್‌ಓಗಳು, ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಜೊತೆಗೆ ಜೂಮ್ ಮೀಟಿಂಗ್ ನಡೆಸಲಾಯಿತು. ನಂತರ ಆಶಾ ಕಾರ್ಯಕರ್ತೆಯರಿಗೆ ಹೆಣ್ಣು ಭ್ರೂಣ ಹತ್ಯೆ ತಡೆಯಲು ಜಾಗೃತಿ ಮೂಡಿಸುವ ಬಗ್ಗೆ ತರಬೇತಿ ನೀಡಲಾಯಿತು.

ಬಳಿಕ ಮಾತನಾಡಿದ ಸಕ್ಷಮ ಪ್ರಾಧಿಕಾರದ ನಿರ್ದೇಶಕ ಡಾ.ಶ್ರೀನಿವಾಸ್, ಈಗ ಸಿಕ್ಕಿರುವ ಆರೋಪಿಗಳು ವೈದ್ಯರಲ್ಲ. ಅಲ್ಲದೇ ಯಾವುದೇ ಟ್ರೈನಿಂಗ್ ಪಡೆದಿರುವ ಬಗ್ಗೆ ನಮಗೆ ಮಾಹಿತಿ ಇಲ್ಲ. ಅವರು ಇಲ್ಲಿ ಅಬಾಷನ್ ಮಾಡುತ್ತಿರಲಿಲ್ಲ. ಹೊರ ಜಿಲ್ಲೆಗಳಿಂದ ಮಹಿಳೆಯರನ್ನು ಕರೆ ತರುತ್ತಿದ್ದರು ಎಂಬ ಅನುಮಾನದ ಮೇಲೆ ಪೊಲೀಸ್ ಟ್ರ್ಯಾಕ್ ಆಗಿದೆ. ಇದೊಂದು ರಾಕೆಟ್ ಆಗಿದ್ದು, ಇದರ ಆಳ ಅಗಲದ ಬಗ್ಗೆ, ಮಹಿಳೆಯರನ್ನು ಎಲ್ಲಿಂದ ಕರೆ ತರುತ್ತಿದ್ದರು ಎಂಬ ಸಂಪೂರ್ಣ ಮಾಹಿತಿ ಪೊಲೀಸ್ ತನಿಖೆಯಿಂದ ತಿಳಿಯಬೇಕಿದೆ ಎಂದು ವಿವರಿಸಿದರು.



ಪರಿಶೀಲನೆ ವೇಳೆ ಯಾವ ಯಂತ್ರ ಬಳಸುತ್ತಿದ್ದರು, ಅದನ್ನು ಎಲ್ಲಿಂದ ತಂದಿದ್ದರು ಎಂಬ ಬಗ್ಗೆ ಮಾಹಿತಿ ಸಿಗಬೇಕಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಅದಕ್ಕಾಗಿ ಒಂದು ತಂಡ ರಚಿಸಲಾಗುತ್ತದೆ. 2 ದಿನಗಳಲ್ಲಿ ಉನ್ನತ ಮಟ್ಟದ ಸಭೆ ಕರೆಯಲಾಗಿದ್ದು, ಸಭೆಯಲ್ಲಿ ಸಂಗ್ರಹಿಸಲಾಗಿರುವ ಮಾಹಿತಿ ನೀಡಲಾಗುತ್ತದೆ ಎಂದರು.

ಪೊಲೀಸರು ಈಗ ವಶಪಡಿಸಿಕೊಂಡಿರುವ ಕಾರಿನ ಬಗ್ಗೆ 5 ತಿಂಗಳ ಹಿಂದೆಯೇ ನಾವು ಮಾಹಿತಿ ನೀಡಿದ್ದೆವು. ನಾವು ನೀಡಿದ್ದ ವಾಹನದ ಮಾಹಿತಿ ಆಧಾರದ ಮೇಲೆ ಇದೀಗ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿಗಳಿಗೆ ನಾನ್ ಬೇಲಬಲ್ ಕೇಸ್ ಆಗಲಿದೆ ಎಂದರು. ಈ ಸಂದರ್ಭ ಡಿಎಚ್‌ಓ ಧನಂಜಯ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಯುವಜನೋತ್ಸವ: ಕ್ರೀಡಾಧಿಕಾರಿ ಪರ–ವಿರೋಧ ಪ್ರತಿಭಟನೆ

- ಕಲಾ ಮಂದಿರಕ್ಕೆ ನುಗ್ಗಲು ಪ್ರತಿಭಟನಾಕಾರರ ಯತ್ನ: ಪೊಲೀಸರ ಮಧ್ಯಪ್ರವೇಶ
- ಮತ್ತೊಮ್ಮೆ ಯುವಜನೋತ್ಸವ ನಡೆಸುವ ಭರವಸೆ ನೀಡಿದ ಶಾಸಕ ರವಿಕುಮಾರ್

ಮಂಡ್ಯ, ನ.29– ನಗರದ ಕಲಾ ಮಂದಿರದಲ್ಲಿ ನಡೆದ ಯುವ ಜನೋತ್ಸವದಲ್ಲಿ ಯುವಜನ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಪರ–ವಿರೋಧವಾಗಿ ಯುವ ಪ್ರಶಸ್ತಿ ಪುರಸ್ಕೃತರು ಬುಧವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾ ಯುವ ಜನೋತ್ಸವದಲ್ಲಿ ಇಲಾಖೆ ಸಹಾಯಕ ನಿರ್ದೇಶಕ ಓಂಪ್ರಕಾಶ್ ಜಿಲ್ಲಾ ಯುವ ಪರಿಷತ್ ಸದಸ್ಯರನ್ನು ನಿರ್ಲಕ್ಷಿಸಿದ್ದಾರೆ ಎಂದು ಆರೋಪಿಸಿ ಸಂಘಟನೆ ನೇತೃತ್ವದಲ್ಲಿ ಕಲಾಮಂದಿರದ ಗೇಟ್ ಬಳಿ ಯುವ ಪ್ರಶಸ್ತಿ ಪುರಸ್ಕೃತರು ಕಪ್ಪು ಪಟ್ಟಿ ಧರಿಸಿ, ಧರಣಿ ನಡೆಸಿ ಅಧಿಕಾರಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರೇ, ಕಲಾ ಮಂದಿರದ ಒಳ ಪ್ರವೇಶಿಸುವ ಬಾಗಿಲಲ್ಲಿ ಮಂಡ್ಯ ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತರ ಒಕ್ಕೂಟ ಮತ್ತು ಜಿಲ್ಲಾ ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ವರ್ಗದ ಯುವ ಪ್ರಶಸ್ತಿ ಪುರಸ್ಕೃತರ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿ ಇಲಾಖೆಯಿಂದ ನಿರಂತರ ಸೌಲಭ್ಯ ಮತ್ತು ಅನುದಾನ ಪಡೆದು ಸ್ವಹಿತಕ್ಕಾಗಿ ದಕ್ಷ ಅಧಿಕಾರಿಗೆ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಆರೋಪಿಸಿ ಪ್ರತಿಭಟನೆ ಮಾಡುತ್ತಿರುವವರ ವಿರುದ್ಧ ಧಿಕ್ಕಾರ ಕೂಗಿ ಕಿಡಿಕಾರಿದರು.



ಈ ವೇಳೆ ಕಾರ್ಯಕ್ರಮಕ್ಕೆ ಆಗಮಿಸಿದ ಶಾಸಕ ರವಿಕುಮಾರ್ ಪ್ರತಿಭಟನಾನಿರತ ಜಿಲ್ಲಾ ಯುವ ಪರಿಷತ್ ಸದಸ್ಯರ ಜೊತೆ ಮಾತುಕತೆ ನಡೆಸಿ ಸಮಾಧಾನಿಸಿ ಕಲಾ ಮಂದಿರಕ್ಕೆ ಕರೆದುಕೊಂಡು ಬಂದರು. ಆದರೆ ಪ್ರತಿಭಟನಾಕಾರರು ಮತ್ತೆ ಹೊರ ಹೋಗಿ ಬಾಗಿಲ ಬಳಿ ನಿಂತರು. ಕಾರ್ಯಕ್ರಮ ಆರಂಭವಾಗಿ ಯುವಜನ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಓಂಪ್ರಕಾಶ್ ಸ್ವಾಗತ ಕೋರುತ್ತಿದ್ದಾಗ ಧಿಕ್ಕಾರ ಕೂಗಿ ಒಳನುಗ್ಗಲು ಮುಂದಾದಾಗ ಪೊಲೀಸರು ತಡೆದರು. ಈ ವೇಳೆ ಮತ್ತೊಂದು ಬಾಗಿಲಲ್ಲಿ ನುಗ್ಗಿದ ಪ್ರತಿಭಟನಾನಿರತರನ್ನು ಪೊಲೀಸರು ಹೊರದಬ್ಬಿದರು. ಮತ್ತೊಂದೆಡೆ ಕಲಾಮಂದಿರದಲ್ಲಿದ್ದವರು ಜಿಲ್ಲಾ ಯುವ ಜನೋತ್ಸವಕ್ಕೆ ಜೈಕಾರ ಮೊಳಗಿಸಿದರು.

ಅಧಿಕಾರಿ ವಿರುದ್ಧ ಆರೋಪ: ಸಹಾಯಕ ನಿರ್ದೇಶಕ ಓಂಪ್ರಕಾಶ್ ಆಡಳಿತದಲ್ಲಿ ಅವ್ಯವಹಾರ ನಡೆಸಿದ್ದು, ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳದೆ ಕಾಟಾಚಾರಕ್ಕೆ ತರಾತುರಿಯಲ್ಲಿ ಯುವಜನೋತ್ಸವ ಮಾಡುತ್ತಿದ್ದು, ಸ್ಥಳೀಯ ಯುವ ಕಲಾವಿದರಿಗೆ ಅನ್ಯಾಯ ಮಾಡಿದ್ದಾರೆ. ಯುವ ಪ್ರಶಸ್ತಿ ಪುರಸ್ಕೃತರು, ಯುವ ಸಂಘಟಕರನ್ನು ನಿರ್ಲಕ್ಷಿಸಿದ್ದಾರೆ ಪ್ರತಿಭಟನಾಕಾರರು ಆರೋಪಿಸಿದರು.

ಯುವಜನ ಚಟುವಟಿಕೆ ಸಂಪೂರ್ಣ ನಿಷ್ಕ್ರಿಯವಾಗಿದ್ದು, ಮೇಲಾಧಿಕಾರಿ ಗಮನಕ್ಕೆ ತಂದಿದ್ದರೂ, ಅಧಿಕಾರಿ ಉದ್ಧಟತನದಿಂದ ವರ್ತಿಸುತ್ತಿದ್ದಾರೆ. ಹೀಗಾಗಿ ಅವರನ್ನು ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಪರಿಷತ್ ಅಧ್ಯಕ್ಷ ಕಾರಸವಾಡಿ ಮಹದೇವ್, ಕಲಾವಿದರಾದ ಮಂಗಲ ಲಂಕೇಶ್, ತಗ್ಗಹಳ್ಳಿ ಯಶೋಧ, ಸುಕನ್ಯಾ, ಅರುಣ, ಕೀಲಾರ ಸುರೇಶ್ ಇದ್ದರು.

ಅಧಿಕಾರಿ ಪರ ಯುವ ಪ್ರಶಸ್ತಿ ಪುರಸ್ಕೃತರ ವಾದ: ಯುವ ಪ್ರಶಸ್ತಿ ಪುರಸ್ಕೃತರ ಒಕ್ಕೂಟದ ಸದಸ್ಯರು ಮಾತನಾಡಿ, ಓಂಪ್ರಕಾಶ್ ಅವರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಇಲಾಖೆಗೆ ಬಂದಿದ್ದಾರೆ. ದಕ್ಷತೆಯಿಂದ ಕಾರ್ಯನಿರ್ವಹಿಸಿ ಸಾಕಷ್ಟು ಬದಲಾವಣೆ ತಂದಿದ್ದಾರೆ. ಅಲ್ಲದೇ ನಿಷ್ಕ್ರಿಯವಾಗಿದ್ದ ಯುವಜನ ಸಂಘಟನೆಗಳನ್ನು ಸಂಯೋಜನೆ ಮಾಡಿ ರೋಸ್ಟರ್ ನಿಯಮ ಪಾಲಿಸಿ ಹಲವರಿಗೆ ಹುದ್ದೆ ದೊರಕಿಸಿಕೊಟ್ಟಿದ್ದಾರೆ. ಕ್ರೀಡಾಪಟುಗಳಿಗೆ ಉತ್ತೇಜನ ನೀಡುತ್ತಿದ್ದು, ಕ್ರೀಡಾ ನಿಲಯ ಸುಧಾರಣೆಗೊಳಿಸಿ ಸೌಲಭ್ಯ ಕಲ್ಪಿಸಿದ್ದಾರೆ. ಯುವಜನ ಮತ್ತು ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಆದರೆ ಒಳ್ಳೆಯ ಅಧಿಕಾರಿಯನ್ನು ಕೆಲಸ ಮಾಡಲು ಬಿಡುತ್ತಿಲ್ಲ. ತಮಗೆ ಸಲ್ಲುತ್ತಿದ್ದ ಕಾರ್ಯಕ್ರಮ ಮತ್ತು ಸವಲತ್ತು ಕೈ ತಪ್ಪಿದ್ದರಿಂದ ವೈಯಕ್ತಿಕ ಹಿತಾಸಕ್ತಿಗಾಗಿ ಅಧಿಕಾರಿ ವಿರುದ್ಧ ಕುತಂತ್ರ ಮಾಡುತ್ತಿದ್ದಾರೆ ಎಂದರು.

ಅಧಿಕಾರಿ ವಿರುದ್ಧ ಪ್ರತಿಭಟನೆ ಮಾಡುತ್ತಿರುವವರು ತಮ್ಮನ್ನು ಯಾವ ರೀತಿ ನಿರ್ಲಕ್ಷ ಮಾಡುತ್ತಿದ್ದಾರೆ ಎಂಬುದನ್ನು ಬಹಿರಂಗವಾಗಿ ಹೇಳಲಿ. ಈ ಹಿಂದೆಯೂ ದಕ್ಷತೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಅಧಿಕಾರಿ ವಿರುದ್ಧ ಪಿತೂರಿ ಮಾಡಿ ವರ್ಗಾವಣೆ ಮಾಡಿಸಿದರು. ಆದರೆ ಅಧಿಕಾರಿ ಸುರೇಶ್ ಅವಧಿಯಲ್ಲಿ ಇಲಾಖೆಯಲ್ಲಿ 1.20 ಕೋಟಿ ಅಕ್ರಮದ ಆರೋಪ ಇದೆ. ಆ ಬಗ್ಗೆ ಇವರು ಪ್ರಶ್ನಿಸಲಿಲ್ಲ. ಜಿಲ್ಲಾಡಳಿತದ 87 ಸಮಿತಿಗಳಲ್ಲಿ ಅಹಿಂದಾ ಸಮುದಾಯಕ್ಕೆ ಸೇರಿದ ಪ್ರಶಸ್ತಿ ಪುರಸ್ಕೃತರು ಇಲ್ಲ. ಸಮಿತಿಗೆ ನೇಮಕ ಮಾಡಿಲ್ಲ ಎಂದು ಪ್ರಶ್ನಿಸಿದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ನಾಗರಾಜ್, ಕ್ರಾಂತಿಸಿಂಹ, ಕುಮಾರ್, ಸಬ್ಬನಹಳ್ಳಿ ಕುಮಾರ್, ಹಿರಿಯ ಕಲಾವಿದ ಮುದ್ದಪ್ಪ, ಪೂಜಾ ಕುಣಿತ ಕಲಾವಿದ ದೇವರಾಜ್, ರಮಾನಂದ ಭಾಗವಹಿಸಿದ್ದರು.

ಡಿಸೆಂಬರ್‌ನಲ್ಲಿ ಮತ್ತೊಂದು ಯುವಜನೋತ್ಸವ

ಜಿಲ್ಲಾ ಯುವ ಜನೋತ್ಸವ ಉದ್ಘಾಟಿಸಿ ಮಾತನಾಡಿದ ಶಾಸಕ ರವಿಕುಮಾರ್ ಗಣಿಗ, ಜಿಲ್ಲೆಗೆ ಕೆಟ್ಟ ಹೆಸರು ಬರಬಾರದು ಎಂದು ನಾನು ಕಾರ್ಯಕ್ರಮಕ್ಕೆ ಬಂದಿದ್ದೇನೆ. ಎಲ್ಲಾ ಕಡೆ ಹೊಗಳು ಭಟ್ಟರು ಇರುತ್ತಾರೆ. ಆದರೆ ಸರಿಯಾದ ದೃಢ ನಿರ್ಧಾರ ಕೈಗೊಳ್ಳಲು ಪಂಚೇಂದ್ರಿಯ ಕೆಲಸ ಮಾಡಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಲು ಮುಂದಾಗಬೇಕು. ಸಭಾಂಗಣದಲ್ಲಿ ಅರ್ಧ ಖಾಲಿ ಇರುವುದು ಅವಮಾನ ಎಂದರು. ಇದೀಗ ನಡೆಯುತ್ತಿರುವ ಯುವಜನೋತ್ಸವ ಸಾಂಕೇತಕವಾಗಿ ಆಚರಿಸಿ, ಯಾರಿಗೂ ಬಹುಮಾನ ನೀಡಬೇಡಿ. ಡಿ.23ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಯುವಜನೋತ್ಸವವನ್ನು ಸಂಭ್ರಮದಿಂದ ಆಚರಿಸೋಣ. ನಾನೇ ಪೂರ್ವಭಾವಿ ಸಭೆ ಹೋಗುತ್ತೇನೆ. ಎಲ್ಲರೂ ಬರಲಿ ಚರ್ಚೆ ನಡೆಸಿ ಎಲ್ಲರನ್ನು ಒಗ್ಗೂಡಿಸಿ ಯುವಜನೋತ್ಸವವನ್ನು ಆಚರಿಸೋಣ ಎಂದು ಹೇಳಿದ ಬಳಿಕ ಕಾರ್ಯಕ್ರಮ ತರಾತುರಿಯಲ್ಲಿ ಮುಕ್ತಾಯವಾಯಿತು.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಪೂಜಾ ಕುಣಿತ ಕಲಾವಿದ ಸ್ಥಳದಲ್ಲೇ ಸಾವು

ಮದ್ದೂರು, ನ.29– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಪೂಜಾ ಕುಣಿತ ಕಲಾವಿದರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮದ್ದೂರು–ತುಮಕೂರು ಹೆದ್ದಾರಿಯಲ್ಲಿ ಬುಧವಾರ ಮುಂಜಾನೆ ನಡೆದಿದೆ.



ತೂಬಿನಕೆರೆ ಗ್ರಾಮದ ನಿವಾಸಿ ಕೃಷ್ಣೇಗೌಡರ ಪುತ್ರ, ಪೂಜಾ ಕುಣಿತ ಕಲಾವಿದ ನಂಜುಂಡಸ್ವಾಮಿ (36) ಸಾವನ್ನಪ್ಪಿದವರು. ಈತ ಮಂಗಳವಾರ ರಾತ್ರಿ ತಾಲೂಕಿನ ಮಾದನಾಯಕನಹಳ್ಳಿಯಲ್ಲಿ ಅದ್ಧೂರಿಯಾಗಿ ಪೂಜಾ ಕುಣಿತ ಕಾರ್ಯಕ್ರಮ ನಡೆಸಿ ಕೊಟ್ಟು ಎಲ್ಲರಿಂದ ಮೆಚ್ಚುಗೆ ಗಳಿಸಿ ಮುಂಜಾನೆ ಸ್ವಗ್ರಾಮಕ್ಕೆ ವಾಪಸ್ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಮಾಚಹಳ್ಳಿ ಬಳಿಯ ಡಾಬಾ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಸ್ತೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಸಾಪದಿಂದ ಸುವರ್ಣ ಸಂಭ್ರಮ ಆಚರಣೆ



ಚಾಮರಾಜನಗರ, ನ.29– ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸುವರ್ಣ ಸಂಭ್ರಮ ಮತ್ತು ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡಿಗ ಕರ್ನಾಟಕ ಹಾಗೂ ಸಂವಿಧಾನ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಸುರೇಶ್ ಗೌಡ ಹಾಗೂ ಮುಖಂಡ ಬಸವನಪುರದ ಜಡೇಸ್ವಾಮಿ ಕನ್ನಡಾಂಬೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಮುಖಂಡ ರವಿಚಂದ್ರ ಪ್ರಸಾದ್ ಮಾತನಾಡಿ, ಸಂವಿಧಾನ ಸಮರ್ಪಣಾ ದಿನವನ್ನು ನ.26ರಂದು ದೇಶದ ಎಲ್ಲೆಡೆ ಆಚರಿಸಲಾಗುತ್ತಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಂಕೇತವಾಗಿ ಇಡೀ ರಾಷ್ಟ್ರದ ಜನ ಸಂವಿಧಾನಾತ್ಮಕವಾಗಿ ಒಂದುಗೂಡಿ ಇಂದು ಭಾರತ ವಿಶ್ವದಲ್ಲಿ ಶ್ರೇಷ್ಠವಾದ ಸಂವಿಧಾನವನ್ನು ಸ್ವೀಕರಿಸಿರುವುದು ಹೆಮ್ಮೆ. ಕಾನೂನು ಗೌರವಿಸುವ ಮೂಲಕ ಪ್ರತಿಯೊಬ್ಬರು ಉತ್ತಮ ಮಾರ್ಗದಲ್ಲಿ ರಾಷ್ಟ್ರ ನಿರ್ಮಿಸಲು ಸಾಧ್ಯ ಎಂದು ತಿಳಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿ, ಮಾತೃಭಾಷೆ ಕನ್ನಡವನ್ನು ನಾವೆಲ್ಲರೂ ಪ್ರೀತಿ ಆಚರಿಸೋಣ. ಕನ್ನಡ ಸಂಸ್ಕೃತಿ, ಪರಂಪರೆ ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ ಸಂರಕ್ಷಣೆ ಬಹು ಮುಖ್ಯವಾಗಿದೆ. ಕರ್ನಾಟಕ ಅಭಿವೃದ್ಧಿ ಪಥದತ್ತ ಸಾಗುತ್ತಿದ್ದು, ಕೈಗಾರಿಕೆ ನೀರಾವರಿ, ಕೃಷಿ, ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ ಎಲ್ಲಾ ಕ್ಷೇತ್ರಗಳಲ್ಲೂ ಮುಂದೆ ಸಾಗುತ್ತಿರುವುದು ಕನ್ನಡಿಗರಾದ ನಾವು ಹೆಮ್ಮೆ ಪಡಬೇಕು ಎಂದರು. ಬರಹಗಾರ ಲಕ್ಷ್ಮೀನರಸಿಂಹ ಮಾತನಾಡಿದರು. ಮೊಬಿಲಿಟಿ ಇಂಡಿಯಾ ಸಂಸ್ಥೆಯ ಕುಮಾರ್, ಮಹದೇವಸ್ವಾಮಿ, ಬೊಮ್ಮಾಯಿ, ಮುರುಗೇಂದ್ರ, ಮಹಾದೇವ ಮುಂತಾದವರು ಉಪಸ್ಥಿತರಿದ್ದರು.

ಯುವ ಜನಾಂಗಕ್ಕೆ ಅಂಬೇಡ್ಕರ್ ಚರಿತ್ರೆ ಮಾದರಿ

ಸಂವಿಧಾನ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಮತ



ಚಾಮರಾಜನಗರ, ನ.29– ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಚರಿತ್ರೆ ಯುವ ಜನಾಂಗಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.

ನಗರದ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಸಂವಿಧಾನ ಬಳಗದ ವತಿಯಿಂದ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾನಾಯಕ ಧಾರಾವಾಹಿ ಮೂಲಕ ಅಂಬೇಡ್ಕರ್ ಜೀವನ ಚರಿತ್ರೆ ತಿಳಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಇಂತಹ ಧಾರಾವಾಹಿಗಳು ಯುವ ಜನತೆಗೆ ಸ್ಫೂರ್ತಿಯಾಗಿದೆ. ಅಂಬೇಡ್ಕರ್ ಜೀವನ ವೃತ್ತಾಂತ ಹಾಗೂ ಕೆಲವು ಘಟನಾವಳಿಗಳನ್ನು ಮಾತ್ರ ನಾವೆಲ್ಲರು ಪುಸ್ತಕಗಳನ್ನು ಓದಿ ತಿಳಿದುಕೊಂಡಿದ್ದೇವು. ಆದರೆ, ಮಹಾನಾಯಕ ಧಾರಾವಾಹಿಯ ಮೂಲಕ ಅಂಬೇಡ್ಕರ್ ಅವರ ಸಂಪೂರ್ಣ ಜೀವನ ಚರಿತ್ರೆಯನ್ನು ದೃಶ್ಯವನ್ನು ದೇಶದ ಮೂಲೆ ಮೂಲೆಗಳಿಗೆ ತಲುಪುವಂತೆ ಜೀ ವಾಹಿನಿಯ ಮಾಡಿದೆ ಎಂದರು.



ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರಾದ ಕಾರ್ಯಕ್ರಮದ ಆಯೋಜಕ ವೆಂಕಟರಮಣಸ್ವಾಮಿ ಮಾತನಾಡಿ, ಸಂವಿಧಾನ ದಿನವನ್ನು ಬಹಳ ಅರ್ಥಪೂರ್ಣವಾಗಿ ಆಚರಣೆ ಮಾಡುವ ಉದ್ದೇಶದಿಂದ ಮಹಾನಾಯಕ ಧಾರಾವಾಹಿ ತಂಡವನ್ನು ಚಾ.ನಗರ ಜಿಲ್ಲೆಗೆ ಕರೆಸಬೇಕು ಎಂದು ಕಳೆದ ಮೂರು ತಿಂಗಳಿಂದ ಕಲಾವಿದರನ್ನು ಸಂಪರ್ಕಿಸಿ ಚಾಮರಾಜನಗರಕ್ಕೆ ಕರೆ ತಂದು ಸನ್ಮಾನಿಸಲಾಗಿದೆ ಎಂದು ಹೇಳಿದರು.

ಚಾಮರಾಜನಗರ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆದರ್ಶಗಳನ್ನು ಜೀವನದಲ್ಲಿ ಸದಾ ಅಳವಡಿಸಿಕೊಳ್ಳಬೇಕು ಎಂದರು. ಪ್ರೊ.ಎಚ್.ಎನ್. ರಾಜಶೇಖರ್, ಸರ್ಕಾರಿ ಮೆಡಿಕಲ್ ಕಾಲೇಜಿನ ಡೀನ್ ಡಾ.ಎಚ್.ಜಿ.ಮಂಜುನಾಥ್ ಮಾತನಾಡಿದರು.

ಸನ್ಮಾನ: ಮಹಾನಾಯಕ ಧಾರಾವಾಹಿಯ ಜಗನ್ನಾಥ್ ನಿವಗುಣೆ, ಅಥರ್ವ ಕರ್ವೆ ಅವರಿಗೆ ಬೆಳ್ಳಿ ಗದೆ, ಕು.ನಾರಾಯಣಿ ವರ್ಣೆ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬುದ್ಧ ವಿಹಾರದ ಬೌದ್ಧ ಬಿಕ್ಕು ಬೋಧಿರತ್ನ ಬಂತೇಜಿ, ಸಂವಿಧಾನ ಬಳಗದ ಅಧ್ಯಕ್ಷ ಎಸ್.ಜಯಕಾಂತ್ ಚಾಲುಕ್ಯ, ಭಾರತೀಯ ಬೌದ್ಧ ಮಹಾಸಭಾ ಉಪಾಧ್ಯಕ್ಷ ಮಹೇಂದ್ರ ಮಾಂಕಾಳೆ, ರಾಮಚಂದ್ರಪ್ಪ, ಕಾಳಿಚರಣ್ ಇತರರು ಇದ್ದರು.

ಚಾ.ನಗರದಲ್ಲಿ ಮುಂದುವರೆದ ಕಾವೇರಿ ಕಿಚ್ಚು

ಚಾಮರಾಜನಗರ, ನ.29– ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 85 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು, ಬುಧವಾರವೂ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ನಂತರ ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೇಂದ್ರ ಮತ್ತು ರಾಜ್ಯ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದ ಹುಂಡಿರಾಜು, ಚಾ.ವೆಂ.ರಾಜ್ ಗೋಪಾಲ್, ಮಹೇಶ್‌ಗೌಡ, ಗು.ಪುರುಷೋತ್ತಮ್, ವೀರಭದ್ರ, ತಾಂಡವಮೂರ್ತಿ, ರಾಜಪ್ಪ, ಪ್ರಕಾಶ್, ಮಂಜು ಇತರರು ಭಾಗವಹಿಸಿದ್ದರು.



ಡಿ.2, ಹಿತರಕ್ಷಣಾ ಸಮಿತಿ ಸಭೆ

ಚಾಮರಾಜನಗರ, ನ.29– ಯಳಂದೂರು ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಿತರಕ್ಷಣಾ ಸಮಿತಿ ಸಭೆಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಡಿ.2ರಂದು ಬೆಳಗ್ಗೆ 11 ಗಂಟೆಗೆ ಯಳಂದೂರು ತಾಪಂ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಭೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಂಘ–ಸಂಸ್ಥೆಯವರು ಮತ್ತು ಮುಖಂಡರು ಆಗಮಿಸಿ ಸಲಹೆಗಳನ್ನು ನೀಡಬಹುದು. ಮಾಹಿತಿಗೆ ಯಳಂದೂರು ಬಸ್ ನಿಲ್ದಾಣ ಹಿಂಭಾಗದ ಕುಂಬಾರ ಗುಂಡಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಅಥವಾ ದೂ.ಸಂ:08226–240309 ಅನ್ನು ಸಂಪರ್ಕಿಸುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಿತರಕ್ಷಣಾ ಸಮಿತಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮಗಳ ಅಭಿವೃದ್ಧಿಗೆ ಸಹಕಾರ ನೀಡಿ: ಸಿ.ವಿ. ಭಾಯಿ

ಚಾಮರಾಜನಗರ ನ.29–ತಾಲೂಕಿನ ಪುಣಜನೂರು ಗ್ರಾಪಂ ಕಚೇರಿಯಲ್ಲಿ ವಿವಿಧ ವಸತಿ ಯೋಜನೆಯ 2023–24ನೇ ಸಾಲಿನ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಕ್ರಿಯಾ ಯೋಜನೆ ಸಂಬಂಧ ಗ್ರಾಪಂ ಅಧ್ಯಕ್ಷೆ ಸಿ.ವಿ. ಭಾಯಿ ಗಣೇಶ್ ಅಧ್ಯಕ್ಷತೆಯಲ್ಲಿ ಗ್ರಾಮಸಭೆ ನಡೆಯಿತು.

ಇದೇ ವೇಳೆ ಅವರು ಮಾತನಾಡಿ, ಅಮೃತ ಯೋಜನೆಯಡಿಗೆ ಪುಣಜನೂರು ಗ್ರಾಪಂ ಸೇರಿಸುವ ಪ್ರಯತ್ನದಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡಿದರೆ ಗ್ರಾಪಂ ಮತ್ತಷ್ಟು ಅಭಿವೃದ್ಧಿಪಡಿಸಲು ಸಾಧ್ಯ. ಈಗಾಗಲೇ ಗ್ರಾಪಂ ವ್ಯಾಪ್ತಿಯಲ್ಲಿ ವಸತಿ ಹೀನರು, ಕಡುಬಡವರನ್ನು ಗುರ್ತಿಸಿ ಅವರಿಗೆ ಮನೆ ನಿರ್ಮಿಸುವ ಪ್ರಯತ್ನಿಸಲಾಗುತ್ತಿದೆ. ಗ್ರಾಮ ಸಭೆಗಳಲ್ಲಿ ವಿಶೇಷವಾಗಿ ವಿಧವೆಯರು, ಅಂಗವಿಕಲರು, ಹಿರಿಯ ನಾಗರಿಕರು, ಮಹಿಳೆಯರಿಗೆ ಮೊದಲ ಆದ್ಯತೆ ನೀಡಿ ಆಯ್ಕೆ ಮಾಡಬೇಕು ಎಂದರು. ಪಿಡಿಓ ಸಿದ್ದರಾಜು, ಗ್ರಾಪಂ ಉಪಾಧ್ಯಕ್ಷ ರಾಚಪ್ಪ, ಗ್ರಾಮ ಲೆಕ್ಕಿಗ ಮಹದೇವಸ್ವಾಮಿ, ವಾಟರ್‌ಮನ್ ಮಹದೇವನಾಯಕ ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಚಾಮರಾಜನಗರದಲ್ಲಿ ಕಾರ್ಯನಿರ್ವಹಿಸಲು ಈ ಕೆಳಗಿನ ವಿದ್ಯಾರ್ಹತೆ ಉಳ್ಳವರು ಬೇಕಾಗಿದ್ದಾರೆ. MA (Sociology and Phychology), MSW, GNM, BSc Nursing any Degree (male or Female)
9538969019
9341624476, 9448208062

AL-Kabir English Nursery Higher Primary and High School
SS Nagar, Bannimantap, Mysore
REQUIRED
■ PRINCIPAL
EXPERIENCED AND DYNAMIC APPLICANTS MAY APPLY
9901903101

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್
ಮೈಸೂರಿನ ರಾಜ್‌ಕುಮಾರ್ ರಸ್ತೆ, ತ್ರಿವೇಣಿ ವೃತ್ತದ ಹತ್ತಿರ ರಿಜಿಸ್ಟ್ರೇಷನ್ ಆಫೀಸಿಗೆ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಸಂಬಳ ಹಾಗೂ ಇತರೆ ಸೌಲಭ್ಯಗಳಿರುತ್ತದೆ. ಸಂಪರ್ಕಿಸಿ:
9513402020, 9663479069

ಮಂಟಪದ ಮನೆ
ನಮ್ಮಲ್ಲಿ ಬೀಟಿ, ಹಲಸು ಮರಗಳಿಂದ ತಯಾರಾದ ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ ವಿಚಾರಿಸಿ ವಿಳಾಸ ಶ್ರೀನಗರ ಮೈಸೂರು

9448207634
7406425642

WANTED
Helper for hotel and also coffee tea maker
Contact
7204774774

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್‌ಗೆ
ಸಿಂಗಲ್‌ಕಲರ್ ಪ್ರಿಂಟಿಂಗ್ ಮಿಷಿನ್, ಕಟಿಂಗ್ ಮಿಷಿನ್, ಫೋಲ್ಡಿಂಗ್ ಮಿಷಿನ್‌ಗೆ ಅಪರೇಟರ್ ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ.
ಡಿಟಿಪಿ ಅಪರೇಟರ್‌ಗಳು ಮತ್ತು ಡಿಸೈನರ್‌ಗಳು ಬೇಕಾಗಿದ್ದಾರೆ.
ಅನುಭವ ಇದ್ದವರಿಗೆ ಮೊದಲ ಆದ್ಯತೆ
ಮೊ : 9449853308

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಮೈಸೂರಿನ ಸಿಟಿ ಭಾಗದಲ್ಲಿ ಕೆಲಸ ಮಾಡಲು ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ:
9060075860
9035802909, 8618971363

ಬೇಕಾಗಿದ್ದಾರೆ
ಸಸ್ಯಾಹಾರಿ ಹೋಟೆಲ್‌ಗೆ ಕ್ಯಾಶಿಯರ್, ಸೂಪರ್‌ವೈಸರ್, ತರಕಾರಿ ಕಟರ್ ಬೇಕಾಗಿದ್ದಾರೆ.
9916206561

ಮಾರಾಟಕ್ಕಿದೆ
ಲ್ಯಾಬ್ರೆಡರ್ ಪಪ್ಪಿಗಳು ಮಾರಾಟಕ್ಕಿದೆ

4000K to 5000K
6362130338

WANTED
Accountant Qualification any Degree
Tally+Auditing Experince
Kannada, English, Malayalam, or Tamil,
9980616059
7306653228

YPV ಶಕ್ತಿ ಚಿಕಿತ್ಸೆಗೆ ಉಚಿತ ಪರಿಚಯ
ಬಿಪಿ, ಮಧುಮೇಹ, ಅಲರ್ಜಿಗಳು, ಗ್ಯಾಸ್ಟ್ರಿಕ್, ಖಿನ್ನತೆ, ಇತ್ಯಾದಿಗಳಿಗೆ ಚಿಕಿತ್ಸೆ
ದಿ: 3/12/2023, ಬೆಳಿಗ್ಗೆ 10 ರಿಂದ 12.30, ಸಿದ್ಧಾರ್ಥನಗರ, ಮೈಸೂರು
9481067118
6381779015

ನಗರದ ಅಂಗಡಿಯೊಂದಕ್ಕೆ
* ಸ್ಟೋರ್ ಕೀಪರ್
* ಅಕೌಂಟೆಂಟ್
* ಚಾಟ್ಸ್ ಮೇಕರ್
* ಕೌಂಟರ್ ಸೇಲ್
* ಸೂಪರ್ ವೈಸರ್ ಹಾಗೂ
* ಸ್ವೀಟ್ಸ್ ಮಾಡಲು ಹೆಲ್ಪರ್ಸ್ ಬೇಕಾಗಿದ್ದಾರೆ.

9606116663/4

ತಕ್ಷಣ ಕೆಲಸ
ಮೈಸೂರಿನ ಹೆಸರಾಂತ ಹೆಲ್ ಕೇರ್ ಸಂಸ್ಥೆಗೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ, ಊಟ ವಸತಿಯೊಂದಿಗೆ ಸಂಬಳ 12,000 ರಿಂದ 18,000 ಇರುತ್ತದೆ. (ಸರ್ಕಾರಿ ನೊಂದಾಯಿತಾ ಸಂಸ್ಥೆ)
9035113222

HOUSE FOR RENT
(Vegetarians Only) 2 BHK House First Floor available for Rent at Krishnamurthypuram, Mysore, Near Krishnamurthi-puram Post Office. Contact:
9448939404
9353561720

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 15000/–
8050699742
6366141518

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ಕುವೆಂಪುನಗರ, ವಿಜಯನಗರ 2ನೇ ಸ್ಟೇಜ್, ಕೆ.ಆರ್.ಎಸ್.ಕಡಕೋಳ ಇಂಡಸ್ಟ್ರಿಯಲ್ ಏರಿಯಾ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಡಿ.ಅರಸು ರಸ್ತೆ, ಶ್ರೀರಂಗಪಟ್ಟಣ ಹತ್ತಿರ, ಊಟ ಹಾಗೂ ವಸತಿ ವ್ಯವಸ್ಥೆ ಇರುತ್ತದೆ.
ಆಸಕ್ತಿ ಇದ್ದವರು ಸಂಪರ್ಕಿಸಿ:
8310098788

SITE FOR SALE
SHRIRAM LAND "OXYGEN 2"
Ready to register / RERA & DTCP approved Clear title
Sites Starting@ Rs.14.99 Lakhs Onwards
HD Kote Main Road, Mysore (Landmark - Near Jayapura)
9686188919
7676644999

SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

WANTED
WRITER CUM DRIVER (FAMILY) TO WORK IN A COFFEE ESTATE.
PF/ ESI FACILITIES & ACCOMMODATION PROVIDED
LOCATION: GONIKOPPAL, KODAGU
8550002555

JESWA ಸಂಸ್ಥೆಯಿಂದ ತರಬೇತಿ
ಮೈಸೂರಿನಲ್ಲಿ ಫ್ಯಾಷನ್ ಡಿಸೈನಿಂಗ್, ಟೈಲರಿಂಗ್, ಬ್ಯೂಟಿಷಿಯನ್ ಹಾಗೂ ಮೇಕಪ್ ಕ್ಲಾಸ್ ತರಬೇತಿ ಪಡೆಯಲು ಸಂಪರ್ಕಿಸಿ:
1580, 2ನೇ ಮಹಡಿ, ಜಗದಾಂಬಾ ಸ್ಕೂಲ್ ಮುಂಭಾಗ, ಸಿದ್ದಪ್ಪ ವೃತ್ತದ ಹತ್ತಿರ, ಲಕ್ಷ್ಮಿಪುರಂ, ಮೈಸೂರು
9844736136
9844264134

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಟ್ಟಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
ಸಂಬಳ 10,000 ಮೂಲ ಭತ್ಯೆ, +5000 ಪ್ರೋತ್ಸಾಹ ಧನ.
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

SITES FOR SALE
ROYAL HILLS LAYOUT,
MUDA Approved Sites
30x50 - 50 Lakhs
Bank Loan upto 75%
Near JSS / Police Layout, T.Narasipura Road, Mysuru.
1.5 Kms from Ring Road.
9900363084, 8660105902

ಮನೆ ಮಾರಾಟಕ್ಕಿದೆ
30X44
ನಂಜನಗೂಡು, ಹುಲ್ಲಹಳ್ಳಿ ರಸ್ತೆ, ರಾಮಸ್ವಾಮಿ ಲೇಔಟ್, ಸಿಟಿಜನ್ ಪಬ್ಲಿಕ್ ಸ್ಕೂಲ್ ಹತ್ತಿರ, ಸೈಟ್ ನಂ. 137/138
8147474199
7795088989

ಮನೆ ಬಾಡಿಗೆ
(ಚಿಕ್ಕ ಸಂಸಾರಕ್ಕೆ) ಜೆಪಿ ನಗರ
9663563587
6362210810

AFFIDAVIT
I, P. Om Prakash, residing at Door #886/1, New No. M-1/1, 2nd Cross, Kamatgeri, Mandi Mohalla, Mysore-570 001, have changed my name from P. Om Prakash to Om Prakash, on my own free will, in front of Notary S.N. Hemalatha on 11-10-2023. Henceforth in future I shall be represented by the Om Praksh all my documents standing in the name of Om Praksh in future shall also be binding on me in the name of Om Prakash.
Sd/- Om Prakash

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಬೇಕಾಗಿದ್ದಾರೆ
ಆಫೀಸ್ & ಫೀಲ್ಡ್ ಎಕ್ಸಿಕ್ಯೂಟೀವ್ಸ್
ಪಿಯುಸಿ & ಯಾವುದೇ ಪದವಿ
ಆಕರ್ಷಕ ವೇತನ & ಇನ್ಸೆಂಟೀವ್
ಪಿಎಫ್ & ಇಎಸ್‌ಐ
96635 61350

Sudarshan Saur SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

WANTED
MIS Executive (MS Excel Expert)
Salary - 25000 to 40000
M.Com & Articleship Preference
Srikanteshwara Electronics Pvt.Ltd.
Sri Sai Arpitha Arcade, beside Hardwick School, Lakshmipuram, Mysore
9632535556

WANTED
Female Graduates and NST or NTT Trained teachers for Montessori Preschool in Bogadi
9113257683

ಹೆಸರು ಬದಲಾವಣೆ
ಗಣೇಶ ಕೆ.ಎಸ್., ಆದ ನಾನು 1188, 7ನೇ ಕ್ರಾಸ್, ಸುಣ್ಣದಕೇರಿ, ಕೆ.ಆರ್. ಮೊಹಲ್ಲಾ, ಮೈಸೂರು–571105, ಇಲ್ಲಿ ವಾಸವಿದ್ದು, ನನ್ನ ಹೆಂಡತಿ ಹೆಸರು ಶಶಿಕಲಾ ಎಂದು ನಮೂದಾಗಿರುತ್ತದೆ. ಈಗ ನನ್ನ ಹೆಂಡತಿ ಹೆಸರನ್ನು ಕಲಾವತಿ (Kalavati) ಎಂದು ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದು ನೋಟರಿ ಹೆಚ್.ಡಿ. ದಿನೇಶ್, ಹುಣಸೂರು ಎದುರು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಕಲಾವತಿ W/o ಗಣೇಶ್ ಕೆ.ಎಸ್.

WANTED
Telecallers - Female 10th & Above Earn 7 K up to 10K Field Data Executives - Male, Earn 12K up to 20k (Based on Experience)
M.R.Associates (HDFC-Advisers)
Saraswathipuram, Mysore
9900844455

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
18–1–2024: ರಾಯಲ್ ರಾಜಸ್ತಾನ್ 11 ದಿನಗಳ ಪ್ಯಾಕೇಜ್. 30–1–2024: ಗುಜರಾತ್, ನಾಗ ನಾಥ್, ಸೋಮ್‌ನಾಥ್, ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಟ್ಯಾಚ್ಯು. 8–1–2024: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ ಬೀಚ್. 7–12–2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ. 4–1–2024: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ ವಿಮಾನ ಪ್ಯಾಕೇಜ್.
9591017782, 9964527782

ಬೇಕಾಗಿದ್ದಾರೆ
1) ಸ್ಟೀವರ್ಡ್ಸ್ ಕ್ಯಾಪ್ಟನ್ (ಅನುಭವವುಳ್ಳ ಅಭ್ಯರ್ಥಿಗಳು) – 2 ಹುದ್ದೆ
2) ಸ್ಟೀವರ್ಡ್ಸ್ – 4 ಹುದ್ದೆಗಳು
3) ಬೆಲ್ ಬಾಯ್ – 2 ಹುದ್ದೆ.
ದಿ ಕೋರಮ್ ಹೋಟೆಲ್ #2257/1, ವಿನೋಭಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು.
9620274629, 9620274630

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
1) ಒಕ್ಕಲಿಗ ಗೌಡ, 54 ವರ್ಷದ ಮಹಿಳೆಗೆ (Wife Partner) ಆಗಲು ಬಿಜಿನೆಸ್ ಪಾರ್ಟನರ್ ಬೇಕು. ಜಾತಿ ಅಭ್ಯಂತರವಿಲ್ಲ, ಜೀವನ ಸಂಗಾತಿ ಬೇಕು ಅನ್ನುವವರು ದಯವಿಟ್ಟು ನೇರವಾಗಿ ಸಂಪರ್ಕಿಸಿ. 2) SC ಲೆಫ್ಟ್ Engg. ಹುಡುಗಿಗೆ Engg. ವರ ಬೇಕು. 3) ಕುರುಬ ಹಾಗೂ ಲಿಂಗಾಯಿತ, ಕೂರ್ಗ, ತಮಿಳು, ಒಕ್ಕಲಿಗ, ಎಲ್ಲಾ ಜಾತಿಯ ಮೊದಲನೇ, ಎರಡನೇ ಮದುವೆಗೆ ನೇರವಾಗಿ ಸಂಪರ್ಕಿಸಿ:
Mob: 8951241381

ಮನೆ ಮಾರಾಟಕ್ಕಿದೆ
ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆ, ಸೆಂಟ್ ಥಾಮಸ್ ಶಾಲೆ ಹತ್ತಿರ, ಮೈಸೂರು, ವಿಶ್ವೇಶ್ವರ ನಗರ, ಆರ್.ಸಿ.ಸಿ.ಮನೆ ಸುಮಾರು 11–12 ಚದುರು ಅಡಿ (40/58ರ ನಿವೇಶನದಲ್ಲಿ)
(Brokers Exuse)
9448072218

OLD AGE HOME
We offer nursing and Medicale Services to Bedridden and Senior Citizens with Veg. Food and Accomodation at our Centre in Gokulam Mysore at a Reasonable cost.
9880102700

AFFIDAVIT
I, **Haakil**, residing at D.No. 718, Doddamma Thayi Temple Road, Hinkal, Mysore. I swear that my name is **Haakil** as mentioned in my Aadhar Card, Pan Card and my school records is correct. But in my D.L. issued by the RTO, Mysore, my name has been wrongly mentioned as **Akeel.** I declare this in front of Notary S.V. Nagendra.
Sd/- **Haakil**

SITES FOR SALE
30x40 - 33 Lakhs
20x40 - 22 Lakhs
Bank loan upto 80%
Near Gurur Bus Stop, Ramabai-nagar, Mysore. DTCP Approved (Corporation limits)
1.5 Kms from JP Nagar Ring Road
Mob: 8660105902

HOUSE FOR SALE
4 BHK Duplex New House, 30x40, MUDA, E/F Door & site at Ramakrishnanagar 'I' Block, Near Andolana Circle.
Price: Rs. 1.60 Cr.
(BROKERS EXCUSE)
Mob: 8660105902

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಹೂಟಗಳ್ಳಿ & ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, PUC, ITI any trade, ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು 18 ರಿಂದ 30. ಸಂಬಳ: 14,500 ರಿಂದ 19,500. ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ. ಸಂಪರ್ಕಿಸಿ:
7019380847, 7019822622, 6362491336, 9611601179

HOUSE FOR SALE
3 BHK Duplex New House, MUDA, N/F Door at Vijayanagar 4th Stage, Near Marimallappa School.
Price: 84 Lakhs / 1.59 Cr.
Mob: 8660105902

MATCH MAKERS, BRIDE / GROOMS
ಮದುವೆಗೆ ವಧು/ವರರ ಆಯ್ಕೆಗೆ
ಎಲ್ಲಾ ಜಾತಿಯ Govt Job, Private job, ಡಾಕ್ಟರ್/ ಇಂಜಿನಿಯರ್, ಎಲ್ಲಾ ಡಿಗ್ರಿಗಳು/ಎಲ್ಲಾ ವಿದ್ಯಾಭ್ಯಾಸದವರು 1st Marriage / Divorce ವಿಧವೆಯರು, ಸ್ವತಂತ್ರ Life Partnerಗಾಗಿ ನಮ್ಮ ಕರ್ನಾಟಕದ್ಯಂತ ಇರುವ ಲಕ್ಷಾಂತರ ವಧು/ವರರಲ್ಲಿ ಮದುವೆ ಆಯ್ಕೆಗೆ 600 ಸ್ವತಂತ್ರ ವಧುಗಳಿಗೆ ವರಬೇಕು. 12000 ಶ್ರೀಮಂತವರರಿಗೆ ವಧು ಬೇಕು. ಬಡವರ ವಧುಗಳಿಗೆ ಉಚಿತ+ಮದುವೆ/ವರರ ಆಯ್ಕೆ/ಉದ್ಯೋಗ, ವಸತಿ ಸೌಕರ್ಯವಿರುತ್ತದೆ.
7975728012

WANTED
1) Electrician - Knows Electrical Panelboard Control wiring must
2) Welder
3) Helper
7259016509/12

HOUSE FOR SALE
30x40, West face site, North Face door, newly constructed, G+2, Dattagalli, Somanatha-nagar, Mysore. Contact:
9738884777, 9900251194
30x40 house for sale, ground floor near J.P. Nagar.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ರೂ. 2000 ಕ್ಕೆ
ಡಬಲ್ ಕಾಟ್ ಹಾಸಿಗೆ ಮತ್ತು ದಿಂಬುಗಳು (ಕವರ್), ಬೆಡ್‌ಶೀಟ್, ಬ್ಲಾಂಕೆಟ್ ಕೇವಲ 2000 ಕ್ಕೆ.
88841 79981

Space for Rent
35x25, 2nd Floor, Godown, Office, Tuition, Call Centre, Goods Packing Agency purpose etc. Near Kuvempunagar, Pooja Bakery, Near Udupi Vaibhav Hotel Backside. Contact:
6362429022, 8431553014

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು 18 ರಿಂದ 40 ವರ್ಷ ವಿದ್ಯಾರ್ಹತೆ: 7 ರಿಂದ PUC ಮತ್ತು ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
8277047300

ಸುವರ್ಣ ಅವಕಾಶ
ಮನೆ ಕಟ್ಟಿಸುವವರ ಗಮನಕ್ಕೆ ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟ ಉಳ್ಳ ಸಾಮಾಗ್ರಿಗಳೊಂದಿಗೆ ಚದುರಡಿಗೆ ರೂ.1670/–ರಂತೆ ಕಟ್ಟಿ ಕೊಡಲಾಗುವುದು ಮುಂಗಡ ಹಣ ಪಾವತಿ ಮಾಡುವಂತಿಲ್ಲ
9482127279

WANTED
HR, Telecallers, 15 K
Event Managers - 20K
TV Anchors,
Marketing Manager-20K
Pigmy Collection Boy
9980959598

WANTED
For Finance Office
* Executive - 4 Nos
* Telecalling - 4 Nos
* Receptionist - 1 No
* Driver Cum Office Boy - 1 No

(T&C), Contact -
98450 28614

ಶ್ರೀ ಮೂರ್ತಿ ಟೂರಿಸ್ಟ್
20.11.23 ಬೆಳಗ್ಗೆ 4.30ಕ್ಕೆ ಹೊರಟು 1 ದಿನದಲ್ಲಿ 3 ರಂಗನಾಥಸ್ವಾಮಿ (ಆದಿ, ಮಧ್ಯ, ಅಂತ್ಯ ರಂಗನಾಥ) ದರ್ಶನ ಮಾಡಿ 21–12–23 ಬೆಳಿಗ್ಗೆ 11ಕ್ಕೆ ವಾಪಸ್ ಬರುವುದು (ಕೆ.ಎಸ್.ಆರ್.ಟಿ.ಸಿ ಸಾಮಾನ್ಯ ಬಸ್‌ನಲ್ಲಿ)
9480733069

WANTED
Sales boys to work in a Sports Shop Full time (From 10 am to 7 pm)
For Futher Details Contact
7760109047
8105368325

FOR SALE
30x50 NW corner Semi commercial site Parallel to ring road Near M Pro Hotel Satagalli
9738977780

ಬೇಕಾಗಿದ್ದಾರೆ
ಟೀಮ್ ಲೀಡರ್ (ಸಂಬಳ 13000) ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ ಮಾತನಾಡುವವರು) ಸ್ಥಳ : ಚಾಮುಂಡಿಪುರಂ ಮತ್ತು ಎನ್.ಅರ್.ಮೊಹಲ್ಲಾ ಸಂಬಳ: 8000 ರಿಂದ 11000ರವರೆಗೆ ಮೊಬೈಲ್ ನಂಬರ್
8150005111

ಬೇಕಾಗಿದ್ದಾರೆ
ಫ್ಲೋರ್‌ಮಿಲ್‌ನಲ್ಲಿ ಕೆಲಸಕ್ಕೆ ಅನುಭವವಿರುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಸಂಪರ್ಕಿಸಿ
8867410444

AVAILABLE FOR RENT
5 BHK HOUSE WITH ATTACHED BATHROOM @ ANANDANAGAR
9742094264

FOR LEASE
2 BHK House available for Lease at 12 lakhs near Srirampura 2nd Stage
9686375607
7892380115

HOUSE FOR LEASE
2BHK House, Ground Floor East Face Semi Furnished with Solar & UPS @ JP Nagar Ring Road (Outer)
9880290857

SITES FOR SALE
Near MIT Engineering College Reasonable Rates BMICAPA Aprroved
9483358399
6381779015

SITE FOR SALE
North Facing MUDA Approved Vijayanagar 4th Stage
9483358399
6381779015

FOR SALE
1) 30x40, 30x50 Near Defence Apartment Kote Road
2)30x40, 40x60 T Narasipura Road
3)20x30 g+1 house SRIRAMPURA
4)40x60 nice vista Satagalli
5) 40x70 House Vidyaranya Puram
6)10 Gunts Land Doctor lyt attach
New and old house city sarounding
Prakruthi Properties
9538690359, 9035990359

ಕೇರಳ ಪ್ರವಾಸ
ಒಟ್ಟು 4 ದಿನಗಳು, ಹೊರಡುವ ದಿನಾಂಕ: 08/ಡಿಸೆಂಬರ್/2023, ನೋಡುವ ಸ್ಥಳಗಳು: ಅನಂತ ಪದ್ಮನಾಭ ದೇವಸ್ಥಾನ, ಕೋವಲಂ ಬೀಚ್, ಜಟಾಯು ಅರ್ತ್‌ಸೆಂಟರ್, ಗುರುವಾಯೂರು, ಅಲ್ಲಪೆ, ಕೊಚ್ಚಿನ್ ಮರಿನ್ ಡ್ರೈವ್, ಅತಿರಪಿಲ್ಲೆ ವಾಟರ್ ಫಾಲ್, ಊಟ, ತಿಂಡಿ, ಕಾಫಿ/ಟೀ ಮತ್ತು ಮಿನರಲ್ ವಾಟರ್ ಸೇರಿರುತ್ತದೆ. ಫ್ಯಾಮಿಲಿಗೆ ಪ್ರತ್ಯೇಕ ರೂಮ್ ಇರುತ್ತದೆ. ಎಲ್ಲಾ ಸೇರಿ ಒಬ್ಬರಿಗೆ 8000/– ರೂಪಾಯಿಗಳು
7022271023

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಅನುಭವವುಳ್ಳವರು ಹೌಸ್ ಕೀಪಿಂಗ್ ಹುಡುಗರು ಸಹ ಬೇಕಾಗಿದ್ದಾರೆ. ಬನ್ನಿಮಂಟಪ ಮತ್ತು ಕೂರ್ಗಳ್ಳಿ ಇಂಡಸ್ಟ್ರಿಯಲ್ ಸುತ್ತಮುತ್ತ
9035367083
8123769346

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ 18–30, ವಿದ್ಯಾರ್ಹತೆ : ಪಿಯುಸಿ & ಯಾವುದೇ ಡಿಗ್ರಿ ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್, ನ್ಯೂ ಕಾಂತರಾಜ್ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
8296366894
7996011692

ಬೇಕಾಗಿದ್ದಾರೆ
ಫ್ಯಾಕ್ಟರಿ ಲೇಬರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಹೆಚ್.ಡಿ.ಕೋಟೆ ರಸ್ತೆ, ಜೆಮಿನಿ ರೋಲಿಂಗ್ ಷಟರ್ಸ್ ಮೆಟೀರಿಯಲ್, ಮೈಸೂರು, ಸಂಬಳ: 12500/–ಸಂಪರ್ಕಿಸಿ:
7829665715

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಮೈಸೂರು ಬಲ್ಲಾಳ್ ವೃತ್ತದ ಬಳಿ
ಬೀದಿಬದಿ ವ್ಯಾಪಾರಕ್ಕೆ ಶೆಲ್ಟರ್ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣ



ಮೈಸೂರು,ನ.29(ಪಿಎಂ)– ಬೀದಿಬದಿ ವ್ಯಾಪಾರಿಗಳಿಗೆ ಬಿಸಿಲು–ಮಳೆಯಿಂದ ರಕ್ಷಣೆ ಒದಗಿಸಿ, ಅಗತ್ಯ ಮೂಲಸೌಕರ್ಯ ಕಲ್ಪಿಸಲು ಮೈಸೂರು ಮಹಾನಗರ ಪಾಲಿಕೆಯಿಂದ ಮೈಸೂರಿನ ಬಲ್ಲಾಳ್ ವೃತ್ತದ ಸಮೀಪ (ಅಶೋಕ ವೃತ್ತ) ಶೆಲ್ಟರ್ ನಿರ್ಮಾಣ ಮಾಡುತ್ತಿದ್ದು, ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.

ವೇದಾಂತ ಹೆಮ್ಮಿಗೆ ವೃತ್ತಕ್ಕೆ ಹೊಂದಿಕೊಂಡಂತೆ ನ್ಯೂ ಕಾಂತರಾಜ್ ಅರಸ್ ರಸ್ತೆ ಬದಿಯಲ್ಲಿ (ಕೃಷ್ಣಮೂರ್ತಿಪುರಂ) 220 ಅಡಿ ಉದ್ದ ಮತ್ತು 34 ಅಡಿ ಅಗಲದ ಒಟ್ಟು ವಿಸ್ತೀರ್ಣದಲ್ಲಿ ಈ ಬೀದಿಬದಿ ವ್ಯಾಪಾರದ ಶೆಲ್ಟರ್ ನಿರ್ಮಾಣಗೊಳ್ಳುತ್ತಿದೆ. ಪಾಲಿಕೆಯ ವಲಯ ಕಚೇರಿ–2ರ ವ್ಯಾಪ್ತಿಗೆ ಬರುವ ಸದರಿ ಶೆಲ್ಟರ್‌ನಲ್ಲಿ 40ಕ್ಕೂ ಹೆಚ್ಚು ಬೀದಿಬದಿ ವ್ಯಾಪಾರಿಗಳಿಗೆ ಅವಕಾಶ ಲಭ್ಯವಾಗಲಿದೆ.

ಡೇ ನಲ್ಮ್ ಯೋಜನೆಯಡಿ 69 ಲಕ್ಷ ರೂ. (ಅಂದಾಜು ವೆಚ್ಚ) ವೆಚ್ಚದಲ್ಲಿ ಪಾಲಿಕೆಯ ವಾರ್ಡ್ ನಂ.56ರಲ್ಲಿ ಈ ಶೆಲ್ಟರ್ ತಲೆ ಎತ್ತುತ್ತಿದೆ. ಇಂಟರ್‌ಲಾಕ್ ಟೈಲ್ಸ್‌ನ ನೆಲಹಾಸು ವ್ಯವಸ್ಥೆ ಮಾಡಿದ್ದು, ಶೀಟ್ ಮೂಲಕ ಮೇಲ್ಛಾವಣಿ ವ್ಯವಸ್ಥೆ ಕಲ್ಪಿಸಲಾಗಿದೆ. ಜೊತೆಗೆ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿದೆಯಲ್ಲದೆ, ವಿದ್ಯುತ್ ಕಂಬಗಳನ್ನು ಅಳವಡಿಸಿ ರಾತ್ರಿ ವೇಳೆಯ ಬೆಳಕಿನ ವ್ಯವಸ್ಥೆಗಾಗಿ ಈಗಾಗಲೇ ವಿದ್ಯುತ್ ಸಂಪರ್ಕ ನೀಡಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಲಯ ಕಚೇರಿ–2ರ ವಲಯ ಆಯುಕ್ತ ನಾಗರಾಜ್, ಸದರಿ ಶೆಲ್ಟರ್‌ನಲ್ಲಿ ವ್ಯಾಪಾರ ಮಾಡಲು ನಮ್ಮ ವಲಯ ವ್ಯಾಪ್ತಿಯ ಸುಮಾರು 40 ಮಂದಿ ಬೀದಿಬದಿ ವ್ಯಾಪಾರಿಗಳಿಗೆ ಇಲ್ಲಿ ಅವಕಾಶ ದೊರೆಯಲಿದೆ ಎಂದು ತಿಳಿಸಿದರು. ವಲಯ ಕಚೇರಿ–2ರ ಜೆಇ ದಯಾನಂದ ಪತ್ರಿಕೆಯೊಂದಿಗೆ ಮಾತನಾಡಿ, ಒಬ್ಬ ವ್ಯಾಪಾರಿಗೆ 11 ಅಡಿ ಉದ್ದ ಮತ್ತು 9 ಅಡಿ ಅಗಲ ವಿಸ್ತೀರ್ಣದ ಜಾಗದಲ್ಲಿ ವ್ಯಾಪಾರಕ್ಕೆ ಅವಕಾಶ ದೊರೆಯಲಿದೆ. ಪಾದಚಾರಿಗಳ ಓಡಾಟಕ್ಕೂ 5 ಅಡಿ ಫುಟ್‌ಪಾತ್ ಸಹ ಲಭ್ಯವಾಗಲಿದೆ. ಹಾಗಾಗಿ ಪಾದಚಾರಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಮಾಹಿತಿ ನೀಡಿದರು.

ಟೀಂ ಇಂಡಿಯಾದ ಮುಖ್ಯ ಕೋಚ್ ಹುದ್ದೆಯಲ್ಲಿ ರಾಹುಲ್ ದ್ರಾವಿಡ್ ಮುಂದುವರಿಕೆ



ನವದೆಹಲಿ: ರಾಹುಲ್ ದ್ರಾವಿಡ್ ಟೀಂ ಇಂಡಿಯಾದ ಮುಖ್ಯ ಕೋಚ್ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ ಎಂದು ಬಿಸಿಸಿಐ ಘೋಷಿಸಿದೆ. ಬಿಸಿಸಿಐ, ತರಬೇತಿಗೆ ಸಂಬಂಧಿಸಿದ ಇತರ ಸಿಬ್ಬಂದಿಗಳ ಒಪ್ಪಂದವನ್ನೂ ಮುಂದುವರೆಸಿದೆ. ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೌರ್, ಬೌಲಿಂಗ್ ಕೋಚ್ ಪರಸ್ ಮಾಂಬ್ರೆ, ಫೀಲ್ಡಿಂಗ್ ಕೋಚ್ ಟಿ.ದಿಲೀಪ್ ಅವಧಿಯೂ ವಿಸ್ತರಣೆಗೊಂಡಿದೆ.

ಬಿಸಿಸಿಐ ದ್ರಾವಿಡ್ ಅವರ ಒಪ್ಪಂದದ ಅವಧಿಯನ್ನು ನಿರ್ದಿಷ್ಟಪಡಿಸಿಲ್ಲ ಆದರೆ ಅವರು ಕನಿಷ್ಠ ಟಿ20 ವಿಶ್ವಕಪ್ 2024 ರವರೆಗೆ ಮುಂದುವರಿಯುವ ನಿರೀಕ್ಷೆಯಿದೆ.

2021 ರ ನವೆಂಬರ್‌ನಲ್ಲಿ ರಾಹುಲ್ ದ್ರಾವಿಡ್ ಅವರನ್ನು 2 ವರ್ಷಗಳ ಅವಧಿಗೆ ಅಂದರೆ 2023 ರ ಏಕದಿನ ವಿಶ್ವಕಪ್ ಟೂರ್ನಿ ಮುಕ್ತಾಯಕ್ಕೆ ಒಪ್ಪಂದದ ಅವಧಿಯೂ ಮುಕ್ತಾಯಗೊಳ್ಳುವಂತೆ ಮುಖ್ಯ ಕೋಚ್ ಹುದ್ದೆಗೆ ನೇಮಕ ಮಾಡಲಾಗಿತ್ತು. ಇತ್ತೀಚೆಗೆ ಮುಕ್ತಾಯಗೊಂಡ ICC ಪುರುಷರ ಕ್ರಿಕೆಟ್ ವಿಶ್ವಕಪ್ 2023ರ ನಂತರ ಅವರ ಒಪ್ಪಂದದ ಅವಧಿ ಮುಗಿದ ನಂತರ ಃಅಅಖ ರಾಹುಲ್ ದ್ರಾವಿಡ್ ಅವರೊಂದಿಗೆ ಚರ್ಚೆಯಲ್ಲಿ ತೊಡಗಿ ಅಧಿಕಾರಾವಧಿಯನ್ನು ಮುಂದುವರಿಸಲು ಸರ್ವಾನುಮತದಿಂದ ಒಪ್ಪಿಕೊಂಡಿದೆ.

ಭಗವದ್ಗೀತಾ ಕಂಠಪಾಠ ಸ್ಪರ್ಧೆ

ಮೈಸೂರು, ನ. 29– ಗೀತಾ ಜಯಂತಿ ಪ್ರಯುಕ್ತ ಭಗವದ್ಗೀತಾ ಕಂಠಪಾಠ ಸ್ಪರ್ಧೆಯನ್ನು ಮೈಸೂರಿನ ಲಕ್ಷ್ಮೀಕಾಂತ ನಗರದಲ್ಲಿರುವ ದಿವ್ಯಸಂಪದ ಆವರಣದಲ್ಲಿ ನರ್ಸರಿ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಡಿ. 24 ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಡಿ. 21 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 98450 98426 ಸಂಪರ್ಕಿಸಬಹುದು.

ಐದನೇ ಪುಟದಿಂದ

ಪಕ್ಷದ ಕೆಲಸ ಮಾತ್ರ ಮಾಡಿದ್ದೇನೆ

ಹಿಂಪಡೆದಿರುವುದನ್ನು ಪ್ರಶ್ನಿಸಿ ಬಿಜೆಪಿ ಮುಖಂಡ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಬಗ್ಗೆ ಪ್ರತಿಕ್ರಿಯಿಸಿದ ಡಿಕೆಶಿ, 'ಯಾರಾದರೂ ಏನು ಬೇಕಾದರೂ ಮಾಡಲಿ... ಯಾರು ಏನು ಹೇಳಿದ್ದಾರೆ, ಏನು ಕಾಮೆಂಟ್ ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ. ನಾನು ಅವರಿಗೆ ಸರಿಯಾದ ಸಮಯದಲ್ಲಿ ಪ್ರತಿಕ್ರಿಯಿಸುತ್ತೇನೆ' ಎಂದಿದ್ದಾರೆ. ನಾನು ಯಾವುದೇ ತಪ್ಪು ಮಾಡಿಲ್ಲ. ಪಕ್ಷದ ಕೆಲಸ ಮಾತ್ರ ಮಾಡಿದ್ದೇನೆ, ಅದಕ್ಕಾಗಿ ನಾನು ಸಾಕಷ್ಟು ತೊಂದರೆಗಳನ್ನು ಅನುಭವಿಸಿದ್ದೇನೆ. ನನ್ನ ಜೊತೆ ದೇವರು ಇದ್ದಾನೆ ಮತ್ತು ರಾಜ್ಯದ ಜನ ಸಹ ಇದ್ದಾರೆ. ಕಷ್ಟಕಾಲದಲ್ಲಿ ನನ್ನ ಜೊತೆ ನಿಂತ ಪ್ರತಿಯೊಬ್ಬರಿಗೂ ಧನ್ಯವಾದಗಳು ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರ ಡಿಕೆ ಶಿವಕುಮಾರ್ ಅವರ ವಿರುದ್ಧ ತನಿಖೆ ನಡೆಸಲು ಸಿಬಿಐಗೆ ಅನುಮತಿ ನೀಡಿತ್ತು. ನಂತರ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಯಿತು ಮತ್ತು ಅಕ್ರಮ ಆಸ್ತಿಗಳ ಆರೋಪದ ಮೇಲೆ ತನಿಖೆಯನ್ನು ಕೈಗೊಳ್ಳಲಾಯಿತು.

ಆದರೆ ಕಳೆದ ನವೆಂಬರ್ 23 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಪ್ರಸ್ತುತ ಕಾಂಗ್ರೆಸ್ ಸರ್ಕಾರ ಡಿಕೆ ಶಿವಕುಮಾರ್ ವಿರುದ್ಧದ ಡಿಎ ಪ್ರಕರಣವನ್ನು ಸಿಬಿಐ ತನಿಖೆ ನಡೆಸಲು ನೀಡಿದ್ದ ಅನುಮತಿಯನ್ನು ಹಿಂಪಡೆದಿದೆ.

ವರದಿ ಪರಿಪೂರ್ಣ, ಪಾರದರ್ಶಕ

ವರದಿ ಮಾಡಿದ್ದರು, ಜಾತಿ ತಾರತಮ್ಯ ಮಾಡಿದ್ದಾರೆ ಎಂಬ ಆರೋಪ ಸತ್ಯಕ್ಕೆ ದೂರ. ಇದೊಂದು ಕಪೋಲಕಲ್ಪಿತ ಆರೋಪ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಾತಿ ಗಣತಿ ವರದಿ ಸಿದ್ಧಗೊಂಡು, ಮುದ್ರಣ ಕಾರ್ಯ ಪೂರ್ಣಗೊಳ್ಳುವ ವೇಳೆಗೆ ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾಗಿತ್ತು. ಆ ನಂತರ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ವರದಿ ಸ್ವೀಕರಿಸುವುದಕ್ಕೆ ಅಂದು ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದೇವು. ಆದರೆ, ಅವರು ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಬಳಿಕ ಇಲಾಖೆಗೆ ಪತ್ರ ಬರೆದು, ಆ ಮೂಲಕ ಸರ್ಕಾರದ ಮುಖ್ಯಕಾರ್ಯದರ್ಶಿಯ ಗಮನಕ್ಕೆ ತರಲಾಯಿತು. ಆಗಲೂ ಮುಖ್ಯಮಂತ್ರಿಗಳು ಸರಿಯಾಗಿ ಸ್ಪಂದಿಸದ ಕಾರಣ ವರದಿಯ ಮುದ್ರಿತ ಪ್ರತಿಯನ್ನು ಇಲಾಖೆ ಕಚೇರಿಯ ಕೊಠಡಿಯಲ್ಲಿನ ಲಾಕರ್‌ನಲ್ಲಿಟ್ಟು ಸೀಲ್ ಮಾಡಲಾಯಿತು. ಬಳಿಕ ಆ ಕೊಠಡಿಗೂ ಬೀಗ ಹಾಕಿ ಸೀಲ್ ಹಾಕಿ ಏನೇನು ಇಡಲಾಗಿದೆ ಎಂದು ಪಟ್ಟಿ ಮಾಡಿ ಮುಖ್ಯ ಕಾರ್ಯದರ್ಶಿಗಳಿಗೆ ನೀಡಿ ಬಂದಿದ್ದೇವೆ ಎಂದು ತಿಳಿಸಿದರು.

ಗಣತಿ ವರದಿಯಲ್ಲಿ ಎರಡು ಭಾಗವಿದೆ. ದತ್ತಾಂಶಗಳ ಭಾಗಕ್ಕೆ ಅಧ್ಯಕ್ಷರು, ಸದಸ್ಯರು, ಸದಸ್ಯ ಕಾರ್ಯದರ್ಶಿಗಳ ಸಹಿ ಹಾಕಲಾಗಿದೆ. ವರದಿಯ ಭಾಗಕ್ಕೆ ಅಧ್ಯಕ್ಷರು, ಸದಸ್ಯರು ಸಹಿ ಹಾಕಲಾಗಿದ್ದು, ಸದಸ್ಯ ಕಾರ್ಯದರ್ಶಿಯ ಸಹಿ ಇರುವುದಿಲ್ಲ. ಆದರೆ, ವರದಿಯ ಸಭೆಗಳ ನಡಾವಳಿಗೆ ಸದಸ್ಯ ಕಾರ್ಯದರ್ಶಿ ಸಹಿ ಹಾಕಲಾಗಿದ್ದು, ವರದಿ ಸ್ವೀಕಾರಕ್ಕೆ ಯಾವುದೇ ಸಮಸ್ಯೆ ಇರಲಿಲ್ಲ. ಆದರೂ ಏಕೆ ವಿಳಂಬವಾಯಿತು ಎಂಬುದು ನಿಗೂಢವಾಗಿದೆ. ಬಳಿಕ ಬಂದ ಆಯೋಗ ವರದಿಯಲ್ಲಿ ಮುದ್ರಿತ ಪ್ರತಿಯಿದೆ. ಹಸ್ತಪ್ರತಿ ಕಾಣೆಯಾಗಿದೆ ಎಂದಿರುವುದು ಗೊಂದಲಕಾರಿಯಾಗಿದೆ. ಹೊಸ ಆಯೋಗ ಯಾರ ಅನುಮತಿ ಪಡೆದು ವರದಿ ಪರಿಶೀಲನೆಗೆ ತೆರಳಿತು ಎಂಬ ಮಾಹಿತಿ ಇಲ್ಲ. ವರದಿ ದತ್ತಾಂಶ ಹಾಗೂ ಮಾಹಿತಿಗಳು ಸರ್ಕಾರದಲ್ಲಿ ಸುರಕ್ಷಿತವಾಗಿರುತ್ತವೆ. ಅದನ್ನು ಯಾರೂ ನಾಶ ಮಾಡಲು ಸಾಧ್ಯವಿಲ್ಲ. ತಿರುಚಲು ಸಾಧ್ಯವಿಲ್ಲ ಎಂದರು. ಸಂವಾದದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ರಾಘವೇಂದ್ರ ಉಪಸ್ಥಿತರಿದ್ದರು.

ಚೀನಾದಲ್ಲಿ ನ್ಯುಮೋನಿಯಾ: ಆರೋಗ್ಯ ಇಲಾಖೆಯಿಂದ ಮಾರ್ಗಸೂಚಿ ಪ್ರಕಟ



ಬೆಂಗಳೂರು: ಚೀನಾದ ಉತ್ತರ ಭಾಗದ ಮಕ್ಕಳಲ್ಲಿ ಕಾಣಿಸಿಕೊಂಡ ನ್ಯುಮೋನಿಯಾ ಪ್ರಕರಣಗಳು ರಾಜ್ಯದಲ್ಲಿ ಪಸರಿಸದಂತೆ ತಡೆಯಲು ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮಗಳ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಆರೋಗ್ಯ ಸಿಬ್ಬಂದಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಸೋಮವಾರ ನಡೆದ ಇಲಾಖೆಯ ರಾಜ್ಯ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯ ಆಧರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ.ರಂದೀಪ್ ಮಂಗಳವಾರ ಸುತ್ತೋಲೆ ಹೊರಡಿಸಿದ್ದಾರೆ.

ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ನ್ಯುಮೋನಿಯಾ ಚಿಕಿತ್ಸೆಗೆ ಅಗತ್ಯವಿರುವ ಒಸೆಲ್ಟಾಮಿವಿರ್ ಮಾತ್ರೆಗಳು ಹಾಗೂ ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ ಅಗತ್ಯವಿರುವಷ್ಟು ಪಿಪಿಇ ಕಿಟ್‌ಗಳನ್ನು ದಾಸ್ತಾನು ಮಾಡಿಕೊಳ್ಳುವಂತೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆಗಳುಳ್ಳ (ಸಾರಿ) ಪ್ರಕರಣಗಳನ್ನು ಆರೋಗ್ಯ ಇಲಾಖೆಯ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಯಾವುದೇ ಪ್ರದೇಶಗಳಲ್ಲಿ ಈ ಪ್ರಕರಣಗಳ ಸಂಖ್ಯೆ ಅನಿಯಮಿತ ಪ್ರಮಾಣದಲ್ಲಿ ಹೆಚ್ಚಳವಾದರೆ ವಿಶೇಷ ನಿಗಾ ಇರಿಸಬೇಕು. ಇಂತಹ ಪ್ರಕರಣಗಳ ಪರೀಕ್ಷಾ ವರದಿಗಳ ಕುರಿತು ಆರೋಗ್ಯ ಇಲಾಖೆಯ ಪೋರ್ಟಲ್‌ನಲ್ಲಿ ಮಾಹಿತಿ ದಾಖಲಿಸಬೇಕು ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಕೋವಿಡ್ ನಿಯಂತ್ರಣಕ್ಕೆ ಈ ಹಿಂದೆ ಹೊರಡಿಸಿದ್ದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೋವಿಡ್ ಚಿಕಿತ್ಸೆಗೆ ನಿಗದಿಪಡಿಸಿದ್ದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಸನ್ನದ್ಧತೆ ಕುರಿತು ಪರಿಶೀಲನೆ ನಡೆಸಬೇಕು. ಹಾಸಿಗೆಗಳ ಲಭ್ಯತೆ, ವೈದ್ಯರು, ಅರೆವೈದ್ಯಕೀಯ ಮತ್ತು ಇತರ ಸಿಬ್ಬಂದಿಯ ಲಭ್ಯತೆ, ಪಿಪಿಇ ಕಿಟ್, ಆಮ್ಲಜನಕ, ಔಷಧಿಗಳ ದಾಸ್ತಾನಿನ ಕುರಿತು ಖಚಿತಪಡಿಸಿಕೊಳ್ಳಬೇಕು. ನ್ಯುಮೋನಿಯಾ ಸೋಂಕಿನಿಂದ ಉದ್ಭವಿಸಬಹುದಾದ ಪರಿಸ್ಥಿತಿ ಎದುರಿಸಲು ಆಸ್ಪತ್ರೆಗಳನ್ನು ಸಜ್ಜುಗೊಳಿಸಬೇಕು ಎಂದು ಆಯುಕ್ತರು ಸೂಚಿಸಿದ್ದಾರೆ.

ಸಮುದಾಯ ಹಂತದಲ್ಲಿ ತೀವ್ರ ನಿಗಾ ಇರಿಸಬೇಕು. ಒಂದೇ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ನ್ಯುಮೋನಿಯಾ ಪ್ರಕರಣಗಳು ಪತ್ತೆಯಾದಲ್ಲಿ (ಕ್ಲಸ್ಟರ್) ಆ ಬಗ್ಗೆ ವಿಶೇಷ ನಿಗಾ ಇರಿಸಬೇಕು. ಕೋವಿಡ್ ಸೋಂಕು ದೃಢಪಡದೇ ತೀವ್ರ ಉಸಿರಾಟದಿಂದ ಸಾವು ಸಂಭವಿಸಿದ ಪ್ರಕರಣಗಳಲ್ಲಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸಬೇಕು. ಎಲ್ಲಾ ವೈರಾಣು ಸಂಶೋಧನಾ ಕೇಂದ್ರಗಳು ಮತ್ತು ಪ್ರಯೋಗಾಲಯಗಳನ್ನೂ ಸನ್ನದ್ಧ ಸ್ಥಿತಿಯಲ್ಲಿಡಬೇಕು ಎಂದು ಸೂಚಿಸಲಾಗಿದೆ.

ಜನರು ವಹಿಸಬೇಕಾದ ಎಚ್ಚರಿಕೆ

■ ಕೆಮ್ಮುವಾಗ ಮತ್ತು ಶೀನುವಾಗ ಕರವಸ್ತ್ರದಿಂದ ಬಾಯಿ, ಮೂಗು ಮುಚ್ಚಿಕೊಳ್ಳುವುದು ■ ಆಗಾಗ ಸೋಪಿನಿಂದ ಕೈ ತೊಳೆದುಕೊಳ್ಳುವುದು ■ ಶೀತ ಮತ್ತು ಜ್ವರ 5ರಿಂದ 7 ದಿನಗಳು ಇರಲಿವೆ ■ ಎಳೆ ಮಕ್ಕಳು, ವೃದ್ಧರು, ಗರ್ಭಿಣಿಯರು, ಗಂಭೀರ ಸ್ವರೂಪದ ಅನಾರೋಗ್ಯ ಸಮಸ್ಯೆ ಇರುವವರು ಎಚ್ಚರಿಕೆಯಿಂದ ಇರುವುದು ■ ಶೀತ ಜ್ವರ ಬಾಧೆ(ಐಎಲ್ಐ, ಸಾರಿ ಲಕ್ಷಣ) ಇದ್ದರೆ ಹತ್ತಿರ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿಕೊಳ್ಳುವುದು

ಹೆಣ್ಣು ಭ್ರೂಣ ಹತ್ಯೆ ಅಮಾನವೀಯ; ಇದರಲ್ಲಿ ಆಡಳಿತ ವೈಫಲ್ಯವೂ ಇದೆ

ಮೈಸೂರಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ



ಮೈಸೂರು,ನ.29(ಆರ್‌ಕೆ)–ರಾಜ್ಯದಲ್ಲಿ ಭ್ರೂಣ ಹತ್ಯೆ ಪ್ರಕರಣ ಬೆಳಕಿಗೆ ಬಂದಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ, ಅತ್ಯಂತ ಅಮಾನವೀಯ ಕೃತ್ಯವಾಗಿದ್ದು, ಅದರಲ್ಲಿ ನಮ್ಮ ಆಡಳಿತ ವ್ಯವಸ್ಥೆಯ ವೈಫಲ್ಯವೂ ಎದ್ದು ಕಾಣುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ನಾನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಅವರು, ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದರು. ರಾಜಾರೋಷವಾಗಿ ಹೆಣ್ಣು ಭ್ರೂಣ ಹತ್ಯೆಗಳು ನಡೆಯುತ್ತಿದ್ದು, ಅದರ ಜಾಲವೇ ಸಕ್ರಿಯವಾಗಿದೆ ಎಂದರೆ, ನಮ್ಮ ಆಡಳಿತ ಹೇಗಿದೆ ಎಂಬುದು ತಿಳಿಯುತ್ತದೆ ಎಂದರು.

ಮುಂದೆ ಇಂತಹ ಹೇಯ ಕೃತ್ಯಗಳಾಗದಂತೆ ಕ್ರಮ ವಹಿಸಬೇಕು, ನಾನು ಪೋಷಕರಿಗೂ ಮನವಿ ಮಾಡುತ್ತೇನೆ. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ತಂದೆ–ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. 21ನೇ ಶತಮಾನದಲ್ಲೂ ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರ ದುರದೃಷ್ಟಕರ. ಭ್ರೂಣ ಹತ್ಯೆ ಕಾನೂನು ಬಾಹಿರ, ಪಾಪದ ಕೃತ್ಯ ಎಂದ ಅವರು, ಈ ಪ್ರಕರಣದಲ್ಲಿ ಭಾಗಿಯಾಗಿರುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದರು. ಇತ್ತೀಚೆಗೆ ರಾಜ್ಯದಲ್ಲಿ ಮಕ್ಕಳ ಕಳ್ಳತನ ಪ್ರಕರಣಗಳು ಹೆಚ್ಚುತ್ತಿದ್ದು, ಬೆಂಗಳೂರಲ್ಲಿ ಈಗಾಗಲೇ ಬೆಳಕಿಗೆ ಬಂದಿವೆ. ಇದಕ್ಕೆ ಸರ್ಕಾರವೂ ಜವಾಬ್ದಾರಿ ಹೊರಬೇಕಿದೆ ಈ ಬಗ್ಗೆ ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಕಮಿಷನ್ ಆರೋಪ: ಕಾಂಗ್ರೆಸ್ ಸರ್ಕಾರದ ವಿರುದ್ಧ ಗುತ್ತಿಗೆದಾರರು ಮಾಡಿರುವ ಕಮಿಷನ್ ಆರೋಪದಲ್ಲಿ ಅಸತ್ಯವಿಲ್ಲ. ಮೈಸೂರು ದಸರಾ ಮಹೋತ್ಸವದ 20 ಕೋಟಿ ರೂ. ಅನುದಾನದ ಕಾಮಗಾರಿಯಲ್ಲಿ 20 ಪರ್ಸೆಂಟ್ ಕಮಿಷನ್ ಕೇಳಲಾಗಿದ್ದು, ಕೊಡದ ಕಾರಣಕ್ಕೆ ಬೆಂಗಳೂರು ಮೂಲದವರಿಗೆ ವಿದ್ಯುತ್ ಗುತ್ತಿಗೆ ನೀಡಲಾಗಿದೆ ಎಂದು ವಿದ್ಯುತ್ ಗುತ್ತಿಗೆದಾರರು ನನಗೆ ಮನವಿ ನೀಡಿದ್ದಾರೆ ಎಂದು ಕುಮಾರಸ್ವಾಮಿ ತಿಳಿಸಿದರು.

ಆರೋಪ ಸಾಬೀತು ಮಾಡುವಂತೆ ಸಿಎಂ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕಮಿಷನ್ ವ್ಯವಹಾರಕ್ಕೆ ಸಾಕ್ಷಿ ಕೊಡಲು ಆಗುತ್ತಾ? ಈ ಹಿಂದೆ ಬಿಜೆಪಿ ವಿರುದ್ಧ ಮಾಡಿದ್ದ 40 ಪರ್ಸೆಂಟ್ ಕಮಿಷನ್ ಆರೋಪಕ್ಕೆ ಕಾಂಗ್ರೆಸ್ಸಿಗರು ಯಾವ ಸಾಕ್ಷಿ ನೀಡಿದ್ದರು? ಸುಮ್ಮನೆ ಆರೋಪ ಮಾಡುತ್ತಾ ಬಂದಿದ್ದರು ಎಂದರು.

ಡಿಕೆಶಿ ವಿರುದ್ಧದ ಸಿಬಿಐ ತನಿಖೆ ವಾಪಸ್ ಪಡೆದಿರುವುದು ಸಂವಿಧಾನ ಬಾಹಿರ ಕ್ರಮ

ಮೈಸೂರು,ನ.29(ಆರ್‌ಕೆ)–ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಯನ್ನು ಹಿಂಪಡೆದಿರುವುದು ಸಂವಿಧಾನಬಾಹಿರ ಕ್ರಮ ಎಂದು ಸರ್ಕಾರದ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಈ ಹಿಂದಿನ ಸರ್ಕಾರ ಡಿ.ಕೆ.ಶಿವಕುಮಾರ್ ಅಕ್ರಮ ಆಸ್ತಿ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿದ್ದನ್ನು ಈ ಸರ್ಕಾರ ಹಿಂಪಡೆದಿರುವ ಕ್ರಮವನ್ನು ಶಾಸಕ ಯತ್ನಾಳ್ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದು ಸಮಂಜಸವಾಗಿದೆ ಎಂದರು. ಯತ್ನಾಳ್ ಒಬ್ಬ ಜವಾಬ್ದಾರಿಯುತ ಶಾಸಕ. ಸರ್ಕಾರ ದಾರಿ ತಪ್ಪಿ ತೆಗೆದುಕೊಂಡ ನಿರ್ಧಾರವನ್ನು ಪ್ರಶ್ನಿಸಿದ್ದಾರೆ. ಕಾನೂನು ಬಾಹಿರ ಚಟುವಟಿಕೆಯಿಂದ ರಕ್ಷಣೆ ಪಡೆಯುವುದರಲ್ಲಿ ಡಿಕೆಶಿ ಎಕ್ಸ್‌ಪರ್ಟ್ ಇದ್ದಾರೆ. ಅವರಿಗೆ ಸಂವಿಧಾನದ ಬಗ್ಗೆ ಗೌರವವಿದ್ದರೆ ಈ ತೀರ್ಮಾನ ಮಾಡುತ್ತಿರಲಿಲ್ಲ ಎಂದು ಅವರು ತಿಳಿಸಿದರು.

ದೇಶದ ತನಿಖಾ ಸಂಸ್ಥೆಗಳನ್ನು ದಾರಿ ತಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಸಹ ದಾರಿ ತಪ್ಪಿದೆ. ಕಾನೂನು ತಜ್ಞರ ಅಭಿಪ್ರಾಯ ಸಹ ಅದೇ ಆಗಿದೆ. ಅವರ ನಡವಳಿಕೆಯಲ್ಲಿ ಪರಿಶುದ್ಧತೆ, ಪ್ರಾಮಾಣಿಕತೆ ಇದ್ದಿದ್ದರೆ ತನಿಖೆಗೆ ಒಪ್ಪಿಸಬೇಕಿತ್ತು. ಈ ಕುರಿತಂತೆ ನಾವು ಬೆಳಗಾವಿ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ ಎಂದರು. ಸಿಎಂ ಸಿದ್ದರಾಮಯ್ಯ ಅವರ ವಿರುದ್ಧವೂ ವಾಗ್ದಾಳಿ ನಡೆಸಿದ ಅವರು, ಒಬ್ಬ ವಕೀಲರಾಗಿ, ಕಾನೂನನ್ನು ತಿಳಿದವರಾಗಿ ಈ ತೀರ್ಮಾನ ತೆಗೆದುಕೊಂಡಿರುವುದು ಅವರ ನಿಲುವು ಬಟಾಬಯಲಾಗಿದೆ. ಕಾನೂನು ಬಾಹಿರ ಚಟುವಟಿಕೆಗಳಿಗೆ ರಕ್ಷಣೆ ನೀಡಲು ಈ ತೀರ್ಮಾನ ಮಾಡಿದ್ದಾರೆ. ತಪ್ಪು ಮಾಡಿದವರನ್ನು ರಕ್ಷಿಸಿಕೊಳ್ಳುವುದನ್ನು ಸಿದ್ದರಾಮಯ್ಯ ಕರಗತ ಮಾಡಿಕೊಂಡಿದ್ದಾರೆ ಎಂದರು.

ಡಿ.2, ಉದ್ಯೋಗ ಮೇಳ

ಮೈಸೂರು,ನ.29–ನಗರದ ಎನ್.ಆರ್. ಮೊಹಲ್ಲಾದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಚೇರಿಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಆವರಣದಲ್ಲಿ, ಡಿ.2 ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಐಟಿಐ (ಫಿಟ್ಟರ್) ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮಾತ್ರ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಈ ಉದ್ಯೋಗ ಮೇಳದಲ್ಲಿ ಕಲರ್‌ಟೋನ್ ಪ್ಲಾಟ್ ನಂ.140–ಎ, ಕೆಐಡಿಬಿ ಬದನಗುಪ್ಪೆ, ಚಾಮರಾಜನಗರ ಇವರಿಂದ ಐಟಿಐ (ಫಿಟ್ಟರ್)ನಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಖಾಯಂ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದು, ವಯೋಮಿತಿ 18 ರಿಂದ 27 ವರ್ಷಗಳು ಹಾಗೂ ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ನೇಮಕಾತಿ ಹೊಂದುವ ಅಭ್ಯರ್ಥಿಗಳಿಗೆ ಉಚಿತ ಊಟ, ವಸತಿ, ಪ್ರಯಾಣ ಭತ್ಯೆ ಹಾಗೂ 13000ರಿಂದ 16000 ರೂ.ಗಳ ವೇತನ ನೀಡಲಾಗುವುದು. ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕರು ಅಥವಾ ದೂರವಾಣಿ ಸಂಖ್ಯೆ: 0821–2489972 ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

35 ಡಿವೈಎಸ್ಪಿಗಳಿಗೆ ಬಡ್ತಿ

ಮೈಸೂರು,ನ.29–ರಾಜ್ಯ ಸರ್ಕಾರ 35 ಡಿವೈಎಸ್ಪಿಗಳಿಗೆ ಸಿವಿಲ್ ಎಸ್ಪಿಗಳಾಗಿ (ನಾನ್ ಐಪಿಎಸ್) ಬಡ್ತಿ ನೀಡಿ ಸ್ಥಳ ನಿಯೋಜನೆ ಮಾಡಿದೆ.



ಮೈಸೂರಿನ ಕೃಷ್ಣರಾಜ ಉಪವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ ಅವರಿಗೆ ಬಡ್ತಿ ನೀಡಿ ಮಂಡ್ಯ ಜಿಲ್ಲೆಯ ಹೆಚ್ಚುವರಿ ಎಸ್ಪಿ–2 ಆಗಿ ಸ್ಥಳ ನಿಯೋಜನೆ ಮಾಡಲಾಗಿದೆ. ಮಡಿಕೇರಿ ಉಪವಿಭಾಗದ ಡಿವೈಎಸ್ಪಿ ಎಂ.ಜಗದೀಶ್ ಅವರನ್ನು ಉತ್ತರ ಕನ್ನಡ ಜಿಲ್ಲೆಯ ಹೆಚ್ಚುವರಿ ಎಸ್ಪಿ–2 ಆಗಿ, ಬೆಂಗಳೂರಿನ ವೈಟ್‌ಫೀಲ್ಡ್ ಉಪವಿಭಾಗದ ಎಸಿಪಿ ಮಹಮದ್ ಬಾಬು ಅವರನ್ನು ಮೈಸೂರು ಜಿಲ್ಲೆ ಹೆಚ್ಚುವರಿ ಎಸ್ಪಿ–2 ಆಗಿ ನಿಯೋಜನೆ ಮಾಡಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ನ.29–ಮೈಸೂರು ಜಿಲ್ಲಾ ಉಪ್ಪಾರ ನೌಕರರ ಮತ್ತು ವೃತ್ತಿಪರರ ಸಂಘವು 2023ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮತ್ತು ಸಿಬಿಎಸ್‌ಇ, ಐಸಿಎಸ್‌ಇಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಡಿ.5 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 9980906469 ಸಂಪರ್ಕಿಸಬಹುದು.

ಮೈಸೂರು ವಕೀಲರ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಣೆ
ಸುಸಂಸ್ಕೃತ, ಸದೃಢ ಕನ್ನಡ ಭಾಷೆ ಉಳಿಸಿ–ಬೆಳೆಸಲು ನಾವು ಕಾರ್ಯಪ್ರವೃತ್ತರಾಗಬೇಕು
ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ಸಲಹೆ



ಮೈಸೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ 68ನೇ ಕನ್ನಡ ರಾಜ್ಯೋತ್ಸವವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ಉದ್ಘಾಟಿಸಿದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಸಂಘದ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ನ.29(ಪಿಎಂ)–ನಮ್ಮ ವಯೋಮಾನದ ಬಹುತೇಕರು ಕನ್ನಡ ಮಾಧ್ಯಮದಲ್ಲಿ ಶಾಲಾ ವಿದ್ಯಾಭ್ಯಾಸ ಮಾಡಿದ್ದು, ಇದರಿಂದ ನಮಗೆ ಕನ್ನಡ ಭಾಷೆ ಮೂಲಕ ಜೀವನ ಮೌಲ್ಯ ಕಲಿಯಲು ಸಾಧ್ಯವಾಗಿದೆ. ಇಂತಹ ಸುಸಂಸ್ಕೃತ ಮತ್ತು ಸದೃಢವಾದ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಕನ್ನಡಿಗರು ಕಾರ್ಯಪ್ರವೃತ್ತರಾಗಬೇಕು ಎಂದು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್ ಹೇಳಿದರು.

ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 68ನೇ ಕನ್ನಡ ರಾಜ್ಯೋತ್ಸವವನ್ನು ದೀಪ ಬೆಳಗಿಸಿ, ಕನ್ನಡಾಂಬೆ ಫೋಟೋಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನಮ್ಮ ಮನೆ–ಮನಗಳಲ್ಲಿ ಕನ್ನಡಕ್ಕೆ ಮಹತ್ವ ನೀಡಬೇಕು. ಇಲ್ಲಿರುವ ನಮ್ಮ ವಯೋಮಾನದವರು ತಮ್ಮ ಬಾಲ್ಯ ನೆನಪು ಮಾಡಿಕೊಂಡರೆ ಅರ್ಧಕ್ಕಿಂತಲೂ ಹೆಚ್ಚಿನವರು ಕನ್ನಡ ಮಾಧ್ಯಮದಲ್ಲಿ ಶಾಲಾ ವಿದ್ಯಾಭ್ಯಾಸ ಮಾಡಿದ್ದಾರೆ. 'ಬಾರೋ ಬಾರೋ ಮಳೆರಾಯ' ಎಂಬಂತಹ ಕನ್ನಡ ಪದ್ಯಗಳ ಕಲಿಕೆಯ ಜೊತೆಗೆ ಜೀವನ ಮೌಲ್ಯಗಳನ್ನು ಕಲಿಯಲು ನಮಗೆ ಸಾಧ್ಯವಾಯಿತು. ಆದರೆ ಆಂಗ್ಲ ಭಾಷೆಯ 'ರೈನ್ ರೈನ್ ಗೋ ಅವೇ' ಎನ್ನುವಂತಹ ಪದ್ಯಗಳು ನಮ್ಮ ಮಕ್ಕಳಲ್ಲಿ ಸ್ವಾರ್ಥ ಬಿತ್ತುತ್ತಿವೆಯೇ ಹೊರತು ಉದಾರ ಮನೋಭಾವ ಬೆಳೆಸುವುದಿಲ್ಲ ಎಂದು ವಿಷಾದಿಸಿದರು.

> “ಮಾತೃ ಭಾಷೆ ಕನ್ನಡವಾದರೂ ಇಂಗ್ಲಿಷ್‌ನಲ್ಲಿ ನಮ್ಮ ಮಕ್ಕಳು ಮಾತನಾಡುವುದೇ ನಮಗೆ ಖುಷಿಯಾಗುವ ಸನ್ನಿವೇಶದಲ್ಲಿದ್ದೇವೆ. ವೃತ್ತಿಯಲ್ಲಿ ಮುಂದುವರೆಯಲು, ಹೆಚ್ಚಿನ ಪರಿಣತಿ ಪಡೆಯಲು ನ್ಯಾಯವಾದಿಗಳಿಗೆ ಇಂಗ್ಲಿಷ್ ಅಗತ್ಯವೇ. ಆದರೆ ಅದಕ್ಕಾಗಿ ಕನ್ನಡ ಕಡೆಗಣಿಸಬಾರದು. ಸ್ಥಳೀಯ ಭಾಷೆಗಳಿಗೆ ಮಹತ್ವ ಕೊಡುವ ನಿಟ್ಟಿನಲ್ಲಿ ಸಾಕಷ್ಟು ಬೆಳವಣಿಗೆಗಳು ಆಗುತ್ತಿರುವುದು ಸಂತಸದ ವಿಚಾರ. ಸುಪ್ರೀಂಕೋರ್ಟ್, ಹೈಕೋರ್ಟ್ ತೀರ್ಪುಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರ ಮಾಡುವ ಕೆಲಸವೂ ಪ್ರಗತಿಯಲ್ಲಿದೆ.
> –ಪ್ರಭಾವತಿ ಎಂ.ಹಿರೇಮಠ್

ಕನ್ನಡ ಸಮೃದ್ಧ ಭಾಷೆ. ಆದರೆ ಕನ್ನಡ ಶಬ್ದಗಳನ್ನು ಬಳಸುವುದನ್ನು ಬಿಡುತ್ತಿರುವ ಪರಿಣಾಮ ಕನ್ನಡದೊಳಗೆ ಆಂಗ್ಲದ ಅನೇಕ ಪದಗಳು ಬೆರತು ಹೋಗುತ್ತಿದೆ. ಬೀದರ್–ಗುಲ್ಬರ್ಗ ಭಾಗದಲ್ಲಿ ಉರ್ದು ಮತ್ತು ಹಿಂದಿ ಶಬ್ದಗಳು ಕನ್ನಡೀಕರಣಗೊಳ್ಳುತ್ತಿವೆ. ಅಂತೆಯೇ ಮಹಾರಾಷ್ಟ್ರಕ್ಕೆ ಹೊಂದುಕೊಂಡಿರುವ ಕನ್ನಡ ಪ್ರದೇಶಗಳಲ್ಲಿ ಮರಾಠಿ ಶಬ್ದಗಳು ಬಳಸುವುದು ರೂಢಿಯಾಗಿದೆ. ಆ ಮೂಲಕ ಅವು ಕನ್ನಡದ ಶಬ್ದಗಳೇ ಆಗಿ ಹೋಗಿವೆ. ಆದರೆ ಅನಿವಾರ್ಯ ಸಂದರ್ಭ ಹೊರತಾಗಿ ಕನ್ನಡದ ಶಬ್ದಗಳನ್ನೇ ಬಳಸಿ ಉಳಿಸಿಕೊಳ್ಳುವುದಕ್ಕೆ ನಾವು ಮೊದಲ ಆದ್ಯತೆ ನೀಡಬೇಕು ಎಂದರು.

ಮುಖ್ಯ ಭಾಷಣಕಾರ, ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಮಾತನಾಡಿ, ಕನ್ನಡ ನೆಲದಲ್ಲಿ ನಾವು ಹುಟ್ಟಿದ್ದೇವೆ. ಈ ನೆಲದ ಫಲ ಉಂಡು ನಾವು ಬದುಕಿದ್ದೇವೆ. ಈ ನೆಲದ ಜಲ ಕುಡಿದು ನಾವು ಜೀವಿಸಿದ್ದೇವೆ. ಜಲವೇ ಸಕಲ ಜೀವ ಸಂಕುಲಗಳ ತಾಯಿ ಎಂಬ ನುಡಿ ಬಂದಿದ್ದೇ ಕನ್ನಡಿಗರಿಂದ ಎಂಬುದು ಹೆಮ್ಮೆಯ ವಿಚಾರ. ಕನ್ನಡದ ಗಾಳಿಯನ್ನು ನಮ್ಮ ಎದೆಯೊಳಗೆ ತುಂಬಿಕೊಂಡಿದ್ದೇವೆ. ನಮ್ಮ ಬದುಕಿಗೆ ಮೆರುಗು ನೀಡುವ ಕನ್ನಡದ ಸಂಸ್ಕೃತಿ–ಪರಂಪರೆಯನ್ನು ಕಟ್ಟಿಕೊಂಡಿದ್ದೇವೆ. ಈ ಎಲ್ಲವೂ ಜೀವದಾಯಕ ಮತ್ತು ಪ್ರಾಣ ಪೋಷಕ ಎಂದು ನಾವು ಪರಿಭಾವಿಸಬೇಕಿದ್ದು, ಅದೇ ಕನ್ನಡದ ಸಂಸ್ಕೃತಿ ಎಂದರು.

ಇದೇ ವೇಳೆ 20ಕ್ಕೂ ಹೆಚ್ಚು ಸಂಘದ ಹಿರಿಯ ವಕೀಲರನ್ನು ಸನ್ಮಾನಿಸಲಾಯಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಂಘದ ಅಧ್ಯಕ್ಷ ಎಂ.ಮಹಾದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಸದಸ್ಯ ಬಿ.ಆರ್. ಚಂದ್ರಮೌಳಿ, ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಮತ್ತಿತರರು ಹಾಜರಿದ್ದರು.

ಮೇಟಗಳ್ಳಿ ಸರ್ಕಾರಿ ಶಾಲೆಯಲ್ಲಿ ಇಂಗ್ಲೀಷ್ ಫೆಸ್ಟ್ ಕಾರ್ಯಕ್ರಮ



ಮೈಸೂರು, ನ.29(ಎಂಕೆ)– ಮೈಸೂರಿನ ಮೇಟಗಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಗ್ರಾಸ್ ರೂಟ್ಸ್ ರಿಸರ್ಚ್ ಅಂಡ್ ಅಡ್ವೋಕೆಸಿ ಮೂವ್‌ಮೆಂಟ್(ಗ್ರಾಮ್) ಹಾಗೂ ಆರಿಸ್ ಗ್ಲೋಬಲ್ ಸಹಕಾರದೊಂದಿಗೆ ಸುಗಮ್ಯ ಶಿಕ್ಷಾ ಕಾರ್ಯಕ್ರಮದ ಯೋಜನೆಯಡಿಯಲ್ಲಿ 'ಇಂಗ್ಲೀಷ್ ಫೆಸ್ಟ್' ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಗ್ರಾಮ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಬಸವರಾಜು ಆರ್ ಶ್ರೇಷ್ಠ ಮಾತನಾಡಿ, ಸರ್ಕಾರಿ ಶಾಲೆ ವಿದ್ಯಾರ್ಥಿಗಳಲ್ಲಿ ಇಂಗ್ಲೀಷ್ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಅವರ ಮುಂದಿನ ಜೀವನ ಮಟ್ಟ ಸುಧಾರಿಸುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ 'ಇಂಗ್ಲಿಷ್ ಫೆಸ್ಟ್'ನಂತಹ ಕಾರ್ಯಕ್ರಮಗಳು ಹೆಚ್ಚಿನ ಮಟ್ಟದಲ್ಲಿ ನಡೆಯಬೇಕು ಎಂದರು.

ಜೆಕೆ ಟೈರ್ ಇಂಡಸ್ಟ್ರೀಸ್‌ನ ಹಿರಿಯ ವ್ಯವಸ್ಥಾಪಕ ಆರ್.ಜಗದೀಶ್, ಹೆಚ್‌ಆರ್ ಐಆರ್. ರೇಡಿಕೋ ಮುಖ್ಯಸ್ಥ ಬಿ.ಎಂ. ಗೌತಮ್, ಆರಿಸ್ ಗ್ಲೋಬಲ್‌ನ ಪ್ರತಿನಿಧಿಗಳಾದ ನಕುಲ್, ಶಿಲ್ಪ ಮತ್ತು ಶಿಕ್ಷಣ ಸಂಯೋಜಕ ಕುಮಾರಸ್ವಾಮಿ, ಸುಗಮ್ಯ ಶಿಕ್ಷಾ ಕಾರ್ಯಕ್ರಮದ ಮುಖ್ಯಸ್ಥ ಜನಾರ್ಧನ್, ಶಾಲೆಯ ಶಿಕ್ಷಕರು, ಸಿಬ್ಬಂದಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ತೆಲಂಗಾಣದಲ್ಲಿ ಮತದಾನ

ಹೈದರಾಬಾದ್: ಗುರುವಾರ ನಡೆಯಲಿರುವ ವಿಧಾನಸಭೆ ಚುನಾವಣೆಗೆ ತೆಲಂಗಾಣ ಸಜ್ಜಾಗಿದೆ. ಆಡಳಿತಾರೂಢ ಬಿಆರ್‌ಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಕಣದಲ್ಲಿರುವ ಪ್ರಮುಖ ಪಕ್ಷಗಳು. ಹೈದರಾಬಾದ್‌ನ ಕೆಲವೆಡೆ ಎಐಎಂಐಎಂ ಕೂಡ ಸ್ಪರ್ಧಿಸಿದೆ.

ಒಟ್ಟು 119 ಸ್ಥಾನಗಳಿಗೆ ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದ್ದು 3.26 ಕೋಟಿ ಮತದಾರರು ಮತ ಹಾಕಲಿದ್ದಾರೆ. 35,655 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. 2.8 ಲಕ್ಷ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. 12,000 ಮತಗಟ್ಟೆಗಳು ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಿದ್ದು, ಬಿಗಿ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗಿದೆ. ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್, ಅವರ ಮಗ, ಸಚಿವ ಕೆ.ಟಿ.ರಾಮಾರಾವ್, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಎ.ರೇವಂತ್‌ರೆಡ್ಡಿ ಮತ್ತು ಬಿಜೆಪಿ ಸಂಸದರಾದ ಬಂಡಿ ಸಂಜಯ್ ಕುಮಾರ್ ಮತ್ತು ಡಿ.ಅರವಿಂದ್ ಸೇರಿದಂತೆ 2,290 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಮತ್ತೆ ಅಧಿಕಾರಕ್ಕೆ ಬರಲು ಬಿಆರ್‌ಎಸ್, ಕೆ. ಚಂದ್ರಶೇಖರರಾವ್ ಅವರು ಜಾರಿಗೊಳಿಸಿರುವ ಕಲ್ಯಾಣ ಕಾರ್ಯಕ್ರಮಗಳ ಮೇಲೆ ಅವಲಂಬಿತವಾಗಿದ್ದರೆ, ಕಾಂಗ್ರೆಸ್ ಆಡಳಿತ ವಿರೋಧಿ ಅಲೆ, ತನ್ನ 6 ಗ್ಯಾರಂಟಿಗಳು ಮತ್ತು ಸರ್ಕಾರದ ದಲಿತ ಬಂಧು ಯೋಜನೆಯಲ್ಲಿ ಫಲಾನುಭವಿಗಳಾದ ದಲಿತರನ್ನು ನೆಚ್ಚಿಕೊಂಡಿದೆ. ಬಿಜೆಪಿಯು ಅತಂತ್ರ ಫಲಿತಾಂಶದ ನಿರೀಕ್ಷೆಯಲ್ಲಿದ್ದು, ನಿರ್ಣಾಯಕ ಪಾತ್ರ ವಹಿಸುವ ವಿಶ್ವಾಸದಲ್ಲಿದೆ. ಡಿ.3ರಂದು ಮತ ಎಣಿಕೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಎಲ್ಲಾ ತಾಲೂಕುಗಳಲ್ಲೂ ಜನಸ್ಪಂದನ ಕಾರ್ಯಕ್ರಮ

ಜನರ ಮನೆ ಬಾಗಿಲಿಗೆ ಸರ್ಕಾರಿ ಆಡಳಿತ ಕೊಂಡೊಯ್ಯಲು ಕ್ರಮ : ಸಚಿವ ಮಹದೇವಪ್ಪ





ತಿ.ನರಸೀಪುರ, ನ.29– ಅಧಿವೇಶನದ ನಂತರ ಅಂದರೆ ಡಿ.15ರ ನಂತರ ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಜನಸ್ಪಂದನ ಕಾರ್ಯಕ್ರಮ ನಡೆಸುವ ಮೂಲಕ ಜನರ ಮನೆ ಬಾಗಿಲಿಗೆ ಸರ್ಕಾರದ ಆಡಳಿತವನ್ನು ಕೊಂಡೊಯ್ಯಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ಜಿಲ್ಲಾಡಳಿತದ ವತಿಯಿಂದ ಪಟ್ಟಣದ ವಿದ್ಯೋದಯ ಶಿಕ್ಷಣ ಸಂಸ್ಥೆ ಸಭಾಂಗದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಜನತಾದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಸ್ಯೆಗಳನ್ನು ಹೊತ್ತು ಬಂದಿದ್ದ ಜನರ ಕಷ್ಟ ಆಲಿಸಿ, ಅಹವಾಲುಗಳನ್ನು ಸ್ವೀಕರಿಸಿ ಕೂಡಲೇ ಜನರ ಸಮಸ್ಯೆ ಬಗೆಹರಿಸುವಂತೆ ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನತಾ ದರ್ಶನ ಹಿನ್ನೆಲೆ ತಾಲೂಕಿನಲ್ಲಿ ಹೋಬಳಿವಾರು ಅರ್ಜಿ ಕರೆದಿದ್ದು, ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ 167 ಅರ್ಜಿದಾರರ ಅಹವಾಲನ್ನು ಸ್ವೀಕರಿಸಿ, ಸಮಸ್ಯೆ ಆಲಿಸಿದರು. ಅದಲ್ಲದೆ, ಅರ್ಜಿ ಸಲ್ಲಿಸದೆ ಇದ್ದಂತಹ ಜನರನ್ನೂ ಕರೆದು ಅವರ ಕುಂದು ಕೊರತೆಗಳನ್ನು ವಿಚಾರಿಸಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಜಿಲ್ಲೆಗಳಲ್ಲಿ ಜನಸ್ಪಂದನ ಸಭೆ ನಡೆಸಬೇಕೆಂದು ಸೂಚನೆ ನೀಡಿದ್ದರು. ಅದರಂತೆ ಮೊದಲಿಗೆ ಮೈಸೂರಿನಲ್ಲಿ ನಡೆಸಿ ಸ್ವೀಕರಿಸಿದ್ದ ಅಹವಾಲುಗಳಲ್ಲಿ ಶೇ.98 ರಷ್ಟನ್ನು ಬಗೆಹರಿಸಲಾಗಿದೆ ಎಂದು ಹೇಳಿದರು.

ಮೊನ್ನೆ ನಮ್ಮ ಮುಖ್ಯಮಂತ್ರಿಗಳು ನಡೆಸಿದ ಜನಸ್ಪಂದನ ಕಾರ್ಯಕ್ರದಲ್ಲಿ ಮುಗ್ಧ ಜನರು ತಮ್ಮ ನೋವನ್ನು ತೋಡಿಕೊಂಡ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಅಧಿಕಾರಿ ವರ್ಗಕ್ಕೆ ಸ್ಪಷ್ಟ ಸೂಚನೆ ನೀಡಿದ್ದಾರೆ. ಇದರ ಅಂಗವಾಗಿ ತಿ.ನರಸೀಪುರದಲ್ಲಿ ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮ ನಡೆಸಿ ಜನರ ಕಷ್ಟವನ್ನು ಕೇಳಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜು ಎಂಬುವರು ಅಧಿಕಾರಿಗಳು ತಮ್ಮ ಕಚೇರಿಯಲ್ಲಿ ಸಾರ್ವಜನಿಕರಿಗೆ ದೊರಕುವುದಿಲ್ಲ. ಇದರಿಂದ ಜನರು ತಮ್ಮ ಸಮಸ್ಯೆ ಹೇಳಿಕೊಳ್ಳಲು ತೊಂದರೆ ಉಂಟಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಕೆಲವೊಮ್ಮೆ ಅಧಿಕಾರಿಗಳಿಗೆ ಸಭೆ ಸೇರಿದಂತೆ ಇನ್ನಿತರ ಕ್ಷೇತ್ರ ಭೇಟಿ ಇರುತ್ತದೆ. ಆದರೆ ಸುಳ್ಳು ಹೇಳಿ ಕಚೇರಿಗೆ ಹಾಜರಾಗದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಹೇಳಿದರು.

ಹಳೇ ಕೆಂಪಯ್ಯನಹುಂಡಿ ಗ್ರಾಮದ ರಾಚಯ್ಯ ಅವರು ಮನವಿ ಮಾಡಿ ಸಾಗುವಳಿ ಹಕ್ಕುಪತ್ರ ನೀಡುತ್ತಿಲ್ಲ. ಕಚೇರಿಗೆ ಅಲೆದಾಡಿ ಸಾಕಾಗಿದೆ. ದಯವಿಟ್ಟು ಸಾಗುವಳಿ ಚೀಟಿ ಕೊಡಿಸಬೇಕು ಎಂದು ಮನವಿ ಮಾಡಿದರು. ಈ ಸಂಬಂಧ ಜಿಲ್ಲಾಧಿಕಾರಿ ಮಾತನಾಡಿ, ನೀವು ಅರ್ಹರಿದ್ದರೆ ಖಂಡಿತ ಹಕ್ಕುಪತ್ರ ಕೊಡಲಾಗುವುದು. ಈ ಸಂಬಂಧ ಮತ್ತೊಮ್ಮೆ ಅರ್ಜಿ ಪರಿಶೀಲಿಸಲಾಗುವುದು ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಮುಖಂಡರು ಮಾತನಾಡಿ, 'ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ಮೈಸೂರು ಹಾಗೂ ಚಾಮರಾಜನಗರ ಭಾಗದ ರೈತರಿಗೆ ಬಾಕಿ ಹಣ ನೀಡಿಲ್ಲ. ಸರ್ಕಾರದ ವತಿಯಿಂದ 150 ರೂ. ಹೆಚ್ಚುವರಿ ಹಣವನ್ನೂ ನೀಡಿಲ್ಲ. ಬರಗಾಲದಲ್ಲಿ ರೈತರ ಬೆಳೆ ನಾಶವಾಗಿದ್ದು, ಕನಿಷ್ಠ 25 ಸಾವಿರ ಬರ ಪರಿಹಾರ ನೀಡಬೇಕು. ಸರಿಯಾಗಿ ವಿದ್ಯುತ್ ಒದಗಿಸಬೇಕು' ಎಂದು ಮನವಿ ಮಾಡಿದರು.

> ಡಾ.ಹೆಚ್.ಸಿ.ಮಹದೇವಪ್ಪ ಇದಕ್ಕೆ ಪ್ರತಿಕ್ರಿಯಿಸಿ, 'ರೈತರ ಎಲ್ಲಾ ಬೇಡಿಕೆಗಳ ಕುರಿತು ಜಿಲ್ಲಾಧಿಕಾರಿ ಹಾಗೂ ಸಂಬಂಧಿಸಿದ ಕಾರ್ಖಾನೆಯವರೊಂದಿಗೆ ಸಭೆ ನಡೆಸಿ ಚರ್ಚಿಸಲಾಗಿದೆ. ಜಿಲ್ಲೆಯ ರೈತರ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೂ ತರಲಾಗಿದೆ. ಈ ಎಲ್ಲಾ ವಿಚಾರಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು ಸಮಸ್ಯೆ ಬಗೆಹರಿಸಲು ಕ್ರಮವಹಿಸಲಾಗುವುದು.
> –ಡಾ.ಹೆಚ್.ಸಿ.ಮಹದೇವಪ್ಪ, ಉಸ್ತುವಾರಿ ಸಚಿವ

ಸರ್ಕಾರದ ಮಹತ್ವದ ಐದು ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ಪೈಕಿ 528 ಮಹಿಳೆಯರ ಖಾತೆಗೆ ಹಣ ಬಂದಿಲ್ಲ ಎಂಬ ಮಾಹಿತಿ ಇದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಈಗಾಗಲೇ ಚರ್ಚಿಸಿದ್ದೇನೆ. ಶೀಘ್ರದಲ್ಲೇ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಬರುವಂತೆ ಮಾಡಲಾಗುವುದು ಎಂದು ತಿಳಿಸಿದರು.

ಬಸ್ ಸಂಚಾರಕ್ಕೆ ಕ್ರಮ: ತಾಲೂಕಿನ ಕೆಲವು ಗ್ರಾಮಗಳಿಗೆ ಕೆಎಸ್ಆರ್‌ಟಿಸಿ ಬಸ್ ಸೌಲಭ್ಯವಿಲ್ಲ ಎಂಬ ವಿಷಯದ ಬಗ್ಗೆ ಮಾತನಾಡಿದ ಸಚಿವರು, ತಾಲೂಕಿನ ಹಳ್ಳಿಗಳಲ್ಲಿ ಬಸ್ ಸಂಚಾರಕ್ಕೆ ಈಗಾಗಲೇ ಕ್ರಮವಹಿಸಲಾಗಿದೆ ಬಸ್ ಸಂಚಾರ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗೆ ಸೂಚನೆ ನೀಡಿದ್ದೇನೆ. ಕೆಲವೇ ದಿನಗಳಲ್ಲಿ ಬಸ್‌ಗಳ ನಿಗದಿತ ಸಮಯಕ್ಕೆ ಸಂಚರಿಸಲಿದ್ದು, ಶಾಲಾ, ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

> ಆಡಳಿತ ಚುರುಕುಗೊಳಿಸಿ, ಜನಪರವಾದ ಆಡಳಿತದ ವಾತಾವರಣ ಸೃಷ್ಟಿಸಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು. ಸಂಕಷ್ಟದಲ್ಲಿರುವ ಜನರು ನೇರವಾಗಿ ಬಂದು ಭಾಗಿಯಾಗಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುವುದು.
> – ಡಾ.ಹೆಚ್.ಸಿ.ಎಂ

ಕೆರೆಗಳಿಗೆ ನೀರು: ತಾಲೂಕಿನಲ್ಲಿ ಬರ ಆವರಿಸಿದ್ದು, ಜಾನುವಾರುಗಳಿಗೆ ಕುಡಿಯಲು ನೀರಿನ ಕೊರತೆ ಉಂಟಾಗಬಾರದು ಎಂಬ ಉದ್ದೇಶದಿಂದ ಎಲ್ಲಾ ಕೆರೆಗಳನ್ನು ತುಂಬಿಸುವಂತೆ ನೀರಾವರಿ ಇಲಾಖೆಯ ಎಂಜಿನಿಯರ್‌ಗೆ ಈ ಮೊದಲೇ ಸೂಚಿಸಲಾಗಿತ್ತು. ಅದರಂತೆ ಬಹುತೇಕ ಕೆರೆಗಳಿಗೆ ನೀರು ತುಂಬಿಸಿದ್ದು, ಬಾಕಿ ಉಳಿದಿರುವ ಕೆರೆಗಳಿಗೆ ಕೂಡಲೇ ನೀರು ತುಂಬಿಸುವ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ನಂದಿನಿ, ತಹಶಿಲ್ದಾರ್ ಸುರೇಶಾಚಾರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ಗಾವಡಗೆರೆ ಬಳಿ ತೋಟದ ಮನೆಯಲ್ಲಿ ಚಿರತೆ ಪ್ರತ್ಯಕ್ಷ

ಸೆರೆಗೆ ಅರಣ್ಯಾಧಿಕಾರಿಗಳ ಕ್ರಮ

ಹುಣಸೂರು: ಹುಣಸೂರು ತಾಲೂಕು ಗಾವಡಗೆರೆ ಸಮೀಪದ ಮನುಗನಹಳ್ಳಿಯ ತೋಟದ ಮನೆಯಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಮನುಗನಹಳ್ಳಿಯ ಉಜ್ವಲ್ ಎಂಬುವರಿಗೆ ಸೇರಿದ ತೋಟದ ಮನೆಗೆ ಅಳವಡಿಸಲಾಗಿದ್ದ ಬೇಲಿಯನ್ನು ಭೇದಿಸಿ ಒಳಪ್ರವೇಶಿಸಲು ಚಿರತೆ ಪ್ರಯತ್ನಿಸಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಮೈಸೂರಿನ ರಮಾಬಾಯಿನಗರದ ನಿವಾಸಿ ಉಜ್ವಲ್ ಅವರು ಕಳೆದ 6 ತಿಂಗಳ ಹಿಂದೆ ಮನುಗನಹಳ್ಳಿಯಲ್ಲಿ ಜಮೀನು ಖರೀದಿಸಿ, ಅಲ್ಲಿ ಮನೆ ನಿರ್ಮಿಸಿಕೊಂಡು ಕಳೆದ 4 ತಿಂಗಳಿಂದ ತಾಯಿಯೊಂದಿಗೆ ವಾಸವಿದ್ದಾರೆ. ಮಂಗಳವಾರ ರಾತ್ರಿ ತೋಟದ ಮನೆಯ ನಾಯಿ ಬೊಗಳಿದ್ದರಿಂದ ಎಚ್ಚರಗೊಂಡ ಉಜ್ವಲ್, ಲೈಟ್ ಹಾಕಿದಾಗ ಬೆದರಿ ಚಿರತೆ ಓಡಿ ಹೋಗಿರುವುದನ್ನು ನೋಡಿದ್ದಾರೆ. ನಂತರ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಚಿರತೆ ಬಟ್ಟೆ ಬೇಲಿ ಕಿತ್ತು ಒಳ ಪ್ರವೇಶಿಸಲು ಪ್ರಯತ್ನಿಸಿ, ಲೈಟ್ ಹಾಕಿದಾಗ ಸ್ಥಳದಿಂದ ಓಡಿ ಹೋಗಿರುವುದು ಉಜ್ವಲ್ ಅವರಿಗೆ ಮನವರಿಕೆಯಾಗಿದೆ.

ಈ ವಿಚಾರವನ್ನು ಅವರು ಇಂದು ಸಂಜೆ ಅರಣ್ಯಾಧಿಕಾರಿಗೆ ತಿಳಿಸಿದ್ದು, ಆರ್‌ಎಫ್‌ಓ ನಂದಕುಮಾರ್ ನಿರ್ದೇಶನದ ಮೇರೆಗೆ ಫಾರೆಸ್ಟರ್ ಪ್ಯಾರೇಜಾನ್ ಮತ್ತು ಗಾರ್ಡ್ ರವಿ ಅವರು ತೋಟದ ಮನೆಗೆ ತೆರಳಿ ಪರಿಶೀಲನೆ ನಡೆಸಿದ್ದು, ನಾಳೆ (ಗುರುವಾರ) ತೋಟದಲ್ಲಿ ಚಿರತೆ ಸೆರೆಗಾಗಿ ಬೋನ್ ಇಡುವುದಾಗಿ ತಿಳಿಸಿ, ಬಂದಿದ್ದಾರೆ.

ಗುಂಡ್ಲುಪೇಟೆಯ ಯುವಕ ಕಬಿನಿಯಲ್ಲಿ ಅನುಮಾನಾಸ್ಪದ ಸಾವು

ಬೆಂಗಳೂರಿನಿಂದ ಬರುತ್ತಿದ್ದ ಯುವಕ ಗೆಳೆಯರ ಒತ್ತಾಯದ ಮೇರೆಗೆ ಕಬಿನಿಗೆ ಹೋಗಿ ದುರಂತ

ಹೆಚ್.ಡಿ.ಕೋಟೆ, ನ.29– ಬೆಂಗಳೂರಿನಿಂದ ಹಿಂತಿರುಗುತ್ತಿದ್ದ ಯುವಕ ನೋರ್ವ ಗೆಳೆಯರ ಒತ್ತಾಯದ ಮೇರೆಗೆ ಕಬಿನಿಗೆ ತೆರಳಿ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.



ಗುಂಡ್ಲುಪೇಟೆ ಪಟ್ಟಣದ ನಿವಾಸಿ ಸತೀಶ್ ಅವರ ಪುತ್ರ ಹರ್ಷವರ್ಧನ್ ಅಲಿಯಾಸ್ ಮುತ್ತು(25) ಎಂಬಾತನೇ ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ ಯುವಕನಾಗಿದ್ದು, ಯುವಕನ ತಂದೆ ಆತನ ಗೆಳೆಯರ ಮೇಲೆ ಅನುಮಾನ ವ್ಯಕ್ತಪಡಿಸಿ ಸರಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಈತನ ಗೆಳೆಯರಾದ ಕಿಶೋರ್, ರಾಜೇಶ್, ರವಿ ಅವರುಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮೂಲತಃ ಗುಂಡ್ಲುಪೇಟೆಯ ನಿವಾಸಿಯಾದ ಹರ್ಷವರ್ಧನ್ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಸೋಮವಾರ ಗುಂಡ್ಲುಪೇಟೆಗೆ ಬರುತ್ತಿರುವ ವಿಷಯ ತಿಳಿದ ಆತನ ಸ್ನೇಹಿತರಾದ ಕಿಶೋರ್, ರಾಜೇಶ್ ಮತ್ತು ರವಿ ಅವರು ನೀನು ಗುಂಡ್ಲುಪೇಟೆಗೆ ಹೋಗುವುದು ಬೇಡ, ಸೀದಾ ಕಬಿನಿ ಜಲಾಶಯಕ್ಕೆ ಬಾ ಎಂದು ಕರೆಸಿಕೊಂಡಿದ್ದರು ಎನ್ನಲಾಗಿದೆ. ಕಬಿನಿಗೆ ಆಗಮಿಸಿದ ಹರ್ಷವರ್ಧನ್ ಆತನ ಸ್ನೇಹಿತರಾದ ಕಿಶೋರ್, ರಾಜೇಶ್ ಮತ್ತು ರವಿ ಅವರೊಂದಿಗೆ ಊಟ–ತಿಂಡಿ ಸೇವಿಸಿದ ನಂತರ ಕಬಿನಿ ಹಿನ್ನೀರಿನಲ್ಲಿ ಈಜಲು ನೀರಿಗಿಳಿದಿದ್ದಾರೆ. ಈ ವೇಳೆ ಹರ್ಷವರ್ಧನ್ ನೀರು ಪಾಲಾಗಿದ್ದಾನೆ ಎನ್ನಲಾಗಿದ್ದು, ಈ ಮೂವರು ಭಯದಿಂದ ಯಾರಿಗೂ ವಿಷಯ ಹೇಳದೆ ಗುಂಡ್ಲುಪೇಟೆಗೆ ಹಿಂತಿರುಗಿದ್ದರು ಎನ್ನಲಾಗಿದೆ. ಆದರೆ ಊರಿಗೆ ಬರುತ್ತೇನೆಂದು ಹೇಳಿದ್ದ ಮಗ ಬಾರದಿರುವುದರಿಂದ ಆತಂಕಗೊಂಡು ತಂದೆ ಸತೀಶ್ ಮಂಗಳವಾರ ಸಂಬಂಧಿಕರು ಮತ್ತು ಆತನ ಸ್ನೇಹಿತರನ್ನು ವಿಚಾರಿಸಿದಾಗ ಈ ವಿಚಾರ ಬಯಲಿಗೆ ಬಂದಿತು. ತಕ್ಷಣ ಹರ್ಷವರ್ಧನ್ ತಂದೆ ಸರಗೂರು ಪೊಲೀಸ್ ಠಾಣೆಗೆ ತೆರಳಿ ಗೆಳೆಯರ ಮೇಲೆ ಸಂಶಯ ವ್ಯಕ್ತಪಡಿಸಿ ದೂರು ದಾಖಲಿಸಿದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇಂದು ಜಲಾಶಯದಲ್ಲಿ ಹುಡುಕಾಟ ನಡೆಸಿದಾಗ ಮೃತದೇಹ ಪತ್ತೆಯಾಗಿದ್ದು, ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ತಂದು ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಮುಂದಿನ ಕ್ರಮ ಜರುಗಿಸುವುದಾಗಿ ತಿಳಿಸಿದ್ದಾರೆ.

ನಾಯಕ ಸಮಾಜದ ಸಮುದಾಯ ಭವನ ಜೀರ್ಣೋದ್ಧಾರಕ್ಕೆ 10 ಲಕ್ಷ ರೂ.

ಶಾಸಕ ಅನಿಲ್ ಚಿಕ್ಕಮಾದು ಸನ್ಮಾನ ಸ್ವೀಕರಿಸಿ ಭರವಸೆ



ಸರಗೂರು, ನ.29– ಪಟ್ಟಣದಲ್ಲಿರುವ ನಾಯಕ ಸಮಾಜದ ಸಮುದಾಯ ಭವನ ಜೀರ್ಣೋದ್ಧಾರಕ್ಕೆ 10 ಲಕ್ಷ ರೂ. ಅನುದಾನ ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದ್ದಾರೆ.

ಪಟ್ಟಣದಲ್ಲಿರುವ ನಾಯಕ ಸಮಾಜದ ಸಮುದಾಯ ಭವನದಲ್ಲಿ ಬುಧವಾರ ನಾಯಕ ಸಮಾಜದಿಂದ ತಮಗೆ ಏರ್ಪಡಿಸಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪಟ್ಟಣದಲ್ಲಿ ನೂತನವಾಗಿ ಜಾಗ ಖರೀದಿಸಿ 50 ಲಕ್ಷ ರೂ.ವೆಚ್ಚದಲ್ಲಿ ಸಮಾಜದ ಸಮುದಾಯ ಭವನ ನಿರ್ಮಿಸಬಹುದಿತ್ತು. ಆದರೆ, ನಿವೇಶನದ ಕೊರತೆ ಇದೆ. ಹೀಗಾಗಿ ಸಮುದಾಯ ಭವನದ ಜೀರ್ಣೋದ್ಧಾರಕ್ಕೆ 10 ಲಕ್ಷ ರೂ.ಅನುದಾನವನ್ನು ಜನವರಿಯೊಳಗೆ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುವುದು. ಇದಲ್ಲದೆ ನಾಯಕ ಸಮಾಜದ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸಲಾಗುವುದು ಎಂದು ಅವರು ತಿಳಿಸಿದರು.

ಪರಿಶಿಷ್ಟರಿಗೆ ಮನೆ ಮಂಜೂರಾಗಿಲ್ಲ. ಡಿಸೆಂಬರ್–ಜನವರಿ ಅಂತ್ಯದೊಳಗೆ ಸರಕಾರದಿಂದ ಮನೆ ಮಂಜೂರು ಮಾಡಿಸಿ ಮನೆ ಮಂಜೂರಾತಿ ಆದೇಶ ಪತ್ರವನ್ನು ನೀಡಲಾಗುವುದು. ವೀಳ್ಯದೆಲೆ ತೋಟದ ರಸ್ತೆ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು. ಚಿಕ್ಕದೇವಮ್ಮನ ಬೆಳ್ಳಿ ಉತ್ಸವಮೂರ್ತಿಗೆ ಆರ್ಥಿಕವಾಗಿ ಸಹಾಯ ಮಾಡಲಾಗುವುದು. ಸಮಾಜದ ಜಮೀನಿಗೆ ವೈಯಕ್ತಿಕವಾಗಿ ಬೋರ್‌ವೆಲ್ ಕೊರೆಸಲು ಕ್ರಮವಹಿಸಲಾಗುವುದು ಎಂದು ಅವರು ಹೇಳಿದರು.

ಚಿಕ್ಕದೇವಮ್ಮನ ಬೆಟ್ಟಕ್ಕೆ ಬಾಕಿ ಇರುವ ಮೆಟ್ಟಿಲುಗಳ ಕಾಮಗಾರಿಗೆ 2 ಕೋಟಿ ರೂ. ಮಂಜೂರು ಮಾಡಿಸಿಕೊಡಲಾಗುವುದು ಎಂದರು. ನಾಯಕ ಸಮಾಜದ ಯಜಮಾನ ಚನ್ನಪ್ಪನಾಯಕ, ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿದರು.

ನಾಯಕ ಸಮಾಜದ ಯಜಮಾನ ಚನ್ನಪ್ಪ ನಾಯಕ, ಮಾಜಿ ಯಜಮಾನ ಭೈರನಾಯಕ, ಪಪಂ ಸದಸ್ಯರಾದ ಶ್ರೀನಿವಾಸ್, ನವೀನ್, ಮಾಜಿ ಸದಸ್ಯ ಎಂ.ರವಿಕುಮಾರ್, ಮುಖಂಡರಾದ ಎಸ್.ಎಚ್.ಲಿಂಗರಾಜು, ಎಸ್.ಎಚ್. ರಮೇಶ್, ಉಪ್ಪಾರ ಸಮಾಜದ ಯಜಮಾನರಾದ ಮಲ್ಲೇಶ್, ಎಸ್.ಎಸ್.ಬಸವರಾಜು, ಶೇಷ, ಸೋಮನಾಯಕ, ಲಕ್ಷ್ಮಣನಾಯಕ, ಭೈರನಾಯಕ, ಗಾಯಕ ಮಹೇಶ್, ನಾಯಕ ಸಮಾಜದ ಮುಖಂಡರು, ಮಹಿಳಾ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಇಂದು ಭಕ್ತ ಕನಕದಾಸರ ಜಯಂತ್ಯುತ್ಸವ

ಕೆ.ಆರ್.ನಗರ: ಭಕ್ತ ಕನಕದಾಸರ ಜಯಂತ್ಯುತ್ಸವ ಸಮಾರಂಭವನ್ನು ನ.30ರಂದು ಬೆಳಗ್ಗೆ 10.30ಕ್ಕೆ ತಾಲೂಕು ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದೆ. ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪುರಸಭೆ ಮತ್ತು ಕುರುಬರ ಸಂಘದ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮವನ್ನು ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ.

ಶಾಸಕ ಡಿ.ರವಿಶಂಕರ್ ಅಧ್ಯಕ್ಷತೆ ವಹಿಸಲಿದ್ದು, ಸಂಸದೆ ಸುಮಲತಾ ಅಂಬರೀಶ್, ವಿಧಾನ ಪರಿಷತ್ ಸದಸ್ಯರಾದ ಎಚ್.ವಿಶ್ವನಾಥ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಅಮಿತ್ ವಿ.ದೇವರಹಟ್ಟಿ ಸೇರಿದಂತೆ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಇದಕ್ಕೂ ಮೊದಲು ಚೀರ್ನಹಳ್ಳಿ ರಸ್ತೆಯಲ್ಲಿರುವ ಕನಕಗುರುಪೀಠದಲ್ಲಿ ಕನಕದಾಸರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುತ್ತದೆ.

ಹುಣಸೂರಿಂದ ಕಟ್ಟೆಮಳಲವಾಡಿವರೆಗೆ ತಂಬಾಕು ಬೆಳೆಗಾರರ ಪಾದಯಾತ್ರೆ

ಪರವಾನಗಿ ಹೊಂದಿಲ್ಲದ ಬೆಳೆಗಾರರಿಗೆ ತಂಬಾಕು ಮಾರಲು ಅನುಮತಿಗೆ ಆಗ್ರಹ

ಹುಣಸೂರು, ನ.29– ತಂಬಾಕು ಪರವಾನಗಿ ಹೊಂದಿಲ್ಲದ ರೈತರಿಗೆ(ಕಾರ್ಡ್‌ದಾರರಿಗೆ) ಕೂಡಲೇ ತಂಬಾಕು ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ತಂಬಾಕು ಬೆಳೆಗಾರರ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ (KPRS) ದ ನೇತೃತ್ವದಲ್ಲಿ ಹುಣಸೂರು ಪಟ್ಟಣದಿಂದ ಕಟ್ಟೆ ಮಳಲವಾಡಿಯ ತಂಬಾಕು ಮಾರುಕಟ್ಟೆವರೆಗೆ ಪಾದಯಾತ್ರೆ ನಡೆಸಿದರು.



ನಗರಸಭೆ ಮೈದಾನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಕೆ.ಬಸವರಾಜು ಪಾದಯಾತ್ರೆಗೆ ಚಾಲನೆ ನೀಡಿದರು. ನಂತರ ಕಾರ್ಡ್‌ದಾರರು ನಂತರ ಪಾದಯಾತ್ರೆ ಆರಂಭಿಸಿ ಕೂಡಲೇ ತಂಬಾಕು ಮಾರಾಟ ಮಾಡಲು ಅನುಮತಿ ನೀಡಬೇಕು. ರೈತರಿಗೆ ಮೋಸ ಮಾಡುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಧಿಕ್ಕಾರ, ಮಂಡಳಿಯಲ್ಲಿ ಸಿಗುವ ಸವಲತ್ತುಗಳು ಎಲ್ಲಾ ರೈತರಿಗೂ ಸಿಗಲೇಬೇಕು, ಎಐಕೆಎಸ್ ಜಿಂದಾಬಾದ್ ಕೂಗಿದರು.

ಕಟ್ಟೆಮಳಲವಾಡಿ ಮಾರುಕಟ್ಟೆ ತಲುಪಿದ ಪಾದಯಾತ್ರೆ ತಂಬಾಕು ಮಂಡಳಿಯ ಪ್ರಾದೇಶಿಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಪ್ರಾದೇಶಿಕ ವ್ಯವಸ್ಥಾಪಕರು ಡಿ.15ರೊಳಗೆ ಕಾರ್ಡ್‌ದಾರರಿಗೆ ಅನುಮತಿ ಸಿಗುವ ಸಂಭವವಿದೆ ಎಂದು ಹಿರಿಯ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿಸಿದರು. ಇದಕ್ಕೊಪ್ಪದ ರೈತರು ನಿರ್ದಿಷ್ಟ ದಿನಾಂಕ ತಿಳಿಸುವಂತೆ ಒತ್ತಾಯಿಸಿದರು ನಂತರ ರೈತರು ಡಿ.15ರೊಳಗೆ ಅವಕಾಶ ಸಿಗದೇ ಇದ್ದರೆ ಆರ್‌ಎಂ ಕಚೇರಿ ಮುತ್ತಿಗೆಹಾಕುವುದಾಗಿ ಎಚ್ಚರಿಕೆ ನೀಡಿದರು.

ನಂತರ ನಡೆದ ಸಭೆಯಲ್ಲಿ ಸಮಿತಿ ಅಧ್ಯಕ್ಷ ಗೋವಿಂದಯ್ಯ ಮಾತನಾಡಿ, ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಬಂದರೂ ನಮ್ಮ ಸಮಸ್ಯೆಗಳು ಬಗೆಹರಿದಿಲ್ಲ. ಹಾಗಾಗಿ ಒಗ್ಗಟ್ಟಾಗಿ ಹೋರಾಟ ಮಾಡಬೇಕೆಂದು ಹೇಳಿದರು. ತಂಬಾಕು ಬೆಳೆಯುವ ಸಂದರ್ಭದಲ್ಲಿ ಯಾವುದೇ ಸವಲತ್ತು ನೀಡುವುದಿಲ್ಲ ಸಾಲ ಮಾಡಿ ತಂಬಾಕು ಬೆಳೆಯುವ ನಮಗೆ ಸೂಕ್ತ ಸಮಯದಲ್ಲಿ ಮಾರಾಟ ಮಾಡಲು ಅನುಮತಿ ನೀಡದೆ ಅನ್ಯಾಯ ಮಾಡಲಾಗುತ್ತಿದೆ. ಎಲ್ಲರಿಗೂ ತಕ್ಷಣ ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಒತ್ತಾಯಿಸಿದರು.

ಪ್ರಧಾನ ಕಾರ್ಯದರ್ಶಿ ವಿ.ಬಸವರಾಜ ಕಲ್ಕುಣಿಕೆ ಮಾತನಾಡಿ, ಪ್ರತಿವರ್ಷ ತಂಬಾಕು ಮಾರಾಟ ಮಾಡಲು ಹೆಣಗಾಡಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಜನಪ್ರತಿನಿಧಿಗಳು ನಮ್ಮ ಬೇಡಿಕೆಗಳ ಬಗ್ಗೆ ಗಮನ ಹರಿಸುತ್ತಿಲ್ಲ. ನಮ್ಮ ಬೇಡಿಕೆಗಳು ಈಡೇರುವರೆಗೂ ಹೋರಾಟ ನಿಲ್ಲುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನ ಹರಿಸಿ ತಂಬಾಕು ಮಾರಾಟ ಮಾಡಲು ತಕ್ಷಣ ಅನುಮತಿ ಕೊಡಿಸಬೇಕೆಂದು ಒತ್ತಾಯಿಸಿದವರು.

ಜಿಲ್ಲಾಧ್ಯಕ್ಷ ಚಿಕ್ಕಣ್ಣಗೌಡ, ಕಾರ್ಯದರ್ಶಿ ಜಗದೀಶ್ ಸೂರ್ಯ, ತಾಲೂಕು ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಪುಟ್ಟರಾಜ, ಹಳ್ಳದಕೊಪ್ಪಲು ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ಬೆಳತೂರು ವೆಂಕಟೇಶ್, ನಗರ ಕಾರ್ಮಿಕ ಸಂಘಟನೆ ಅಧ್ಯಕ್ಷ ಚಂದ್ರೇಗೌಡ, ಕಾರ್ಯದರ್ಶಿ ಹರೀಶ್, ಉಪಾಧ್ಯಕ್ಷರಾದ ಶಣ್ಮುಖ, ಕಲ್ಲಳ್ಳಿ ಚಂದ್ರಶೇಖರ್, ಮೂಡಲಕೊಪ್ಪಲು ಚಂದ್ರೇಗೌಡ, ಕುಪ್ಪೆ ಮುದ್ದನಹಳ್ಳಿ ಸ್ವಾಮಿಗೌಡ, ಮುಖಂಡರಾದ ಕಾಳೆಗೌಡನಕೊಪ್ಪಲು ಲೋಕೇಶ್, ಉದ್ದೂರು ನಟರಾಜು, ಹೊಸಕೋಟೆ ರಾಮಕೃಷ್ಣೇಗೌಡ, ಮಂಜಮ್ಮ, ಮಹದೇವಮ್ಮ, ನಟರಾಜು, ಬಸವರಾಜಗೌಡ, ಯಮಗುಂಭ ನಿಂಗರಾಜು, ಶಿವಸ್ವಾಮಿ, ಬಸವರಾಜೇಗೌಡ, ಚಂದ್ರಪ್ಪ ಮುಂತಾದವರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗರಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	2 ಪ್ರದರ್ಶನಗಳು
ರಾಜಕಮಲ್	
ಆದಿಕೇಶವ (ತೆ)	4 ಪ್ರದರ್ಶನಗಳು
ಸಂಗಂ	
ಗರಡಿ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರಡಿ (ಕ)	4 ಪ್ರದರ್ಶನಗಳು
ಪ್ರಭಾ	
ಟಗರು ಪಲ್ಯ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಿಂಗರಾಜುಗೆ ಪಿಎಚ್.ಡಿ ಪದವಿ



ಮೈಸೂರು: ಡಾ. ಪಿ. ಪದ್ಮಾವತಿ ಅವರ ಮಾರ್ಗದರ್ಶನದಲ್ಲಿ ನಿಂಗರಾಜು ಅವರು ಜೈನಾಲಜಿ ಮತ್ತು ಪ್ರಾಕೃತಿಕ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹಾಲಿನ ಪುಡಿ ಪ್ಯಾಕೆಟ್ ಮಾರಾಟ ಮಾಡಿ ಸಿಕ್ಕಿ ಬಿದ್ದು

ಅಮಾನತುಗೊಂಡ ಅಂಗನವಾಡಿ ಕಾರ್ಯಕರ್ತೆಯರ ಮರು ನೇಮಕಕ್ಕೆ ಸಂಚು

ನಂಜನಗೂಡು, ನ.29– ತಾಲೂಕಿನ ಹಗಿನವಾಳು ಗ್ರಾಮದ ಐದು ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು ಹಾಲಿನ ಪುಡಿಗಳ ಪ್ಯಾಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಬಗ್ಗೆ ತನಿಖೆಯಲ್ಲಿ ರುಜುವಾತಾಗಿ ಅವರನ್ನು ಸೇವೆಯಿಂದ ಅಮಾನತುಗೊಳಿಸಿದ್ದು, ಅಮಾನತುಗೊಂಡ ಐವರು ಕಾರ್ಯಕರ್ತೆಯರನ್ನು ಮತ್ತೆ ಅದೇ ಕೆಲಸಕ್ಕೆ ನಿಯೋಜನೆ ಮಾಡಲು ಸಂಚು ನಡೆದಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಆರೋಪಿಸಿದ್ದಾರೆ.

ಕಳೆದ ಒಂದು ವರ್ಷದ ಹಿಂದೆ ಹಗಿನವಾಳು ಗ್ರಾಮದ ಐದು ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರು ಬಾಣಂತಿಯರಿಗೆ ನೀಡಲಾಗುವ ಹಾಲಿನ ಪುಡಿಯ ಪ್ಯಾಕೆಟ್‌ಗಳನ್ನು ಮಧ್ಯವರ್ತಿಗಳ ಮೂಲಕ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಬಗ್ಗೆ ದಾಖಲೆ ಸಮೇತ ಸಿಕ್ಕಿ ಬಿದ್ದಿದ್ದರು ಎಂದರು.

ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅವರನ್ನು ಅಮಾನತುಗೊಳಿಸಿದರು. ಆದರೆ ವರ್ಷ ಕಳೆದರೂ ಆ ಐದು ಅಂಗನವಾಡಿ ಕೇಂದ್ರಗಳಿಗೆ ಹೊಸದಾಗಿ ಕಾರ್ಯಕರ್ತೆಯರನ್ನು ನೇಮಕ ಮಾಡಲು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುಂದಾಗುತ್ತಿಲ್ಲ. ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಹೊಸದಾಗಿ ಅರ್ಜಿ ಕರೆದು ಕಾರ್ಯಕರ್ತೆಯರನ್ನು ನಿಯೋಜಿಸಲಾಗುತ್ತಿದೆ. ಆದರೆ ಈ ಕೇಂದ್ರಗಳಿಗೆ ಹೊಸದಾಗಿ ಅರ್ಜಿ ಕರೆಯುತ್ತಿಲ್ಲ. ಅಮಾನತುಗೊಂಡಿರುವ ಐವರು ಕಾರ್ಯಕರ್ತೆಯರನ್ನೇ ಮರು ನೇಮಕ ಮಾಡುವ ಒಳಸಂಚು ನಡೆಯುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದ್ದಾರೆ.

ಖಾಲಿ ಇರುವ ಆ 5 ಅಂಗನವಾಡಿ ಕೇಂದ್ರಗಳಿಗೆ ಹೊಸದಾಗಿ ಅರ್ಜಿ ಕರೆದು ಕಾರ್ಯಕರ್ತೆರನ್ನು ಆಯ್ಕೆ ಮಾಡಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ದಸಂಸ ತಾಲೂಕು ಸಂಚಾಲಕ ಜೆ.ಶಿವಮೂರ್ತಿ, ಖಜಾಂಚಿ ಪ್ರಭುಸ್ವಾಮಿ, ರಾಮಸ್ವಾಮಿ, ಚನ್ನಮಾದಪ್ಪ, ಪ್ರಕಾಶ್ ಹಾಜರಿದರು.

ಸಣ್ಣನಾಯಕ ನಿಧನ



ಭೇರ್ಯ: ಸಾಲಿಗ್ರಾಮ ಪಟ್ಟಣದ ಸವಡೆ ಸಣ್ಣ ನಾಯಕ(83) ಮಂಗಳವಾರ ರಾತ್ರಿ ನಿಧನರಾದರು. ಅವರಿಗೆ ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ತಾಲೂಕಿನ ರಾಂಪುರ ಗ್ರಾಮದ ಅವರ ಜಮೀನಿನಲ್ಲಿ ನೆರವೇರಿತು.

ಕೌಟುಂಬಿಕ ಕಲಹ: ಮಗನನ್ನೇ ಕೊಂದ ತಂದೆ

ಮೈಸೂರು,ನ.29(ಆರ್‌ಕೆ)–ಸದಾ ಕುಡಿದು ಬಂದು ಗಲಾಟೆ ಮಾಡುತ್ತಾ ಮನೆಯ ನೆಮ್ಮದಿ ಹಾಳು ಮಾಡಿದ್ದ ಮಗನನ್ನು ತಂದೆಯೇ ಇರಿದು ಹತ್ಯೆ ಮಾಡಿದ ಘಟನೆ ಮೈಸೂರಿನ ಬನ್ನಿಮಂಟಪ 'ಸಿ' ಬಡಾವಣೆಯಲ್ಲಿ ನಡೆದಿದೆ.

ಬಟ್ಟೆ ವ್ಯಾಪಾರಿ ಸಯ್ಯದ್ ಅಸ್ಲಂ(51), ತಮ್ಮ ಮಗ ಸಯ್ಯದ್ ಅವೇಜ್(23)ನನ್ನು ಇಂದು ಮುಂಜಾನೆ ಹತ್ಯೆಗೈಯ್ದು ಬೆಳಗ್ಗೆ ನರಸಿಂಹ ರಾಜ ಠಾಣೆ ಪೊಲೀಸರಿಗೆ ಶರಣಾಗಿದ್ದಾರೆ.

ವಿವರ: ಸಯ್ಯದ್ ಅಸ್ಲಂ ಅವರು ಬನ್ನಿಮಂಟಪದಲ್ಲಿ ಬಟ್ಟೆ ಅಂಗಡಿ ನಡೆಸುತ್ತಿದ್ದಾರೆ. ಇವರ ಮಗ ಸಯ್ಯದ್ ಅವೇಜ್ ವೆಲ್ಡಿಂಗ್ ಕೆಲಸ ಮಾಡುವುದಾಗಿ ಸದಾ ಕಾಲ ಕುಡಿದು ಸುತ್ತಾಡುತ್ತಿದ್ದ. ಮನೆಗೆ ಬಂದಾಗಲೆಲ್ಲಾ ಗಲಾಟೆ ಮಾಡಿ ನೆಮ್ಮದಿ ಕೆಡಿಸುತ್ತಿದ್ದ ಎಂದು ಹೇಳಲಾಗಿದೆ. ಈತನ ವರ್ತನೆಯಿಂದ ತೀವ್ರವಾಗಿ ಬೇಸರಗೊಂಡಿದ್ದರೂ, ಸಯ್ಯದ್ ಅಸ್ಲಂ ಅವರು ಸಹಿಸಿಕೊಂಡೇ ಇದ್ದರು.

ಆದರೆ ಮಂಗಳವಾರ ಸಯ್ಯದ್ ಅಸ್ಲಂ ಪತ್ನಿ ಇಸ್ರತ್ ಸಲ್ಮಾ ಅವರು ಹಜ್‌ಗೆ ಪ್ರಯಾಣ ಬೆಳೆಸಿದ್ದರು. ಸಯ್ಯದ್ ಅವೇಜ್ ಈ ವೇಳೆ ತನ್ನ ತಾಯಿಯ ಮೊಬೈಲ್ ಅನ್ನು ಕೊಂಡೊಯ್ದುಬಿಟ್ಟಿದ್ದ. ಹಜ್‌ಗೆ ಹೋಗುತ್ತಿರುವ ಪತ್ನಿಗೆ ಮೊಬೈಲ್ ಬೇಕಾಗಿದ್ದು, ಎಷ್ಟು ಬಾರಿ ಕರೆ ಮಾಡಿದರೂ ಮಗ ಕರೆ ಸ್ವೀಕರಿಸಿಲ್ಲ. ಕೊನೆಗೆ ಅಸ್ಲಂ ಅವರು ತನ್ನ ಮೊಬೈಲ್ ಅನ್ನೇ ಪತ್ನಿಗೆ ಕೊಟ್ಟು ಸಮಾಧಾನಪಡಿಸಿ ಮಂಗಳವಾರ ರಾತ್ರಿ ಬೆಂಗಳೂರಿನ ಬಸ್ ಹತ್ತಿಸಿ ಬಂದಿದ್ದರು. ಇಸ್ರತ್ ಸಲ್ಮಾ ಅವರು ಇಂದು ಬೆಂಗಳೂರಿನಿಂದ ಹಜ್‌ಗೆ ತೆರಳಬೇಕಿತ್ತು.

ನಿನ್ನೆ ತಾಯಿಯ ಮೊಬೈಲ್ ಕೊಂಡೊಯ್ದಿದ್ದ ಮಗ ಇಂದು ಮುಂಜಾನೆ 2.30ರ ಸುಮಾರಿನಲ್ಲಿ ಪಾನಮತ್ತನಾಗಿ ಬಾಗಿಲು ಬಡಿದಾಗ ಅಸ್ಲಂ ಅವರ ಪಿತ್ತ ನೆತ್ತಿಗೇರಿತ್ತು.

ಪೊಲೀಸರಿಗೆ ಶರಣು

ಬಾಗಿಲು ತೆರೆಯುತ್ತಿದ್ದಂತೆಯೇ ಆತನ ಮೇಲೆ ಕೂಗಾಡಲು ಆರಂಭಿಸಿದ್ದರು. ಗಲಾಟೆ ಮಾಡುವುದನ್ನೇ ಕಾಯಕವಾಗಿಸಿಕೊಂಡಿದ್ದ ಮಗ ಅಸ್ಲಂ ಅವರನ್ನು ಕೊಲ್ಲುವುದಾಗಿ ಚಾಕು ತೋರಿಸಿ ಕೂಗಾಡಿದಾಗ ಮತ್ತಷ್ಟು ಆವೇಶಗೊಂಡ ಅಸ್ಲಂ, ಅಡಿಗೆ ಮನೆಗೆ ತೆರಳಿ ಚಾಕು ತಂದು ಮಗನ ಕುತ್ತಿಗೆ ಭಾಗಕ್ಕೆ ಹಲವು ಬಾರಿ ಇರಿದು ಕೊಂದುಬಿಟ್ಟರು. ನಂತರ ಮಗನನ್ನು ಕೊಂದ ವಿಷಯವನ್ನು ಪತ್ನಿಗೆ ಕರೆ ಮಾಡಿ ತಿಳಿಸಿ, ಮಗನ ಶವದ ಪಕ್ಕದಲ್ಲೇ ಕುಳಿತಿದ್ದರು ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಇಸ್ರತ್ ಸಲ್ಮಾ ಅವರು ಹಜ್ ಪ್ರಯಾಣವನ್ನು ಮೊಟಕುಗೊಳಿಸಿ, ಮೈಸೂರಿಗೆ ಹಿಂತಿರುಗಿದ್ದಾರೆ. ಅವರು ಬಂದ ನಂತರ ಸಯ್ಯದ್ ಅಸ್ಲಂ ನರಸಿಂಹರಾಜ ಠಾಣೆಗೆ ತೆರಳಿ ಶರಣಾಗಿದ್ದಾರೆ. ಈ ಸಂಬಂಧ ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಪ್ರಕರಣ ದಾಖಲಿಸಿಕೊಂಡು ಸಯ್ಯದ್ ಅಸ್ಲಂನನ್ನು ಬಂಧಿಸಿ, ನ್ಯಾಯಾಲಯಕ್ಕೆ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿದೆ

ಉಗ್ರರ ವಿರುದ್ಧದ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಪ್ರಾಂಜಲ್, ಇತರರಿಗೆ ಶ್ರದ್ಧಾಂಜಲಿ



ಮೈಸೂರು, ನ.29(ಎಂಕೆ)– ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆ ಬಾಜಿ ಮಾಲ್ ಅರಣ್ಯ ಪ್ರದೇಶದಲ್ಲಿ ಇತ್ತೀಚೆಗೆ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಹಾಗೂ ಇತರೆ ಹುತಾತ್ಮ ಯೋಧರಿಗೆ ಮೈಸೂರು ಕನ್ನಡ ವೇದಿಕೆ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಅಗ್ರಹಾರ ವೃತ್ತದಲ್ಲಿ ಜಮಾವಣೆಗೊಂಡ ವೇದಿಕೆ ಪದಾಧಿಕಾರಿಗಳು ಕ್ಯಾ.ಎಂ.ವಿ.ಪ್ರಾಂಜಲ್ ಅವರ ಭಾವಚಿತ್ರ ಹಿಡಿದು ಮೊಂಬತ್ತಿ ಬೆಳಗಿಸಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ಈ ವೇಳೆ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಉಪಾಧ್ಯಕ್ಷ ನಾಲಾಬೀದಿ ರವಿ, ಪದಾಧಿಕಾರಿಗಳಾದ ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಕಾವೇರಮ್ಮ, ಸಿದ್ದಪ್ಪ, ಗೋವಿಂದರಾಜು, ಪ್ಯಾಲೇಸ್ ಬಾಬು, ಗೋಪಿ, ಸ್ವಾಮಿ, ಹರೀಶ್ ಮತ್ತಿತರರಿದ್ದರು.

CHANGE OF NAME

I Kenneth Anthony Residing at H/N 395/C/F1, Tembim, Camurlim south Goa, Goa-403718 have Changed my name in Front of notary seetharam C.R on 28.11.2023 as Kenneth Anthony SA and my Mother's Name From Rita jenese to Rita Jerome SA and My Father's name: From Jerome to Jerome Anthony SA.

Sd/- Kenneth Anthony SA

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 07/2023–24 ದಿನಾಂಕ: 28–11–2023

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು 2023–24ನೇ ಸಾಲಿನ ವಿವಿಧ ಇಲಾಖೆ ಲೆಕ್ಕಶೀರ್ಷಿಕೆಯಲ್ಲಿ ಕರೆದಿರುವ ಕಾಮಗಾರಿಗಳನ್ನು **KW-1 & KW-2 (Standard Tender Document)** ಪ್ರಕಾರ **KPPP** ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು **KTPP Act 1999 and KTPP Rule 2000** ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ಏಕ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 50.00 ಲಕ್ಷಗಳ ಒಟ್ಟು 03 ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : 01–12–2023. ಕೊನೆಯ ದಿನಾಂಕ: 08–12–2023 ಸಂಜೆ 17.00 ಗಂಟೆಯ ವರೆಗೆ. ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11–12–2023. ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು **KPPP website www.kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226– 223019ಕ್ಕೆ ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:247:2023–24.